19 February 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಗಿಡಕ್ಕೆ ನೀರು ಹಾಕಿದಂತೆ, ಮನಸ್ಸಿಗೆ ಒಳ್ಳೆ ಯೋಚನೆ ನೀಡಿದರೆ, ಆಗಲೇ ಜೀವನ ಎಂಬ ಮರ ಸುಂದರ ಹಣ್ಣುಗಳನ್ನು ನೀಡುತ್ತದೆ!

-ಸ್ನೇಹಾ ಆನಂದ್

info.varthaman@gmail.com


ವಿವಾದಿತ ಸ್ಥಳದಲ್ಲೇ ನಾಮಫಲಕ ಅಳವಡಿಸಲು ಜಿಲ್ಲಾಧಿಕಾರಿ ಸೂಚನೆ ಪುಟ ಸಂ. 2


ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಶಿಕ್ಷಣವೇ ಪ್ರಬಲವಾದ ಅಸ್ತ್ರ: ಮಂಜು ಪುಟ ಸಂ. 3


ಒಳ ಮೀಸಲಾತಿ ರೋಸ್ಟರ್ ಬಿಂದು ಪದ್ಧತಿ ಹಿಂಪಡೆಯಲು ಮಂಜುನಾಥ್ ಆಗ್ರಹ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 102 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3


# ಮಲೆ ಮಹದೇಶ್ವರ ಬೆಟ್ಟದಲ್ಲಿ ವಿಜೃಂಭಣೆಯ ರಥೋತ್ಸವ


## ಲಕ್ಷಾಂತರ ಮಂದಿ ಭಕ್ತರು ಭಾಗಿ । ಮುಗಿಲು ಮುಟ್ಟಿದ ಉಘೇ ಮಾದಪ್ಪ... ಜಯಘೋಷ

**ಚಾಮರಾಜನಗರ:** ಪ್ರಸಿದ್ಧ ಯಾತ್ರಾಸ್ಥಳ ಮಲೆ ಮಹದೇಶ್ವರ ಬೆಟ್ಟದಲ್ಲಿ ಮಹಾಶಿವರಾತ್ರಿ ಅಂಗವಾಗಿ ಬುಧವಾರ ವಿಜೃಂಭಣೆಯಿಂದ ರಥೋತ್ಸವ ಜರುಗಿತು. ಲಕ್ಷಾಂತರ ಭಕ್ತರು ಭಾಗವಹಿಸಿದ್ದರು.

ರಾಜ್ಯದ ನಾನಾ ಭಾಗ ಹಾಗೂ ತಮಿಳುನಾಡಿನಿಂದಲೂ ಆಗಮಿಸಿದ್ದ ಲಕ್ಷಾಂತರ ಮಂದಿ ಭಕ್ತರು ಉಘೇ ಮಾದಪ್ಪ, ಉಘೇ ಮಾದಪ್ಪ... ಜಯಘೋಷಗಳನ್ನು ಕೂಗಿದರು. ತೇರಿಗೆ ಹಣ್ಣು-ಜವನ ಎಸೆದು ಪ್ರಾರ್ಥನೆ ಸಲ್ಲಿಸಿದರು.

ರಥೋತ್ಸವದ ಅಂಗವಾಗಿ ಬುಧವಾರ ಮುಂಜಾನೆಯಿಂದಲೇ ಮಲೆ ಮಹದೇಶ್ವರ ಸ್ವಾಮಿಗೆ ಅಲಂಕಾರ ಮಾಡಲಾಗಿತ್ತು. ದೇವಾಲಯಕ್ಕೆ ಹೂವಿನ ಅಲಂಕಾರ ಮಾಡಲಾಗಿತ್ತು. ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಶುಭ ಲಗ್ನದಲ್ಲಿ ಮಹದೇಶ್ವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.





ದೇಗುಲದ ಮುಖ್ಯದ್ವಾರದ ಆವರಣದಿಂದ ಸತ್ತಿಗೆ ಸೂರಪಾನಿ ಛತ್ರಿ, ಚಾಮರ, ನಂದಿಧ್ವಜ ಹಾಗೂ ಮಂಗಳ ವಾದ್ಯದೊಂದಿಗೆ ತೇರನ್ನು ಎಳೆಯಲಾಯಿತು. ಹುಲಿ ವಾಹನ, ಬಸವ ವಾಹನ ಹಾಗೂ ರುದ್ರಾಕ್ಷಿ ವಾಹನೋತ್ಸವ ನಡೆಯಿತು. ವೀರಗಾಸೆ ಕುಣಿತ ಭಕ್ತಾದಿಗಳ ಗಮನ ಸೆಳೆಯಿತು. ವೀರಗಾಸೆ ಸೇರಿದಂತೆ ಜಾನಪದ ಕಲಾತಂಡಗಳು ಕಣ್ಮನ ಸೆಳೆದವು. ತಮಿಳುನಾಡು ಹಾಗೂ ರಾಜ್ಯದ ವಿವಿಧೆಡೆಯಿಂದ ಲಕ್ಷಾಂತರ ಮಂದಿ ಭಕ್ತರು ಜಾತ್ರೆಗೆ ಆಗಮಿಸಿ ಕಳೆದ 5 ದಿನಗಳಿಂದ ಕ್ಷೇತ್ರದಲ್ಲೇ ವಾಸ್ತವ್ಯ ಹೂಡಿದ್ದರು.

# ಸಫಾರಿಗೆ ಸರ್ಕಾರದ 'ಗ್ರೀನ್ ಸಿಗ್ನಲ್'

## ಇಂದಿನಿಂದ ನಾಗರಹೊಳೆ, ಬಂಡೀಪುರದಲ್ಲಿ ಸಫಾರಿ ಪುನರ್ ಆರಂಭ

**ಬೆಂಗಳೂರು:** ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯ ನಾಗರಹೊಳೆ ಮತ್ತು ಬಂಡೀಪುರದಲ್ಲಿ ನಾಳೆ ಫೆ.19ರಿಂದ ಸಫಾರಿ ಪುನರ್ ಆರಂಭಕ್ಕೆ ರಾಜ್ಯ ಸರ್ಕಾರ ಗ್ರೀನ್ ಸಿಗ್ನಲ್ ಕೊಟ್ಟಿದೆ. ಮಾನವ- ವನ್ಯಜೀವ ಸಂಘರ್ಷ ಹಿನ್ನೆಲೆಯಲ್ಲಿ ಕಳೆದ ನ.7ರಿಂದ ಸಫಾರಿಯನ್ನು ಬಂದ್ ಮಾಡಲಾಗಿತ್ತು.

ಅಕ್ಟೋಬರ್ ತಿಂಗಳಲ್ಲಿ ನಾಗರಹೊಳೆ, ಬಂಡೀಪುರದಲ್ಲಿ ಹುಲಿ ದಾಳಿಯಿಂದ ಅನೇಕ ಜನರು ಸಾವನ್ನಪ್ಪಿದ್ದರು. ನಮ್ಮ ಸರ್ಕಾರದ ಆದ್ಯತೆ ಮಾನವ ಜೀವ. ಯಾವುದೇ ಜೀವಕ್ಕೆ ಹಾನಿಯಾಗಬಾರದು. ಹೀಗಾಗಿ ಸದ್ಯಕ್ಕೆ ರಾಜ್ಯ ಸರ್ಕಾರ ಕೇವಲ ಶೇ.50ರಷ್ಟು ಸಫಾರಿ ಪ್ರಾರಂಭಕ್ಕೆ ಅನುಮತಿ ನೀಡಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ನಾನು ಅರಣ್ಯ ಸಚಿವ ಆದ ಮೇಲೆ ಮಾನವ- ಪ್ರಾಣಿ ಸಂಘರ್ಷ ತಡೆಗೆ ಅನೇಕ ಕ್ರಮ ಕೈಗೊಂಡಿದ್ದೇವೆ. ಆದರೂ ಪ್ರತಿ ವರ್ಷ 45-50 ಜನ ಸಾಯುತ್ತಿದ್ದಾರೆ. ಮತ್ತೆ ನಾಗರಹೊಳೆ, ಬಂಡೀಪುರದಲ್ಲಿ ನಾಳೆಯಿಂದ (ಫೆ.19) ಸಫಾರಿ ಪುನರಾರಂಭ ಮಾಡಲಾಗುತ್ತಿದೆ ಎಂದು ತಿಳಿಸಿದರು.




ಸಫಾರಿ ಸಮಯವನ್ನು 8 ಗಂಟೆಯಿಂದ ಸಂಜೆ 5 ಗಂಟೆಗೆ ಇಳಿಕೆ ಮಾಡಲಾಗಿದೆ. ಈ ಮೊದಲು ಬಳಕೆ ಮಾಡ್ತಿದ್ದ ಕೇವಲ 50ರಷ್ಟು ವಾಹನ ಬಳಕೆಗೆ ನಿರ್ಧರಿಸಲಾಗಿದೆ. ಬಂಡೀಪುರದಲ್ಲಿ 8 ಗಂಟೆಯಿಂದ 5 ಗಂಟೆಗೆ ಸಫಾರಿ ಇಳಿಕೆ ಮಾಡಲಾಗಿದೆ. ಸುಂಕದಕಟ್ಟೆಯಲ್ಲಿ 6 ಗಂಟೆ ಹಾಗೂ ನಾಗರಹೊಳೆಯಲ್ಲಿ 4 ಗಂಟೆ ಕಾಲ ಮಾತ್ರ ಸಫಾರಿಗೆ ಪ್ರಥಮ ಹಂತದಲ್ಲಿ ಅನುಮತಿ ನೀಡಲಾಗಿದೆ ಎಂದು ತಿಳಿಸಿದರು.

ಸಫಾರಿ ಬಗ್ಗೆ ವರದಿ ನೀಡಲು ತಾಂತ್ರಿಕ ಸಮಿತಿ ರಚನೆ ಮಾಡಿದ್ದೆವು. ಜ.2ರಂದು ಸಿಎಂ ಸಭೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೆವು. ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಪುಟ 2ಕ್ಕೆ

### 20 ಕೋಟಿ ಆದಾಯ

ಸಫಾರಿಯಿಂದ ವಾರ್ಷಿಕ 20 ಕೋಟಿ ರೂ. ಆದಾಯ ಬರುತ್ತಿದೆ. ಹೋಮ್ ಸ್ಟೇಗಳು, ರೆಸಾರ್ಟ್‌ಗಳು ಕಂದಾಯ ಇಲಾಖೆಯ ಅಧೀನದಲ್ಲಿ ಬರುತ್ತವೆ. ಸದ್ಯಕ್ಕೆ ಸುತ್ತಲಿನ ರೆಸಾರ್ಟ್, ಹೋಮ್ ಸ್ಟೇಗಳು, ಕ್ಯಾಂಪ್ ಫೈರ್ ನಿರ್ಬಂಧಕ್ಕೆ ಸೂಚನೆ ನೀಡಲಾಗಿದೆ. ಸಿಎಂ ನೇತೃತ್ವದಲ್ಲಿ ಈ ಬಗ್ಗೆ ಸಭೆ ಮಾಡಿ, ಮುಂದಿನ ದಿನಗಳಲ್ಲಿ ನಿರ್ಧಾರ ಮಾಡ್ತೀವಿ ಎಂದು ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.



ವನ್ಯಜೀವಿ ದಾಳಿಯಿಂದ ಒಳಗಾದವರ ಸಂಪೂರ್ಣ ಚಿಕಿತ್ಸೆ ವೆಚ್ಚ ಇಲಾಖೆ ಭರಿಸ ಪುಟ 2ಕ್ಕೆ

# ನಾಳೆಯಿಂದ ಸಾರಿಗೆ ಮುಷ್ಕರ

**ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ: ಇಂದು ಬೆಂಗಳೂರು ಚಲೋ**

**ಬೆಂಗಳೂರು:** ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರು ಫೆ.20ರಿಂದ ಮುಷ್ಕರಕ್ಕೆ ಮುಂದಾಗಿದ್ದಾರೆ. ಫೆ.19ರಂದು ಬೆಂಗಳೂರು ಚಲೋ ಕೈಗೊಳ್ಳಲಿದ್ದಾರೆ. ಫ್ರೀಡಂ ಪಾರ್ಕ್ ನಲ್ಲಿ ಪ್ರತಿಭಟನೆ ನಡೆಸಲಿದ್ದಾರೆ.

ಸರ್ಕಾರ ಸ್ಪಂದಿಸದಿದ್ದರೆ ಗುರುವಾರ ಸಂಜೆಯಿಂದಲೇ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್ ಸಂಚಾರದಲ್ಲಿ ವ್ಯತ್ಯಯ ಆಗಲಿದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿ 4 ನಿಗಮದ ನೌಕರರು ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ. ನಾಳೆ ಸಂಜೆ 4 ಗಂಟೆವರೆಗೆ ಸರ್ಕಾರಕ್ಕೆ ಡೆಡ್‌ಲೈನ್ ನೀಡಲಾಗಿದೆ. ಬೇಡಿಕೆ ಈಡೇರಿಸಲು ನಿರ್ಣಯ ಕೈಗೊಳ್ಳದಿದ್ದರೆ ಸರ್ಕಾರಿ ಬಸ್ ಗಳ ಸಂಚಾರ ಬಂದ್ ಆಗಲಿದೆ. ಸರ್ಕಾರದಿಂದ ಅಧಿಕೃತ ನಿರ್ಧಾರ ಬಾರದಿದ್ದರೆ ಬಂದ್ ಮಾಡುವುದಾಗಿ ಸಾರಿಗೆ ನೌಕರರು ಎಚ್ಚರಿಸಿದ್ದಾರೆ. ಗುರುವಾರ ಸಂಜೆ ಬಳಿಕ ಬಸ್ ಸಂಚಾರ ನಿಲ್ಲಿಸಲು ನೌಕರರು ನಿರ್ಧರಿಸಲಿದ್ದಾರೆ. ಪುಟ 2ಕ್ಕೆ

# ಪೌರಕಾರ್ಮಿಕರಿಗೆ ಹೈಜಿನ್ ಕಿಟ್ ವಿತರಣೆ



**ಮೈಸೂರು:** ಮೈಸೂರು ಮಹಾನಗರ ಪಾಲಿಕೆ ವತಿಯಿಂದ ನಗರದ ಪುರಭವನದಲ್ಲಿ ಸ್ವಚ್ಛತೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ ಎಂಬ ಧ್ಯೇಯವಾಕ್ಯದೊಂದಿಗೆ ಬುಧವಾರ ಸ್ವಚ್ಛ ಶೌಚಾಲಯ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ಮತ್ತು ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಪಾಲಿಕೆಯ ಶೌಚಾಲಯಗಳ ನಿರ್ವಹಣೆ ಮಾಡುತ್ತಿರುವ ಕಾರ್ಮಿಕರಿಗೆ ಹೈಜಿನ್ ಕಿಟ್ ಗಳನ್ನು ವಿತರಿಸುವ ಮೂಲಕ ಅವರ ಆರೋಗ್ಯ ಮತ್ತು ಸುರಕ್ಷತೆಗೆ ಆದ್ಯತೆ ನೀಡಲಾಯಿತು. ಶೌಚಾಲಯಗಳ ಬಳಕೆಯ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಶಾಲಾ ಮಕ್ಕಳೊಂದಿಗೆ ಬೃಹತ್ ರ್‍ಯಾಲಿ ಹಾಗೂ ಕಿರು ನಾಟಕ, ಬೀದಿ ನಾಟಕ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಪಾಲಿಕೆ ಅಧಿಕಾರಿಗಳ ತಂಡವು ನಗರದ ವಿವಿಧೆಡೆ ಪಾಲಿಕೆ ವತಿಯಿಂದ ನಿರ್ವಹಿಸುತ್ತಿರುವ ಶೌಚಾಲಯಗಳ ವೀಕ್ಷಣೆ ನಡೆಸಿ ಪ್ರಾಯೋಗಿಕ ಪರಿಶೀಲನೆ ನಡೆಸಿದರು.

ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ವಾಣಿ ವಿಲಾಸ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಶಿಲ್ಪಾ, ಅಶ್ವಿನ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮುಸ್ತಫಾ, ಸುಶ್ರುತ್, ಧನುಷ್, ನಾಗರಾಜೇ ಗೌಡ ಇತರರು ಇದ್ದರು.

# ಆಸಿಡ್ ಅಟ್ಯಾಕ್, ದರೋಡೆ ನಾಟಕ: ಚಿನ್ನದಂಗಡಿಯ ಮಾಲೀಕನ ಬಂಧನ

**ಗಿರವಿ ಇಟ್ಟಿದ್ದ ಚಿನ್ನಾಭರಣ ಎತ್ತಿಹಾಕಲು ದರೋಡೆ ಪ್ರಕರಣ ಸೃಷ್ಟಿ**



**ಮಂಡ್ಯ:** ಚಿನ್ನದ ಅಂಗಡಿಯಲ್ಲಿ ತನ್ನ ಮುಖಕ್ಕೆ ಆಯ ಸಿಡ್ ಅಟ್ಯಾಕ್ ಮಾಡಿ ದರೋಡೆ ಮಾಡಲಾಗಿದೆ ಎಂದು ನಾಟಕ ಮಾಡಿದ್ದ ಚಿನ್ನದಂಗಡಿ ಮಾಲೀಕನನ್ನು ಪೊಲೀ ಸರು ಬಂಧಿಸಿದ್ದಾರೆ. ಅಂಗಡಿಯಲ್ಲಿ ಗಿರವಿ ಇಟ್ಟಿದ್ದ ಚಿನ್ನಾ ಭರಣವನ್ನು ಎತ್ತಿಕೊಂಡು ಪರಾರಿ ಆಗಲು ಹಾಕಿದ್ದ ಮಾಲೀ ಕನ ಸ್ಕೆಚ್ ಅನ್ನು ಪೊಲೀಸರು ಬಹಿರಂಗ ಮಾಡಿದ್ದಾರೆ.

ಚಿನ್ನದಂಗಡಿ ಮಾಲೀಕನ ಮುಖಕ್ಕೆ ಆಯಸಿಡ್ ಅಟ್ಯಾಕ್ ಮಾಡಿ ಅಂಗಡಿಯಲ್ಲಿದ್ದ ಚಿನ್ನ, ಬೆಳ್ಳಿ ಕದ್ದು ಪರಾರಿಯಾಗಿದ್ದ ಪ್ರಕರಣದ ಬೆನ್ನು ಹತ್ತಿದ ಪೊಲೀಸರಿಗೆ ಶಾಕ್ ಆಗಿದೆ. ಈ ಆಯಸಿಡ್ ದಾಳಿ ಮತ್ತು ದರೋಡೆ ಪ್ರಕ ರಣ ಕಟ್ಟುಕತೆ ಎಂಬುದು ಬೆಳಕಿಗೆ ಬಂದಿದೆ. ಚಿನ್ನದಂ ಗಡಿಯ ಮಾಲೀಕನೇ ದರೋಡೆಕೋರ ಎಂಬುದು ತಿಳಿದಿದೆ.

ಅರ್ಧ ಮುಖ ಸುಟ್ಟಂತೆ ಕಾಣುತ್ತಿರೋ ವ್ಯಕ್ತಿಯ ಹೆಸರು ಪುಟ 2ಕ್ಕೆ

# ಅಸಹಜ ಲೈಂಗಿಕ ದೌರ್ಜನ್ಯ: ಸೂರಜ್ ರೇವಣ್ಣ ಅರ್ಜಿ ವಜಾ

**ಬೆಂಗಳೂರು:** ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಿಂದ ಕೈಬಿಡುವಂತೆ ಎಂಎಲ್ಸಿ ಸೂರಜ್ ರೇವಣ್ಣ ಕೋರಿದ್ದ ಮರುಪರಿಶೀಲನಾ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ಕೋರ್ಟ್ ವಜಾ ಮಾಡಿದೆ.



ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಿಂದ ತಮ್ಮನ್ನು ಕೈಬಿಡುವಂತೆ ಕೋರಿ ಸೂರಜ್ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್ ಅವರ ಪೀಠ ವಜಾ ಮಾಜಿ ಆದೇಶ ಹೊರಡಿಸಿದ್ದಾರೆ ಜೆಡಿಎಸ್ ಕಾರ್ಯಕರ್ತನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದಲ್ಲಿ ಸೂರಜ್ ರೇವಣ್ಣ ಅವರನ್ನು ಬಂಧಿಸಿ ಪರಪ್ಪನ ಅಗ್ರಹಾರ

# ರಾಜ್ಯಸಭೆ 37 ಸ್ಥಾನಗಳಿಗೆ ಮಾ.16ರಂದು ಚುನಾವಣೆ

**ನವದೆಹಲಿ:** ರಾಜ್ಯಸಭೆಯ 37 ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣೆ ಮಾರ್ಚ್ 16ರಂದು ನಡೆಯಲಿದೆ ಎಂದು ಚುನಾವಣಾ ಆಯೋಗ ಬುಧವಾರ ಪ್ರಕಟಿಸಿದೆ.

ಏಪ್ರಿಲ್‌ನಲ್ಲಿ ವಿವಿಧ ದಿನಾಂಕಗಳಲ್ಲಿ ಈ ಸ್ಥಾನಗಳು ಖಾಲಿಯಾಗಲಿವೆ. ಮಹಾರಾಷ್ಟ್ರ, ಒಡಿಶಾ, ತೆಲಂಗಾಣ, ತಮಿಳುನಾಡು, ಛತ್ತೀಸ್‌ಗಢ, ಪಶ್ಚಿಮ ಬಂಗಾಳ, ಅಸ್ಸಾಂ, ಹರಿಯಾಣ, ಹಿಮಾಚಲ ಪ್ರದೇಶ ಮತ್ತು ಬಿಹಾರ ಸೇರಿದಂತೆ 10 ರಾಜ್ಯಗಳಲ್ಲಿ ಚುನಾವಣೆ ನಡೆಯಲಿದೆ. 2026ರ ಫೆಬ್ರವರಿ 26ರಂದು ಅಧಿಸೂಚನೆಗಳನ್ನು ಹೊರಡಿಸುವುದರೊಂದಿಗೆ ಚುನಾವಣಾ ಪ್ರಕ್ರಿಯೆಯು ಪ್ರಾರಂಭವಾಗಲಿದೆ. ಮತದಾನದ ದಿನದಂದೇ ಮತ ಎಣಿಕೆ ನಡೆಯಲಿದೆ. 37 ಸದಸ್ಯರ ಅವಧಿ ಏಪ್ರಿಲ್ 2026ರಲ್ಲಿ ಮುಕ್ತಾಯಗೊಳ್ಳಲಿರುವುದರಿಂದ ಚುನಾವಣೆಗಳು ನಡೆಯುತ್ತಿವೆ.

# ಮಾಧ್ಯಮಗಳಿಗೆ ಲಕ್ಷ್ಮಣ ರೇಖೆ


**ಬೆಂಗಳೂರು:** ವಿಧಾನಸಭೆ ಅಧಿವೇಶನಕ್ಕೆ ಮಾಧ್ಯಮಗಳಿಗೆ ನಿರ್ಬಂಧದ ವಿಧಿಸಿದ ಬಳಿಕ ಈಗ ವಿಧಾನಸೌಧದಲ್ಲಿ ಭದ್ರತೆಯ ನೆಪವೊಡ್ಡಿ ಮಾಧ್ಯಮಗಳಿಗೆ ನಿರ್ಬಂಧ ಹಾಕುವ ಕೆಲಸಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ. ಮಾಧ್ಯಮಗಳು ಸೂಚಿಸಿದ ಸ್ಥಳದಲ್ಲಿ ಮಾತ್ರ ಜನಪ್ರತಿನಿಧಿಗಳನ್ನ ಮಾತನಾಡಿಸಬೇಕು ಎಂದು ಸರ್ಕಾರ ಆದೇಶಿಸಿದೆ. ವಿಧಾನಸೌಧದಲ್ಲಿ ಮಾಧ್ಯಮಗಳನ್ನ ಹತ್ತಿಕ್ಕುವ ಕೆಲಸಕ್ಕೆ ರಾಜ್ಯ ಸರ್ಕಾರ ಮತ್ತೆ ಮುಂದಾಗಿದೆ. ಭದ್ರತೆಯ ನೆಪವೊಡ್ಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಾಧ್ಯಮಗಳಿಗೆ ಲಕ್ಷ್ಮಣ ರೇಖೆ ಎಳೆದಿದೆ.



# ಎಚ್‌ಸಿಎಂ ನಾಯಿ ಹೇಳಿಕೆ: ಶಾಸಕ ರಂಗನಾಥ್ ಕಿಡಿ

**ಬೆಂಗಳೂರು:** ಮಹದೇವಪ್ಪ ಹಿರಿಯರು. ಅವರ ಆಶೀರ್ವಾದ ನುಡಿಗಳು ಇವು. ಅಂತಹ ಹಿರಿಯರಿಗೆ ಇಂತಹ ಹೇಳಿಕೆಗಳು ಶೋಭೆ ತರುವಂತದ್ದಲ್ಲ ಎಂದು ಶಾಸಕ ರಂಗನಾಥ್ ಟೀಕಿಸಿದರು.

ನಾಯಕತ್ವ ಬದಲಾವಣೆ ಚರ್ಚೆಯನ್ನ ಬೀದಿ ನಾಯಿಗಳಿಗೆ ಹೋಲಿಸಿದ ಸಚಿವ ಮಹದೇವಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಡಿ.ಕೆ.ಶಿವಕುಮಾರ್ ಅವರು, 2018ರಲ್ಲಿ ಪಕ್ಷ ಅಧಿಕಾರಕ್ಕೆ ತರಲು ತನು ಮನ ಧನ ವಹಿಸಿ ದುಡಿದದ್ದು ಎಲ್ಲಾ ಕಾರ್ಯಕರ್ತರಿಗೆ ಗೊತ್ತು. 2018ರಲ್ಲಿ ಏನಾಗಿದೆ ಅಂತ ಅವರನ್ನೇ ಕೇಳಿ. ಮಹದೇವಪ್ಪ ತಾನೇ 2018ರಲ್ಲಿ ಸಿದ್ದರಾಮಯ್ಯ ಜೊತೆಗೆ ಪಕ್ಷವನ್ನ ಮುನ್ನಡೆಸಿದ್ದು, ಅವರ ಶ್ರಮದಿಂದಲೇ 80 ಸೀಟು ಬಂದಿತ್ತು. ಇನ್ಮುಂದೆಯೂ ಅವರೇ ಲೀಡ್ ತೆಗೆದುಕೊಳ್ಳುತ್ತಾರೆ ಎಂದರೆ ನಾವು ಅವರ ಹಿಂದೆ ಹೋಗೋದಕ್ಕೆ ರೆಡಿ ಎಂದು ವ್ಯಂಗ್ಯವಾಡಿದರು.



# ಬಿ.ವೈ.ವಿಜಯೇಂದ್ರ, ಅಶೋಕ್ ಮನೆ ಮುಂದೆಯೇ ಕಸ ಹಾಕಿಸ್ತೀನಿ ಹುಷಾರ್!

**ಬಿಜೆಪಿಯವರು ಸುಮ್ನಿದ್ದರೆ ಸರಿ: ವಿಪಕ್ಷ ನಾಯಕರಿಗೆ ಡಿಕೆಶಿ ಎಚ್ಚರಿಕೆ**

**ಬೆಂಗಳೂರು:** ಬಿಜೆಪಿ ನಾಯಕ ಬಿ.ವೈ.ವಿಜಯೇಂದ್ರ ಮತ್ತು ವಿಪಕ್ಷ ನಾಯಕ ಆರ್.ಅಶೋಕ್ ಮನೆ ಮುಂದೆ ಕಸ ಹಾಕಿಸಬೇಕಾಗುತ್ತದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರಿನ ಕಸವನ್ನು ದೊಡ್ಡಬಳ್ಳಾಪುರಕ್ಕೆ ನಿಯಮಬಾಹಿರವಾಗಿ ಸಾಗಿಸಲಾಗುತ್ತಿದೆ ಎಂದು ಬಿಜೆಪಿ ಶಾಸಕರ ಆರೋಪಕ್ಕೆ ಅವರು ಮಾಧ್ಯಮಗಳ ಮುಂದೆ ಕಿಡಿಕಾರಿದರು. ಎಲ್ಲಾದರು ಒಂದು ಕಡೆ ಕಸ ಹಾಕಬೇಕಲ್ವಾ? ಅಲ್ಲೂ ಬೇಡ, ಇಲ್ಲೂ ಬೇಡ ಅಂದರೆ ಎಲ್ಲಿಗೆ ಹೋಗಬೇಕು? ಈ ಕಸ ಅಶೋಕ್ ಮನೆಗೆ, ವಿಜಯೇಂದ್ರ ಮನೆಗೆ ಅಥವಾ ಬಿಜೆಪಿ ಆಫೀಸಿಗೆ ಹೋಗಬೇಕೆ ಎಂದು ಪ್ರಶ್ನಿಸಿದರು.

ಬಿಜೆಪಿಯ ಎಲ್ಲಾ ಶಾಸಕರು ಬ್ಲ್ಯಾಕ್‌ಮೇಲ್ ಮಾಡ್ತಿದ್ದಾರೆ. ಗೌರವದಿಂದ ಇದ್ದರೆ ಸರಿ, ಇಲ್ಲದಿದ್ದರೆ ಎಸ್ಮಾ (ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ) ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಬಿಜೆಪಿ ಶಾಸಕರು ತಮ್ಮ ಕ್ಷೇತ್ರಕ್ಕೆ ಅನುದಾನ ಬೇಕು ಅಂತ ಆಕ್ಸಿಡೆಂಟ್ ವಿಚಾರ ಮುಂದಿಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡ್ತಿದ್ದಾರೆ. ಎಲ್ಲರೂ ಗೌರವದಿಂದ ಇದ್ದರೆ ಸರಿ, ಇಲ್ಲದಿದ್ರೆ ಕರುಣೆ ತೋರಿಸಲ್ಲ. ಎಸ್ಮಾ ಅಡಿಯಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಕಿಡಿಕಾರಿದರು. ಪುಟ 2ಕ್ಕೆ



# ಆರ್‌ಎಸ್‌ಎಸ್ ಚಿವುಟಿದರೆ, ಬಿಜೆಪಿ ಅಳುವುದೇಕೆ?: ಪ್ರಿಯಾಂಕ್ ಲೇವಡಿ

**ಬೆಂಗಳೂರು:** ಆರ್‌ಎಸ್‌ಎಸ್ ಆದಾಯ ಮೂಲದ ಬಗ್ಗೆ ಪ್ರಶ್ನೆ ಎತ್ತಿದ್ದೇ ತಡ ಬಿಜೆಪಿಯ ಸಂಘಪ್ಪಗಳು ಸ್ಪರ್ಧೆಗೆ ಬಿದ್ದವರಂತೆ ಮಾತನಾಡುತ್ತಿದ್ದಾರೆ. ಆರ್‌ಎಸ್‌ಎಸ್ ಗೆ ಚಿವುಟಿದರೆ, ಬಿಜೆಪಿ ಅಳುವುದೇಕೆ? ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.



ಬಿಜೆಪಿಯ ಸಂಘಪ್ಪಗಳು ಆರ್‌ಎಸ್‌ಎಸ್ ಪರವಾಗಿ ಸ್ಪರ್ಧೆಗೆ ಬಿದ್ದವರಂತೆ ಮಾತನಾಡುತ್ತಿದ್ದಾರೆ. ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಆರ್‌ಎಸ್‌ಎಸ್ ಸಮರ್ಥಿಸುವುದು ಅವರಿಗೆ ಅನಿವಾರ್ಯ. ಈ ಮೂಲಕ ಆರ್‌ಎಸ್‌ಎಸ್ ಹಾಗೂ ಬಿಜೆಪಿಗೆ ಸಂಬಂಧವಿಲ್ಲ ಎಂಬ ಮೋಹನ್ ಭಾಗವತ ಅವರ ಹೇಳಿಕೆ ಶತಮಾನದ ಸುಳ್ಳು ಎಂಬುದನ್ನು ಬಿಜೆಪಿಯವರೇ ನಿರೂಪಿಸುತ್ತಿದ್ದಾರೆ ಎಂದು ಲೇವಡಿ ಮಾಡಿರುವ ಖರ್ಗೆ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.ಬಿಜೆಪಿ ನಾಯಕರು ತಾವು ಮಾಡಿದ ಟೀಕೆ, ತಾವು ನೀಡಿದ ಹೇಳಿಕೆಗಳೆಲ್ಲದರ ರಿಪೋರ್ಟ್ ಕಾರ್ಡ್ ಅನ್ನು ನಾಗಪುರಕ್ಕೆ ಕಳಿಸಿಕೊಡಬೇಕು. ಯಾರು ಹೆಚ್ಚು ತೀವ್ರವಾಗಿ ನನ್ನನ್ನು ನಿಂದಿಸಿರುತ್ತಾರೋ ಅವರಿಗೆ ಪ್ರಮೋಷನ್ ದೊರಕಲಿದೆ ಎಂದೂ ವ್ಯಂಗ್ಯವಾಡಿದ್ದಾರೆ.

# ಮುಸ್ಲಿಂ ಮೀಸಲಾತಿ ರದ್ದು

*** ಮಹಾರಾಷ್ಟ್ರ ಬಿಜೆಪಿ ಸರ್ಕಾರದಿಂದ ಶಾಕ್**




**ಮುಂಬೈ:** ಮಹಾರಾಷ್ಟ್ರ ಬಿಜೆಪಿ ಸರ್ಕಾರ ರಾಜ್ಯದ ಮುಸ್ಲಿಮರಿಗೆ ಬಿಗ್ ಶಾಕ್ ನೀಡಿದೆ. ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ನೀಡಲಾಗಿದ್ದ ಶೇಕಡಾ 5ರಷ್ಟು ಮೀಸಲಾತಿಯನ್ನು ಬುಧವಾರ ಅಧಿಕೃತವಾಗಿ ರದ್ದುಗೊಳಿಸಿದೆ.

ಈ ಸಂಬಂಧ ದೇವೇಂದ್ರ ಫಡ್ನವೀಸ್ ಅವರ ಮಹಾರಾಷ್ಟ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಮುಸ್ಲಿಂ ಸಮುದಾಯಕ್ಕೆ ನೀಡಲಾಗಿದ್ದ ಶೇ.5ರಷ್ಟು ಮೀಸಲಾತಿಗೆ ಪುಟ 2ಕ್ಕೆ

# ಜೆಇಇ ಮೇನ್ 2026: ಆಕಾಶ್ ಇನ್‌ಸ್ಟಿಟ್ಯೂಟ್ ಸಾಧನೆ

ಮೈಸೂರು: ಮೈಸೂರಿನ ಆಕಾಶ್ ಎಜುಕೇಶನಲ್ ಸರ್ವಿಸಸ್ ಲಿಮಿಟೆಡ್ (ಎಇಎಸ್‌ಎಲ್) ವಿದ್ಯಾರ್ಥಿಗಳು ಜೆಇಇ ಮೇನ್ 2026 (ಅಧಿವೇಶನ 1) ಪರೀಕ್ಷೆಯಲ್ಲಿ ಮತ್ತೊಮ್ಮೆ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ಇತ್ತೀಚೆಗೆ ಪ್ರಕಟಿಸಿದ ಫಲಿತಾಂಶಗಳ ಪ್ರಕಾರ, ಮೈಸೂರು ಕುವೆಂಪುನಗರದ ಪ್ರಚೇತ್ ಜೈಶಂಕರ್ ಮರಾಠೆ ಶೇ.99.72ರಷ್ಟು ಅಂಕ ಪಡೆದು ಮೈಸೂರಿನಿಂದ ಅಗ್ರಸ್ಥಾನ ಪಡೆದವರಾಗಿ ಹೊರಹೊಮ್ಮಿದ್ದಾರೆ. ನೆರೆಯ ಕೇಂದ್ರಗಳ ವಿದ್ಯಾರ್ಥಿಗಳು ಕೂಡ ಅತ್ಯುತ್ತಮ ಫಲಿತಾಂಶಗಳನ್ನು ತಂದುಕೊಟ್ಟಿದ್ದಾರೆ. ಉಡುಪಿಯಿಂದ ತನ್ಮಯ್ ಬಿಜೂರ್ ಶೇ.99.53 ಶಾಖೆಗೆ ಮಹತ್ವದ ಸಾಧನೆ ತಂದುಕೊಟ್ಟಿದ್ದಾರೆ. ಹೊಸೂರಿನಿಂದ ಆರ್.ಎಂ.ನಮಿಯಶ್ ವಿಘ್ನೇಶ್ವರ್ ಶೇ.99.43 ಪರ್ಸೆಂಟೈಲ್ ಸಾಧಿಸಿ ಶಿಸ್ತುಬದ್ಧ ತಯಾರಿ ಮತ್ತು ಸತತ ಶೈಕ್ಷಣಿಕ ಪ್ರಯತ್ನವನ್ನು ಪ್ರತಿಬಿಂಬಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗಳ ಬಗ್ಗೆ ಪ್ರತಿಕ್ರಿಯಿಸಿದ ಆಕಾಶ್ ಎಜುಕೇಶನಲ್ ಸರ್ವಿಸಸ್ ಲಿಮಿಟೆಡ್‌ನ ಮುಖ್ಯ ಶೈಕ್ಷಣಿಕ ಮತ್ತು ವ್ಯವಹಾರ ಮುಖ್ಯಸ್ಥ ಧೀರಜ್ ಕುಮಾರ್ ಮಿಶ್ರಾ "ಮೈಸೂರಿನ ನಮ್ಮ ವಿದ್ಯಾರ್ಥಿಗಳ ಅಸಾಧಾರಣ ಫಲಿತಾಂಶಗಳು ಅವರ ಶೈಕ್ಷಣಿಕ ಬದ್ಧತೆ ಮತ್ತು ಆಕಾಶ್ ಸಂಸ್ಥೆಯ ಶೈಕ್ಷಣಿಕ ವ್ಯವಸ್ಥೆಯ ಶಕ್ತಿಗೆ ಸಾಕ್ಷಿ. ವಿದ್ಯಾರ್ಥಿಗಳ



ಕಠಿಣ ಪರಿಶ್ರಮದ ಬಗ್ಗೆ ನಾವು ಹೆಮ್ಮೆಪಡುತ್ತೇವೆ ಮತ್ತು ಅವರ ಸಾಧನೆಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅವರ ಭವಿಷ್ಯದ ಪ್ರಯತ್ನಗಳಲ್ಲಿ ನಿರಂತರ ಯಶಸ್ಸನ್ನು ಕೋರುತ್ತೇವೆ." ಎಂದು ಹೇಳಿದರು.

ವರ್ಷಕ್ಕೆ ಎರಡು ಬಾರಿ ಪರೀಕ್ಷೆ ಬರೆಯುವ ಅವಕಾಶ ಹೊಂದಿರುವ ಜೆಇಇ ಮೇನ್, ವಿದ್ಯಾರ್ಥಿಗಳಿಗೆ ತಮ್ಮ ಹಿಂದಿನ ಫಲಿತಾಂಶಗಳನ್ನು ಸುಧಾರಿಸಲು ಅವಕಾಶ ನೀಡುತ್ತದೆ ಮತ್ತು ಇದರ ಮೂಲಕ ವಿದ್ಯಾರ್ಥಿಗಳು ಎನ್‌ಐಟಿಗಳು, ಐಐಐಟಿಗಳು ಮತ್ತು ಸರ್ಕಾರದಿಂದ ಬೆಂಬಲಿತ ಇತರ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಬಹುದು, ಹಾಗೂ ಭಾರತೀಯ ತಂತ್ರಜ್ಞಾನ ಸಂಸ್ಥೆಗಳಿಗೆ (ಐಐಟಿ) ಪ್ರವೇಶ ಪರೀಕ್ಷೆಯಾದ ಜೆಇಇ ಅಡ್ವಾನ್ಸ್ಡ್ ಪರೀಕ್ಷೆಗೆ ಅರ್ಹತೆ ಪಡೆಯಬಹುದು ಎಂದರು. ಹಿರಿಯ ಸಹಾಯಕ ನಿರ್ದೇಶಕರು ಮತ್ತು ರಾಜ್ಯ ಮುಖ್ಯಸ್ಥ ಡಾ.ಡಿ.ವಿಕ್ರಮಚಕ್ರವರ್ತಿ, ದಕ್ಷಿಣ ಕರ್ನಾಟಕದ ಪ್ರದೇಶ ಮಾರಾಟ ಮುಖ್ಯಸ್ಥ ದೀಪಕ್, ಶಾಖೆಯ ಮುಖ್ಯಸ್ಥ ಡಿ.ಸೂರಜ್, ಉಪನಗರ ಶಾಖೆ ಶಾಲೆ ಮುಖ್ಯಸ್ಥ ಮುಬಾರಕ್ ಪಾಷಾ ಉಪಸ್ಥಿತರಿದ್ದರು. ಮೈಸೂರಿನ ಟಾಪರ್ಸ್ ವಿದ್ಯಾರ್ಥಿಗಳಾದ ಪ್ರಚೇತ್ ಜೈಶಂಕರ್ ಮರಾಠೆ(99.72), ಎಸ್.ಸರವಣನ್(98.88), ಆರ್.ಚಿರಾಗ್(98.44), ಎನ್.ಮಹಮ್ಮದ್ ಮುಸಾದಿಕ್(98.31), ಅಭಯ್ ಮಂಜುನಾಥ್(97.93), ಎಚ್.ಎನ್.ನಿಶಾಂತ್ ರಾಜ್(97.85), ಸಚಿನ್ ಎಂ ನಾಯ್ಕ್(97.51), ಧನ್ಯಾ ಮಿತ್ತಲ್(97.23), ಕೆ.ಸಿ.ಸಂಜನಾ (97.14) ಅವರನ್ನು ಅಭಿನಂದಿಸಲಾಯಿತು.

# ಸಾರಿಗೆ ಮುಷ್ಕರ ಸಾಧ್ಯತೆ ಇಲ್ಲ: ಸಚಿವ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರವನ್ನು ಕೈ ಬಿಡುವಂತೆ ನೌಕರರ ಯೂನಿಯನ್ ಜೊತೆ ಮಾತನಾಡುವಂತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಅವರಿಗೆ ತಿಳಿಸಿದ್ದೇನೆ. ಹೀಗಾಗಿ ಮುಷ್ಕರ ನಡೆಯಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅಭಿಪ್ರಾಯಪಟ್ಟರು.

ಸಾರಿಗೆ ನೌಕರರ ಮುಷ್ಕರ ಕುರಿತು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, ತಮ್ಮ ಸಮಸ್ಯೆಗಳ ಕುರಿತು ಗಮನ ಸೆಳೆಯಲು ಬೆಂಗಳೂರು ಚಲೋ ಮಾಡುವುದಾಗಿ ಯೂನಿಯನ್‌ನವರು ಹೇಳಿದ್ದಾರೆ. ನಾನೂ ಸಹ ಮಾತುಕತೆ ನಡೆಸುತ್ತೇನೆ. ಅವರ ಬೇಡಿಕೆಗಳಿಗೆ ಸ್ಪಂದಿಸಿ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.



ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿ ಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕೆಎಸ್‌ಆರ್‌ಟಿಸಿ ಮತ್ತು ಇತರ ಸಾರಿಗೆ ನಿಗಮಗಳ ನೌಕರರ ಯೂನಿ ಯನ್ ಗುರುವಾರ ಮುಷ್ಕರಕ್ಕೆ ಕರೆ ನೀಡಿದ್ದಾರೆ. ನೌಕರರ ಬೇಡಿಕೆಗಳಿಗೆ ಸ್ಪಂದಿಸಲಾಗುವುದ ಎಂದು ಹೇಳಿದರು. ಬಸ್‌ನಲ್ಲಿ ಲಗೇಜ್ ದರ ಏರಿಕೆ ಕುರಿತು ಬಿಜೆಪಿ ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿದ ರೆಡ್ಡಿ, ಬಿಜೆಪಿಯವರಿಗೆ ಮಾನ ಮರ್ಯಾದೆ ಇಲ್ಲ. 2021ರಲ್ಲಿ ಅವರದ್ದೇ ಸರ್ಕಾರ ವಿದ್ದಾಗ ಲಗೇಜ್ ದರ ಹೆಚ್ಚಿಸಿರಲಿಲ್ಲವೇ? ಟಿಕೆಟ್ ದರ ಹೆಚ್ಚಳವಾದಾಗ ಲಗೇಜ್ ದರವೂ ಏರಿಕೆಯಾ ಗುತ್ತದೆ. ನಾವು ಸ್ವಲ್ಪ ತಡವಾಗಿ ಮಾಡಿದ್ದೇವೆ ಅಷ್ಟೆ. ಅವರ ಸರ್ಕಾರದ ಅವಧಿಯಲ್ಲೂ ಮಾಡಿರಲಿಲ್ಲವೇ? ಎಂದು ತಿರುಗೇಟು ನೀಡಿದರು.ದರ ಏರಿಕೆ ಕುರಿತು ಪ್ರತಿಕ್ರಿಯಿಸುವುದಕ್ಕೆ ಮೊದಲು, ಬಿಜೆಪಿ ಯವರು ತಮ್ಮ ಚರಿತ್ರೆಯನ್ನು ಸ್ವಲ್ಪ ನೋಡಿ ಕೊಳ್ಳಲಿ. ಈ ಕುರಿತು ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ವಿರೋಧ ಪಕ್ಷಗಳಿಗೆ ಸದನದಲ್ಲೇ ಉತ್ತರ ಕೊಟ್ಟಿದ್ದಾರೆ. ಸದ್ಯ ಬಸ್‌ನಲ್ಲಿ 30 ಕೆ.ಜಿ.ವರೆಗಿನ ಲಗೇಜ್ ಉಚಿತವಾಗಿ ಸಾಗಿಸಬಹುದು. ಅದಕ್ಕೂ ಹೆಚ್ಚಿನ ತೂಕವಿದ್ದರೆ ದರ ಅನ್ವಯವಾಗಲಿದೆ. ಹಿಂದೆ ಬಿಜೆಪಿಯವರ ದರ ಹೆಚ್ಚಿಸಿದಾಗ ಕೈಯಿಂದ ಕೊಟ್ಟಿದ್ದರೆಯೇ? ನಾವೂ ಕೈಯಿಂದ ಕೊಡುತ್ತಿಲ್ಲ. ಜನರ ತೆರಿಗೆ ಹಣದಿಂದ ತೆಗೆದು ಮರಳಿ ಜನರಿಗೇ ಕೊಡುತ್ತೇವೆ ಎಂದು ಹೇಳಿದರು.

## ಮೊದಲ ಪುಟದಿಂದ

### ಮಲೆ ಮಹದೇಶ್ವರ ಬೆಟ್ಟದಲ್ಲಿ ವಿಜೃಂಭಣೆಯ ರಥೋತ್ಸವ

2 ಲಕ್ಷಕ್ಕೂ ಅಧಿಕ ಮಂದಿ ಕಾಲ್ನಡಿಗೆಯಲ್ಲೇ ಮಾದಪ್ಪನ ಬೆಟ್ಟಕ್ಕೆ ಬಂದು ಮಹದೇಶ್ವರನ ದರ್ಶನ ಪಡೆದರು. ಕಾಡು ಪ್ರಾಣಿಗಳ ಹಾವಳಿ ತಡೆಗೆ ಈ ಬಾರಿ ಜಿಲ್ಲಾಡಳಿತ ಸಾಕಷ್ಟು ಮುನ್ನೆಚ್ಚರಿಕೆ ಕ್ರಮ ಕೈಗೊಂಡಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ಬಿಗಿ ಭದ್ರತೆ ಒದಗಿಸಿತ್ತು. ಕಳೆದ 5 ದಿನಗಳಿಂದ ನಡೆದ ಮಹಾ ಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ಅದ್ದೂರಿ ತೆರೆ ಬಿದ್ದಿದೆ. ಮಲೆ ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು ಜಾತ್ರಾ ಮಹೋತ್ಸವ ಕುರಿತು ಮಾತನಾಡಿ, 5 ದಿನಗಳ ಜಾತ್ರಾ ಅವಧಿಯಲ್ಲಿ 9ರಿಂದ 10 ಲಕ್ಷ ಮಂದಿ ಕ್ಷೇತ್ರಕ್ಕೆ ಭೇಟಿ ನೀಡಿದ್ದಾರೆ. ಜಾತ್ರಾ ಮಹೋತ್ಸವ ಅವಧಿಯಲ್ಲಿ 6.5 ಲಕ್ಷ ಲಾಡುಗಳು ಮಾರಾಟವಾಗಿವೆ. ಸಂಭ್ರಮದಿಂದ ಹಾಗೂ ಸುಸೂತ್ರವಾಗಿ ರಥೋತ್ಸವ ನಡೆದಿದೆ ಎಂದು ತಿಳಿಸಿದರು.

### ಸಫಾರಿಗೆ 'ಗ್ರೀನ್ ಸಿಗ್ನಲ್'

ತಾಂತ್ರಿಕ ಸಮಿತಿ ರಚನೆ ಮಾಡಿದ್ದು, ಮಧ್ಯಂತರ ವರದಿ ನೀಡಿದ್ದಾರೆ. ಸಫಾರಿ ಪುನರ್ ಪ್ರಾರಂಭಕ್ಕೆ ಬೇಡಿಕೆ ಇಟ್ಟಿದೆ. ಹೀಗಾಗಿ ಸಫಾರಿ ಹಂತ ಹಂತವಾಗಿ ಪುನರ್ ಆರಂಭ ಮಾಡಲು ನಿರ್ಧರಿಸಲಾಗಿದೆ. ಅಂತಿಮ ವರದಿ ಬಂದ ಬಳಿಕ 100ರಷ್ಟು ಅನುಮತಿ ಬಗ್ಗೆ ನಿರ್ಧಾರ ಮಾಡಲಾಗುವುದು ಎಂದು ಅವರು ಹೇಳಿದರು.

### ಬಿ.ವೈ.ವಿಜಯೇಂದ್ರ, ಅಶೋಕ್ ಮನೆ ಮುಂದೆಯೇ ಕಸ ಹಾಕಿಸ್ತೀನಿ

ನಿನ್ನೆ ಲಿಂಬಾವಳಿ ಪ್ರತಿಭಟನೆ ಮಾಡಿದ್ದಾರೆ. ಇವತ್ತು ದೊಡ್ಡಬಳ್ಳಾಪುರ ಎಂಎಲ್‌ಎ ಮಾಡಿದ್ದಾನೆ. ಇವರೆಲ್ಲ ತಮ್ಮ ಕ್ಷೇತ್ರಕ್ಕೆ ಅನುದಾನ ಬೇಕು ಅಂತ ಬ್ಲ್ಯಾಕ್ ಮೇಲ್ ಮಾಡ್ತಿದ್ದಾರೆ. ಸುಮ್ಮನೆ ಇರಲ್ಲ ಅಶೋಕ್, ವಿಜಯೇಂದ್ರ ಮನೆ ಮುಂದೆನೇ ಕಸ ಹಾಕಿಸ್ತೀನಿ ಅಥವಾ ಬಿಜೆಪಿ ಕಚೇರಿ ಮುಂದೆಯೇ ಕಸ ಹಾಕಿಸ್ತೀನಿ ಎಂದು ಎಚ್ಚರಿಕೆ ನೀಡಿದರು.

### ಮುಸ್ಲಿಂ ಮೀಸಲಾತಿ ರದ್ದು

ಕೋರ್ಟ್ ಮಧ್ಯಂತರ ತಡೆ ನೀಡಿರುವುದರಿಂದ ಮೀಸಲಾತಿಯನ್ನು ರದ್ದುಗೊಳಿಸಲಾಗಿದೆ ಎಂದು ತಿಳಿಸಿದೆ. 10 ವರ್ಷಗಳ ಹಿಂದೆ ಅಂದರೆ 2014ರಲ್ಲಿ ಕಾಂಗ್ರೆಸ್–ಎನ್‌ಸಿಪಿ ಸರ್ಕಾರ ಅಲ್ಪಸಂಖ್ಯಾತ ಸಮುದಾಯಕ್ಕೆ ಶೇಕಡಾ 5ರಷ್ಟು ಮೀಸಲಾತಿಯನ್ನು ಘೋಷಿಸಿತು. ಅಲ್ಲದೆ ಚುನಾವಣೆಗೆ ಮುಂಚಿತವಾಗಿ ಸುಗ್ರೀವಾಜ್ಞೆ ಹೊರಡಿಸಿತ್ತು. ಆದರೆ 2014ರ ಮಹಾರಾಷ್ಟ್ರ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿ–ಶಿವಸೇನೆ ಮೈತ್ರಿಕೂಟ ಅಧಿಕಾರಕ್ಕೆ ಬಂದ ನಂತರ ಈ ಸುಗ್ರೀವಾಜ್ಞೆ ರದ್ದಾಗಿತ್ತು. ಇದೀಗ ಮಹಾರಾಷ್ಟ್ರ ಸರ್ಕಾರವು 2014 ಮತ್ತು 2015 ರಲ್ಲಿ ಈ ನಿಟ್ಟಿನಲ್ಲಿ ಹೊರಡಿಸಲಾದ ಎಲ್ಲಾ ಆದೇಶಗಳನ್ನು ಈಗ ರದ್ದುಗೊಳಿಸಿದೆ.

### ಅಸಹಜ ಲೈಂಗಿಕ ದೌರ್ಜನ್ಯ: ಸೂರಜ್ ರೇವಣ್ಣ ಅರ್ಜಿ ವಜಾ

ಜೈಲಿಗೆ ಕಳುಹಿಸಲಾಗಿತ್ತು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದ ಹಿನ್ನೆಲೆ ಸೂರಜ್ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಿದ್ದರು.

### \ ನಾಳೆಯಿಂದ ಸಾರಿಗೆ ಮುಷ್ಕರ

ಮುಷ್ಕರ ನಡೆಸುವ ಸಾರಿಗೆ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಕೆಎಸ್‌ಆರ್‌ಟಿಸಿ ಎಚ್ಚರಿಕೆ ನೀಡಿದೆ. ಕೆಲಸಕ್ಕೆ ಹಾಜರಾಗದಿದ್ದರೆ ವೇತನ ಕಡಿತ ಮಾಡಲಾಗುತ್ತದೆ. ನೌಕರರು ಕಡ್ಡಾಯವಾಗಿ ಕರ್ತವ್ಯಕ್ಕೆ

ಹಾಜರಾಗುವಂತೆ ಸೂಚನೆ ನೀಡಲಾಗಿದೆ. ಪ್ರತಿಭಟನೆಯಲ್ಲಿ ಭಾಗಿಯದರೆ ಸೇವಾ ನಿಯಮದ ಅನ್ವಯ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಮ್ ಪಾಷಾ ಎಚ್ಚರಿಕೆ ನೀಡಿದ್ದಾರೆ.

### 20 ಕೋಟಿ ಆದಾಯ

ಸಿಬ್ಬಂದಿಗಳು ಸತ್ತರೆ 30 ರಿಂದ 50 ಲಕ್ಷ ರೂ. ಪರಿಹಾರ ಕೊಡಲಾಗಿದೆ. ಜನರು ಸತ್ತರೆ 20 ಲಕ್ಷ ರೂ. ಇಲಾಖೆ ಕೊಡಲಿದೆ. ಗಾಯಾಳುಗಳ ಚಿಕಿತ್ಸೆ ವೆಚ್ಚ ಇಲಾಖೆ ಭರಿಸಲಿದೆ ಎಂದು ತಿಳಿಸಿದರು.

## ಬದನಗುಪ್ಪೆ ಗಲಭೆ ಪ್ರಕರಣ

# ವಿವಾದಿತ ಸ್ಥಳದಲ್ಲೇ ನಾಮಫಲಕ ಅಳವಡಿಸಲು ಜಿಲ್ಲಾಧಿಕಾರಿ ಸೂಚನೆ

### ಅಂಬೇಡ್ಕರ್, ವಾಲ್ಮೀಕಿ ಭಾವಚಿತ್ರ ಒಳಗೊಂಡ ಫಲಕ । ಡಿಸಿ–ಎಸ್ಪಿ ನೇತೃತ್ವದಲ್ಲಿ ಗ್ರಾಮದ ಎರಡು ಸಮುದಾಯಗಳ ಮುಖಂಡರ ಸಭೆಯಲ್ಲಿ ಸೌಹಾರ್ದ ತೀರ್ಮಾನ

ಚಾಮರಾಜನಗರ: ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ಈಗಾಗಲೇ ಅಳವಡಿಸಿರುವ ಡಾ. ಬಿ.ಆರ್. ಅಂಬೇಡ್ಕರ್ ನಾಮಫಲಕದ ಜಾಗದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರವನ್ನು ಒಂದೇ ನಾಮಫಲಕದಲ್ಲಿ ಹಾಕಿ ಅಳವಡಿಸುವ ಜೊತೆಗೆ ಯಾವುದೇ ಸಂಘ ಸಂಸ್ಥೆಗಳ ಹೆಸರನ್ನು ನಮೂದಿಸಕೂಡದು ಎಂದು ಜಿಲ್ಲಾಧಿಕಾರಿ ಶ್ರೀರೂಪ ಸೂಚನೆ ನೀಡಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಬದನಗುಪ್ಪೆಯಲ್ಲಿ ನಾಮಫಲಕ ತೆರವು ಸಂಬಂಧ ಗ್ರಾಮದಲ್ಲಿ ಎರಡು ಸಮುದಾಯಗಳ ನಡುವೆ ವೈಷಮ್ಯ ಬೆಳೆದು ಕಳೆದ ಹಲವಾರು ತಿಂಗಳಿಂದ ಆಗಿದ್ದಾಂಗೆ ಗಲಾಟೆಗಳು ನಡೆಯುತ್ತಿತ್ತು. ಇತ್ತೀಚೆಗೆ ಇದೇ ವಿಚಾರವಾಗಿ ಎರಡು ಸಮುದಾಯಗಳ ನಡುವೆ ಗಲಾಟೆ ನಡೆದಿತ್ತು. ಜಿಲ್ಲಾ ಪೊಲೀಸ್ ಅಧಿಕಾರಿಗಳು ಸೂಕ್ತ ಕ್ರಮ ವಹಿಸಿದ್ದರು. ಸ್ಥಳದಲ್ಲಿಯೇ ಪೊಲೀಸರು ಮೊಕ್ಕಂ ಹೂಡಿದ್ದರು. ಮುನ್ನೆಚ್ಚರಿಕೆಯ ಕ್ರಮವಾಗಿ ಎರಡು ಸಮುದಾಯಗಳ ದೂರಿನ ಮೇರೆಗೆ, ಪ್ರಕರಣ ದಾಖಲು ಮಾಡಿಕೊಂಡಿದ್ದರು.

ಈ ಸಂಬಂಧ ಇಂದು ಜಿಲ್ಲಾಧಿಕಾರಿ ಶ್ರೀರೂಪ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಎಸ್ಪಿ ಮುತ್ತುರಾಜ್, ಸಿಇಓ ಮೋನ್‌ರೋತ್, , ಎಡಿಸಿ ಜವರೇಗೌಡ, ಡಿಎವೈಎಸ್ ಸ್ನೇಹ ರಾಜ್ , ಎಸಿ ದೀನೇಶ್ ಕುಮಾರ್ ಮೀನಾ, ತಹಶೀಲ್ದಾರ್ ಗಿರಿಜಾ ಸೇರಿದಂತೆ ಎರಡು ಸಮುದಾಯಗಳ ಮುಖಂಡರು ಭಾಗವಹಿಸಿದ್ದರು.



**ಸಭೆಯಲ್ಲಿ ವಾಗ್ವಾದ**

ಸಭೆಯಲ್ಲಿ ಎರಡು ಸಮುದಾಯದಗಳ ಮುಖಂಡರುಗಳು ಮಾತನಾಡಿ, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನಾಯಕ ಸಮುದಾಯದವರು ವಾಸಿಸುವ ಜಾಗದಲ್ಲಿ ನಾಮಫಲಕ ಹಾಕಿರುವುದು ಸರಿಯಲ್ಲ. ಪರಿಶಿಷ್ಟ ಜಾತಿಯವರು ವಾಸಿಸುವ ರಸ್ತೆ ಹಾಗೂ ಜಾಗದಲ್ಲಿ ನಾಮಫಲಕ ಹಾಕಿಕೊಳ್ಳಲಿ. ಈ ನಾಮ ಫಲಕ ಇಲ್ಲಿ ಇರುವುದರಿಂದ ಏನಾದರು ದುಷ್ಕೃತಗಳು ನಡೆದಾಗ ನಮ್ಮ ಸಮುದಾಯವನ್ನು ಹೊಣೆ ಮಾಡಲಾಗುತ್ತಿದೆ. ಹೀಗಾಗಿ ಇಲ್ಲಿ ಬೇಡ ಎಂದು ಹೇಳುತ್ತಿದ್ದೇವೆ ಹೊರತು ಮತ್ತೇ ಬೇರೆ ಉದ್ದೇಶ ಇಲ್ಲ ಎಂದು ತಿಳಿಸಿದರು. ಇದಕ್ಕೆ ಪ್ರತಿಯಾಗಿ ಗ್ರಾಮದ ಪರಿಶಿಷ್ಟ ಜಾತಿಯ ಮುಖಂಡರು ಮಾತನಾಡಿ, ಇದೊಂದು ಗ್ರಾಮ ಠಾಣ ಜಾಗವಾಗಿದ್ದು, ನಮ್ಮ ಬೀದಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದೆ. ಈ ಹಿಂದಿನಿಂದಲು ಇಲ್ಲಿ ತೆರೆದ ಬಾವಿ ಇತ್ತು. ನಾವು ಇಲ್ಲಿ ನೀರು ತೆಗೆದುಕೊಳ್ಳುತ್ತಿದ್ದೇವು. ಈ ಜಾಗದಲ್ಲಿ ಜಾತ್ರೆ ಹಾಗು ವಿಶೇಷ ಸಂದರ್ಭಗಳಲ್ಲಿ ನಾಟಕ ಪ್ರದರ್ಶನಗಳು ನಡೆಯುತ್ತಿತ್ತು. ಸಂವಿಧಾನ ಶಿಲ್ಪಿ ಹಾಗೂ ಸಮಾನತೆಯ ಹರಿಕಾರ ಡಾ. ಬಿ.ಆರ್. ಅಂಬೇಡ್ಕರ್ ಅವರ ನಾಮಫಲಕವನ್ನು ಅಳವಡಿಸಿದ್ದೇವೆ. ನಮ್ಮ ಬೀದಿಗೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿತ್ತು. ಇಲ್ಲೇ ನಾಮಫಲಕ ಆಳವಡಿಸಿದರೆ ತಪ್ಪೇನು. ಇದರಿಂದ ನಮ್ಮ ಅಂಬೇಡ್ಕರ್ ಬಡಾವಣೆಗೆ ಬರುವವರಿಗೆ ದಾರಿ ತೋರಿಸಿದಂತಾಗುತ್ತದೆ. ಇದಕ್ಕೆ ಇವರ ವಿರೋಧ ಏಕೆ ಎಂಬುದು ನಮ್ಮ ಪ್ರಶ್ನೆ. ಜೊತೆಗೆ ದೇಶವೇ ಅಂಬೇಡ್ಕರ್ ಹಾಗು ಅವರ ಸಂವಿಧಾನ ವನ್ನು ಒಪ್ಪಿಕೊಂಡಿದೆ. ಶೋಷಿತರೇ ಶೋಷಿತರನ್ನು ದೂಷಣೆ ಮಾಡುವುದು ಎಷ್ಟು ಸರಿ ಎಂದು ಮುಖಂಡರು ಪ್ರಶ್ನೆ ಮಾಡಿದರು. ಸಭೆಯಲ್ಲಿ ಚರ್ಚೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಏರಿದ ಧ್ವನಿಯಲ್ಲಿ ಒಬ್ಬರು ಮಾತನಾಡಲು ಮುಂದಾಗ ಎಸ್ಪಿ ಮುತ್ತುರಾಜ್ ಅವರು ಖಡಕ್ ಸೂಚನೆಯನ್ನು ನೀಡಿ. ಇದು ಶಾಂತಿ ಸಭೆ, ಶಾಂತಿಯಾಗಿ ಮಾತನಾಡಬೇಕು. ಇಲ್ಲಿ ಯಾರು ವಿರೋಧಿಗಳು ಇಲ್ಲ ಎಂದೂ ಎಚ್ಚರಿಕೆ ಕೊಟ್ಟರು. ಬಳಿಕ ಜಿಲ್ಲಾಧಿಕಾರಿಗಳು ನೀಡಿದ ಸೂಚನೆಗೆ ಎಲ್ಲರು ಒಪ್ಪಿಗೆ ಸೂಚಿಸಿದರು.

ಗ್ರಾಮ ಪಂಚಾಯಿತಿಯ ಅಧಿಕಾರಿಗಳಿಗೆ ಗ್ರಾಮ ಠಾಣೆಯ ಜಾಗದಲ್ಲಿಯೇ ಡಾ. ಅಂಬೇಡ್ಕರ್, ವಾಲ್ಮೀಕಿ ಭಾವಚಿತ್ರವಿರುವ ಒಂದೇ ಸಮಾನ ಅಳತೆಯಲ್ಲಿರುವ ಅಂಬೇಡ್ಕರ್ ಬಡಾವಣೆ ಮತ್ತು ವಾಲ್ಮೀಕಿ ಬಡಾವಣೆಗೆ ಹೋಗುವ ರಸ್ತೆ ಎಂದು ನಮೂದಿಸಿ ಹಾಕುವಂತೆ ಸೂಚನೆ ನೀಡಿದರು. ಸೋಮವಾರವೇ ಈ ಕಾರ್ಯವಾಗಬೇಕು. ಎಲ್ಲಾ ಮುಖಂಡರ ಸಮ್ಮುಖದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ನಾಮಫಲಕ ಅನಾವರಣಗೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಬದನಗುಪ್ಪೆ ಗ್ರಾಮದ ಯಜಮಾನರಾದ ನಾಗಣ್ಣ, ಯ. ನಾಗಯ್ಯ, ಮುಕುಂದ ಮೂರ್ತಿ, ಮಹೇಶ್ ಬದನಗುಪ್ಪೆ, ಡಾ. ಬಿ.ಆರ್. ಅಂಭೇಡ್ಕರ್ ಮಹಾಸಭಾದ ಅಧ್ಯಕ್ಷ ಉಮೇಶ್‌ಕುದರ್, ಕಾರ್ಯಾಧ್ಯಕ್ಷ ಸಿ.ಕೆ. ಮಂಜುನಾಥ್, ವಾಸುಹೊಂಡರಬಾಳು, ರಾಮಸಮುದ್ರ ನಾಗರಾಜು, ಕಾಂಗ್ರೆಸ್ ಮುಖಂಡರಾದ ಮಹೇಶ್ ಕುದರ್, ನಲ್ಲೂರು ಸೋಮೇಶ್ವರ, ಅಯ್ಯನಪುರ ಶಿವಕುಮಾರ್, ನಾಯಕ ಸಮುದಾಯದ ಮುಖಂಡರಾದ ಎಂ. ರಾಮಚಂದ್ರು, ಕೆಲ್ಲಂಬಳ್ಳಿ ಸೋಮನಾಯಕ, ಪು. ಶ್ರೀನಿವಾಸನಾಯಕ, ಆರ್. ಸುಂದರ್, ಸುರೇಶ್ ನಾಯಕ್, ಶಿವರಾಮನಾಯಕ, ಎರಡು ಸಮುದಾಯದ ಯಜಮಾನರುಗಳು, ಯುವ ಮುಖಂಡರು ಹಾಜರಿದ್ದರು.

# 21ಕ್ಕೆ ಒಂದು ದಿನದ ಸಮ್ಮೇಳನ

ಮೈಸೂರು: ನಗರದ ಬೋಗಾದಿ ಬ್ಯಾಂಕ್ ನೌಕರರ ಕಾಲೋನಿಯಲ್ಲಿನ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯ ಮೈಸೂರು ಶಾಖೆಯ ಸಭಾಂಗಣದಲ್ಲಿ ಫೆ.21 ರ ಬೆಳಗ್ಗೆ 7.30 ರಿಂದ ಸಂಜೆ 7 ರವರೆಗೆ ಬಜೆಟ್– 2026 ಭಾರತದ ಭವಿಷ್ಯಕ್ಕಾಗಿ ಹಣಕಾಸು ಮಾರ್ಗಸೂಚಿ ಎಂಬ ಒಂದು ದಿನದ ಸಮ್ಮೇಳನ ಆಯೋಜಿಸಿರುವುದಾಗಿ ಅಧ್ಯಕ್ಷ ಎಸ್.ಭಾರ್ಗವ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಸಮ್ಮೇಳನದಲ್ಲಿ ಕೇಂದ್ರದ ಈ ಬಾರಿಯ ಬಜೆಟ್ ಕುರಿತು ಆಳವಾದ ವಿಶ್ಲೇಷಣೆ, ತಜ್ಞರ ಅಭಿಪ್ರಾಯ ಮಂಡನೆ, ನೇರ ತೆರಿಗೆ, ಪರೋಕ್ಷ ತೆರಿಗೆ, ನಿಯಂತ್ರಣಾತ್ಮಕ ನವೀಕರಣ, ನೀತಿ ಪರಿಣಾಮ, ಭಾರತದ ಆರ್ಥಿಕ ಬೆಳವಣಿಗೆಯ ಸಮಗ್ರ ಮಾರ್ಗನಕ್ಷೆ ಕುರಿತು ಚರ್ಚಿಸಲಾಗುವುದು ಎಂದರು. ಆಸಕ್ತಿ ಇರುವ ಎಲ್ಲರಿಗೂ ಉಪಯುಕ್ತವಾದುದಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821– 259 8000 ನ್ನು ಸಂಪರ್ಕಿಸಬಹುದಾಗಿದೆ ಎಂದು ಕೋರಿದರು. ಎಲ್. ವೆಂಕಟೇಶ್ ಸ್ವಾಮಿ, ಬಿ.ಆರ್.ಶರತ್ಚಂದ್ರ ಇನ್ನಿತರರು ಇದ್ದರು.



# ಉತ್ತಮ ಕೌಶಲ್ಯಗಳಿಂದ ಯಶಸ್ಸು ಸಾಧ್ಯ: ಪ್ರೊ.ಮಹೇಶ್

ಮೈಸೂರು: ಉತ್ತಮವಾದ ಕೌಶಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನದಲ್ಲಿ ಯಶಸ್ಸನ್ನು ಸಾಧಿಸುವುದರ ಜತೆಗೆ ಗುರಿಯನ್ನು ಮುಟ್ಟಬಹುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ವೃತ್ತಿ ಕೇಂದ್ರದ ಸಂಯೋಜಕ ಪ್ರೊ.ಆರ್.ಮಹೇಶ್ ಹೇಳಿದರು.

ನಗರದ ಮಾನಸಗಂಗೋತ್ರಿಯ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ವಿಚಾರ ಸಂಕಿರಣ ಕೊಠಡಿಯಲ್ಲಿ ಬುಧವಾರ ನಡೆದ ಉದ್ಯೋಗಾರ್ಹತೆ, ಸಂವಹನ ಮತ್ತು ಮೃದು ಕೌಶಲ್ಯ ಕುರಿತು ಆಯೋಜಿಸಲಾಗಿದ್ದ ರಾಷ್ಟ್ರೀಯ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕೌಶಲ್ಯ ಎನ್ನುವುದು ನಮ್ಮ ಅಧ್ಯಯನದಲ್ಲೇ ಇರುತ್ತದೆ. ಅಧ್ಯಯನ ಮೂಲಕವೇ ನಮಗೆ ಗೊತ್ತಿಲ್ಲದ ಹಾಗೆ ಕೆಲವು ಕೌಶಲ್ಯಗಳು ನಮ್ಮೊಂದಿಗೆ ಬಂದಿರುತ್ತದೆ. ಅಧ್ಯಯನದಲ್ಲಿ ಎಷ್ಟೇ ಜ್ಞಾನವಿದ್ದರೂ ಕೂಡ ಸ್ಮಾರ್ಟ್ ವರ್ಕ್ ತುಂಬಾ ಮುಖ್ಯ. ನಮಗೆ ಕೆಲಸ ಮೇಲೆ ಪ್ರಾಬಲ್ಯ ಬೀರುವ ಜ್ಞಾನ, ಕೌಶಲ್ಯ ನಮ್ಮಲ್ಲಿ ಇರಬೇಕು ಎಂದು ಹೇಳಿದರು. ರೇಷ್ಮೆ ಕೃಷಿಯಲ್ಲೇ ಹಲವಾರು ಕೌಶಲ್ಯಗಳನ್ನು ಕಲಿಯಬಹುದು. ರೇಷ್ಮೆ ಕೃಷಿಗೆ ಕಾರ್ಮಿಕರ ಅವಶ್ಯಕತೆ ಇದೆ. ಆ ಕಾರ್ಮಿಕರಿಗೆ ಉತ್ತಮ ಕೌಶಲ್ಯದ ಅವಶ್ಯಕತೆ ಇದೆ. ರೇಷ್ಮೆ ನೂಲನ್ನು ತೆಗೆಯಬೇಕಾದರೆ 7 ರಿಂದ 8 ಗೂಡುಗಳು ಒಂದೇ ರೀತಿ ಆಡುತ್ತಿರಬೇಕು. ಒಂದು ಗೂಡು ಆಚೆ ಬಂದರೆ ತಕ್ಷಣ ಅದನ್ನು ಸರಿಪಡಿಸುವ ಕಲೆ ಅವರಲ್ಲಿ ಇರುಬೇಕು ಎಂದರು.

ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಬಿ.ಸಣ್ಣಪ್ಪ




ಮಾತನಾಡಿ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವೇ ಈಗ ಉತ್ತಮ ಜ್ಞಾನದ ಜತೆಗೆ ಕೌಶಲ್ಯಗಳನ್ನು ಬೆಳೆಸಿ ಎಂದು ಆದೇಶಿಸಿದೆ. ಇಂದು ಕೆಲಸ ಹೋದರೆ ಸರ್ಟಿಫಿಕೇಟ್ ಜತೆಗೆ ನಮ್ಮಲ್ಲಿರುವ ಕೌಶಲ್ಯಗಳನ್ನು ನೋಡುತ್ತಾರೆ. ನಮ್ಮಲ್ಲಿರುವ ಕೌಶಲ್ಯಗಳನ್ನುಉತ್ತಮಗೊಳಿಸಿ ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ, ರೇಷ್ಮೆ ಕೇಷಿ ವಿಜ್ಞಾನ ಅಧ್ಯಯನ ವಿಭಾಗದ ಪ್ರೊ.ಟಿ.ಎಸ್.ಜಗದೀಶ್ ಕುಮಾರ್ ಹಾಜರಿದ್ದರು.

# ಆಯಸಿಡ್ ಅಟ್ಯಾಕ್, ದರೋಡೆ ನಾಟಕ: ಚಿನ್ನದಂಗಡಿಯ ಮಾಲೀಕನ ಬಂಧನ

ಜಿತೇಂದ್ರ ಸಿಂಗ್. ರಾಜಸ್ಥಾನ ಮೂಲದ ಈತ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿ ಗ್ರಾಮದಲ್ಲಿ ಮಹಾಲಕ್ಷ್ಮಿ ಜುವೆಲರಿ ಎಂಬ ಚಿನ್ನದ ಅಂಗಡಿ ಇಟ್ಟಿದ್ದಾನೆ. ಕಳೆದ ಕೆಲ ದಿನಗಳ ಹಿಂದೆ ಈತನ ಅಂಗಡಿಗೆ ನುಗ್ಗಿದ ದುಷ್ಕರ್ಮಿಗಳು ಜಿತೇಂದ್ರ ಸಿಂಗ್ ಮುಖಕ್ಕೆ ಆಯಸಿಡ್ ಹಾಕಿ ಅಂಗಡಿಯಲ್ಲಿದ್ದ 170 ಗ್ರಾಂ ಚಿನ್ನ ಹಾಗೂ 8 ಕೆಜಿ ಬೆಳ್ಳಿಯನ್ನ ದರೋಡೆ ಮಾಡಕೊಂಡು ಪರಾರಿಯಾಗಿದ್ದರು. ಇದಾದ ಬಳಿಕ ಈ ಬಗ್ಗೆ ಜಿತೇಂದ್ರ ಪೊಲೀಸ್ ಠಾಣೆ ದೂರು ನೀಡಿದ್ದಾನೆ.

ದೂರನ್ನು ಆಧರಿಸಿ ತನಿಖೆಗೆ ಇಳಿದ ಪೊಲೀಸರಿಗೆ ಆರಂಭದಲ್ಲಿ ಗೊಂದಲಗಳು ಸೃಷ್ಟಿಯಾಗಿವೆ. ಅಂಗಡಿಯಲ್ಲಿದ್ದ ಸಿಸಿಟಿವಿಯ ಡಿವಿಆರ್ ಕೂಡ ನಾಪತ್ತೆಯಾಗಿತ್ತು. ಅಲ್ಲದೇ ಬೇರೆ ಯಾವುದೇ ಸಾಕ್ಷಿಗಳು ಸಹ ಸಿಕ್ಕಿರಲಿಲ್ಲ. ನಂತರ ಜಿತೇಂದ್ರ ಮುಖಭಾವನ್ನ ಗಮನಿಸಿದಾಗ ಪೊಲೀಸರಿಗೆ ಅನುಮಾನ ವ್ಯಕ್ತವಾಗಿದೆ. ಆಯಸಿಡ್ ಹಾಕಿದ್ದರೆ ಕಣ್ಣಿನ ಭಾಗಕ್ಕೂ ಸಹ ಹಾನಿಯಾಗುತ್ತಿತ್ತು, ಆದರೆ ಇಲ್ಲಿ ಜಿತೇಂದ್ರ ಮುಖಕ್ಕೆ ಯಾವುದೋ ರಾಸಾಯನಿಕವನ್ನ ಲೇಪನ ಮಾಡಿದ ಹಾಗೆ ಕಂಡಿದೆ. ಅಲ್ಲದೇ ನಾಪತ್ತೆಯಾಗಿದ್ದ ಸಿಸಿಟಿವಿ ಡಿವಿಆರ್ ಕೆರೆಯಲ್ಲಿ ಪತ್ತೆಯಾಗಿದೆ. ಬಳಿಕ ಪೊಲೀಸರು ಜಿತೇಂದ್ರನನ್ನ ತನಿಖೆ ನಡೆಸಿದಾಗ ಈ ದರೋಡೆ ಮಾಡಿಸಿರುವುದು ಜಿತೇಂದ್ರನೇ ಎಂಬುದು ಬೆಳಕಿಗೆ ಬಂದಿದೆ. ಮೈಸೂರಿನಲ್ಲಿ ಜಿತೇಂದ್ರ ಚಿನ್ನ ಖರೀದಿಗೆ ಸಾಲ ಪಡೆದಿದ್ದ. ಜೊತೆಗೆ ಕೆಲವರ ಬಳಿ ಒಡವೆಗಳನ್ನು ಅಡವಿಟ್ಟುಕೊಂಡಿದ್ದ. ಚಿನ್ನಾಭರಣ ಗಿರವಿ ಇಟ್ಟವರನ್ನು ಯಾಮಾರಿಸುವ ಸಲುವಾಗಿ ಆಯಸಿಡ್ ಅಟ್ಯಾಕ್ ಮತ್ತು ದರೋಡೆ ನಾಟಕ ಆಡಿದ್ದಾನೆ. ಜಿತೇಂದ್ರ ತನ್ನ ಮುಖಕ್ಕೆ ಚಿನ್ನಕ್ಕೆ ಹಾಕುವ ರಾಸಾಯನಿಕವನ್ನು ಬಳಿದುಕೊಂಡು ನಾಟಕ ಮಾಡಿದ್ದಾನೆ. ತನ್ನ ಅಂಡಿಯ ಚಿನ್ನ, ಬೆಳ್ಳಿಯನ್ನು ಸ್ನೇಹಿತನ ಬಳಿ ಕೊಟ್ಟಿದ್ದಾನೆ. ನಂತರ ರಾಜಸ್ತಾನಕ್ಕೆ ಹೋಗುವ ಪ್ಲ್ಯಾನ್ ಸಹ ಈತ ಹಾಕಿಕೊಂಡಿದ್ದನು. ಚಿನ್ನದಂಗಡಿ ಮಾಲೀಕ ಜಿತೇಂದ್ರನನ್ನು ಪೊಲೀಸರು ಬಂಧಿಸಿದ್ದಾರೆ.

## ಕ್ರೆಡೈ ಮೈಸೂರು ಅಧ್ಯಕ್ಷ ಹರೀಶ್ ಶೆಣೈ ಮನವಿ

# ಆಸ್ತಿ ನೊಂದಣಿ ಸಮಸ್ಯೆ ಇತ್ಯರ್ಥಕ್ಕೆ ಮನವಿ

ಮೈಸೂರು: ಸರ್ಕಾರ ಆಸ್ತಿಗಳ ನೋಂದಣಿ, ಖಾತೆ ಮೊದಲಾದವಕ್ಕೆ ಸಂಬಂಧಿಸಿದಂತೆ ಡಿಜಿಟಲೀಕರಣ ಮೊದಲಾದ ಕ್ರಮ ಕೈಗೊಳ್ಳುತ್ತಿರುವುದು ಸ್ವಾಗತಾರ್ಹ. ಆದರೆ ಈ ವೇಳೆಯ ತಾಂತ್ರಿಕ ತೊಂದರೆಗಳಿಂದಾಗಿ ರಿಯಲ್ ಎಸ್ಟೇಟ್ ಉದ್ಯಮ ಹಾಗೂ ಆಸ್ತಿ ಮಾಲೀಕರಿಗೆ ತೊಂದರೆ ಆಗುತ್ತಿದೆ. ಹೀಗಾಗಿ ಸರ್ಕಾರ ಇದನ್ನು ಶೀಘ್ರ ಬಗೆಹರಿಸಬೇಕೆಂದು ಕ್ರೆಡೈ ಮೈಸೂರು ಅಧ್ಯಕ್ಷ ಹರೀಶ್ ಶೆಣೈ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇ–ಖಾತೆ ಅನುಷ್ಠಾನದಲ್ಲಿ ತಾಂತ್ರಿಕ ತೊಂದರೆ ಎದುರಾಗುತ್ತಿವೆ. ನೋಂದಣಿಗೆ ಹೋದ ವೇಳೆ ಸರ್ವರ್ ಸಮಸ್ಯೆ ಎಂದು ಮತ್ತೊಂದು ದಿನಾಂಕ ನೀಡುತ್ತಾರೆ. ಆಗಲೂ ಸಹಾ ಸರ್ವರ್ ಇಲ್ಲ ಎಂಬ ಮಾತು ಸಾಮಾನ್ಯವಾಗಿ ಕೇಳಿ ಬರುತ್ತಿದೆ. ಇದಲ್ಲದೆ ಸ್ಥಳೀಯ ದತ್ತಾಂಶಗಳ ಕೊರತೆಯಿಂದಾಗಿ ಸಾವಿರಾರು ಅರ್ಜಿಗಳು ಬಾಕಿ ಉಳಿದಿವೆ. ಹೀಗಾಗಿ ತಾಂತ್ರಿಕ ದೋಷ ಕೂಡಲೇ ಸರಿಪಡಿಸಬೇಕು, ಇ– ಖಾತೆ ನೀಡಲು ಕಾಲಮಿತಿ ನಿಗದಿಗೊಳಿಸಬೇಕು, ವ್ಯವಸ್ಥೆ ಪೂರ್ಣ ಪ್ರಮಾಣದಲ್ಲಿ ಸರಿ ಹೋಗುವವರೆಗೂ



ಹಳೇ ಪದ್ಧತಿ ಮುಂದುವರಿಸಬೇಕೆಂದು ಕೋರಿದರು.

ಇದಲ್ಲದೆ ಹೊಸ ಬಡಾವಣೆಗಳಿಗೆ ದರ ನಿಗದಿಪಡಿಸಲು ಕೇಂದ್ರ ಮೌಲ್ಯ ಮಾಪನ ಸಮಿತಿ ಇದೆ. ಆದರೆ ಇದರ ನಿಯಮವನ್ನು ಹಳೇ ಬಡಾವಣೆಗಳಿಗೂ ಅನ್ವಯಿಸುವುದು ಸರಿಯಲ್ಲ. ಇದು ಅವೈಜ್ಞಾನಿಕ ಮಾತ್ರವಲ್ಲ, ಭ್ರಷ್ಟಾಚಾರ, ಆಡಳಿತಾತ್ಮಕ ವಿಳಂಬಕ್ಕೂ ಕಾರಣವಾಗುತ್ತಿದೆ. ಹೀಗಾಗಿ ಹಳೆ ಬಡಾವಣೆಗಳಿಗೆ ಈ ಸಮಿತಿ ವ್ಯಾಪ್ತಿಯಿಂದ ಕೈಬಿಡಬೇಕು, ಕೇವಲ ಉಪ ನೋಂದಣಾಧಿಕಾರಿಗಲ ಮಾರ್ಗಸೂಚಿ ದರದ ಆಧಾರದ ಮೇಲೆ ಸರಳವಾಗಿ ನೋಂದಣಿ ಪ್ರಕ್ರಿಯೆ ನಡೆಸಬೇಕೆಂದರು.

ಉದ್ಯಮಿ ಶ್ರೀಹರಿ ಮಾತನಾಡಿ, ಪ್ರತಿ ವ್ಯವಹಾರಕ್ಕೂ ಜಿಪಿಎ ನೋಂದಣಿ ವೇಳೆ ಜೀವಂತ ಪ್ರಮಾಣಪತ್ರ ಕಡ್ಡಾಯ ಮಾಡಿರುವುದು ಸರಿಯಲ್ಲ. ಇದರಿಂದ ಹಿರಿಯ ನಾಗರೀಕರು ಹಾಗೂ ಅನಿವಾಸಿ ಭಾರತೀಯರಿಗೆ ಸಮಸ್ಯೆಯುಂಟಾಗುತ್ತಿದೆ. ಸ್ವತಃ ತಾವೇ ವ್ಯವಹಾರ ನಡೆಸಲು ಸಾಧ್ಯವಾಗದ ಹಿನ್ನೆಲೆ ಜಿಪಿಎ ಮೊರೆ ಹೋಗುತ್ತಾರೆ. ಆದರೆ ಪ್ರತಿ ವ್ಯವಹಾರಕ್ಕೂ ಹೊಸದಾಗಿ ಜೀವಂತ ಪ್ರಮಾಣ ಪತ್ರ ಅಗತ್ಯ ಎಂಬ ನಿಯಮ ಕೈಬಿಡಬೇಕು ಎಂದು ಮನವಿ ಮಾಡಿದರು. ಗೌರವ ಕಾರ್ಯದರ್ಶಿ ನಾಗರಾಜ್ ವಿ.ಬೈರಿ, ಅನಿಲ್, ಅರಣ್ ಪಂಡಿತ್ ಮೊದಲಾದವರು ಇದ್ದರು.

# 5.55ಕೋಟಿ ರೂ. ಕಾಮಗಾರಿಗೆ ಚಾಲನೆ



ಮೈಸೂರು: ಲೋಕೋಪಯೋಗಿ ಇಲಾಖೆಯ ಅನುದಾನದಡಿ ಬೃಂದಾವನ ಬಡಾವಣೆ ಹಾಗೂ ಯಾದವಗಿರಿ ವ್ಯಾಪ್ತಿಯಲ್ಲಿ ಅಂದಾಜು 5.55 ಕೋಟಿವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್ ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಅಭಿವೃದ್ಧಿ ಕಾಮಗಾರಿಯಲ್ಲಿ ಚರಕ ಆಯುರ್ವೇದ ಆಸ್ಪತ್ರೆ ಮೂಲಕ ರೈಲ್ವೆ ಹಳಿ ಸೇರುವ ರಸ್ತೆ, 2ನೇ ಹಂತ, 8ನೇ ಮುಖ್ಯ ರಸ್ತೆ, ರೈಲ್ವೆ ಹಳಿ ಸಮಾನಾಂತರ ರಸ್ತೆ ದೇವಸ್ಥಾನದವರೆಗೂ, ಬೃಂದಾವನ ಬಡಾವಣೆಯ ಅಡ್ಡ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು. ಗುರುದ್ವಾರ ರಸ್ತೆಯ ಹಿಂಭಾಗ 2ನೇ ಹಂತದ ಅಡ್ಡ ರಸ್ತೆ, ಆಂಜನೇಯ ಸ್ವಾಮಿ ದೇವಸ್ಥಾನ ಕೆಎಸ್‌ಆರ್‌ಟಿಸಿ ಕ್ವಾಟ್ರಸ್ ಮುಂಭಾಗದ ರಸ್ತೆ, ಬೃಂದಾವನ 2ನೇ ಹಂತ ಗುರುದ್ವಾರದ ಪಕ್ಕ ಮಂಜುನಾಥಪುರ ಸೇರುವ ರಸ್ತೆ,ಬೃಂದಾವನ ಬಡವಾಣೆಯಿಂದ ಕೆಐಎಡಿಬಿ ಕ್ಯಾಂಟೀನ್ ರಸ್ತೆ,ಕೆಐಎಬಿಡಿ 1ನೇ ಅಡ್ಡ ರಸ್ತೆ, ಕೆಐಎಬಿಡಿ. 2ನೇ ಅಡ್ಡ ರಸ್ತೆ, ಕೆಐಎಬಿಡಿ 3ನೇ ಅಡ್ಡ ರಸ್ತೆ, ಕೆಐಎಬಿಡಿ 4ನೇ ಅಡ್ಡ ರಸ್ತೆ, ಕೆಐಎಬಿಡಿ 5ನೇ ಅಡ್ಡ ರಸ್ತೆಯ ಕಾಮಗಾರಿ ಒಳಗೊಂಡಿತ್ತು.

ಕಾರ್ಯಕ್ರಮದಲ್ಲಿ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಅಧ್ಯಕ್ಷ ಡಿ.ನಾಗಭೂಷಣ್, ವಾರ್ಡ್ ಅಧ್ಯಕ್ಷ ದಿನೇಶ್, ಮುಖಂಡರಾದ ಟೆಂಟ್ ಶ್ರೀನಿವಾಸ್, ಪ್ರವೀಣ್ ಶೆಟ್ಟಿ , ಸುಶೀಲ ಮರಿಗೌಡ, ಗಿರಿಜಾಂಬ, ಮಂಜುನಾಥ್, ಜೀವನ್ ಪ್ರಕಾಶ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಆಶ್ರಯ ಸಮಿತಿ ಸದಸ್ಯರಾದ ಮಂಜುನಾಥ್, ಇಬ್ರಾಹಿಂ ಸೇರಿ ಇತರರು ಭಾಗಿಯಾಗಿದ್ದರು.

# ವಸಂತಪುರದ ಕೆಲವು ಯುವ ಮುಖಂಡರು ಜೆಡಿಎಸ್ ಸೇರ್ಪಡೆ



ಕೆ.ಆರ್.ಪೇಟೆ,ರಾಜ್ಯ ಕಾಂಗ್ರೆಸ್ ಸರ್ಕಾರವು ಅಸ್ತಿತ್ವಕ್ಕೆ ಬಂದು ಮೂರು ವರ್ಷದ ಸನಿಹಕ್ಕೆ ಬರುತ್ತದೆ. ಆದರೆ ಸರ್ಕಾರವು ಕೇವಲ ಗ್ಯಾರಂಟಿ ಯೋಜನೆಗಳಲ್ಲಿಯೇ ಮುಳುಗಿದೆ. ಇತರೆ ಅಭಿವೃದ್ಧಿ ಶೂನ್ಯವಾಗಿದೆ. ಮಕ್ಕಳ ವಿದ್ಯಾಭ್ಯಾಸದ ವಿದ್ಯಾರ್ಥಿ ವೇತನವನ್ನೂ ಸಹ ನೀಡದೇ ಓದುವ ವಿದ್ಯಾರ್ಥಿಗಳಿಗೂ ತೊಂದರೆ ನೀಡುತ್ತಿದೆ ಎಂದು ಶಾಸಕ ಹೆಚ್.ಟಿ.ಮಂಜು ರಾಜ್ಯ ಸರ್ಕಾರದ ವಿರುದ್ಧ ಅಸಮಧಾನ ವ್ಯಕ್ತಪಡಿಸಿದರು.

ಅವರು ತಾಲ್ಲೂಕಿನ ಶೀಳನೆರೆ ಹೋಬಳಿಯ ವಸಂತಪುರ ಗ್ರಾಮದ ಪ್ರಮುಖ ಮುಖಂಡರಾದ ರಮೇಶ್, ಉದ್ಯಮಿ ರಾಮಣ್ಣ, ಸತೀಶ್ ಶಿವಣ್ಣ ,ಮಂಜುನಾಥ್, ಪ್ರದೀಪ್, ಮಹೇಶ್ ಕೆಂಪೇಗೌಡ ,ಬೋರೇಗೌಡ, ರಮೇಶ್, ರವಿ ,ಕುಮಾರ್,ಅವಿನಾಶ್ ,ಯೋಗೇಶ್ ಮತ್ತಿತರರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರ ಜನಪರ ಆಡಳಿತವನ್ನು ಮೆಚ್ಚಿ ಕಾಂಗ್ರೆಸ್ ಪಕ್ಷವನ್ನು ತೊರೆದು ಜೆಡಿಎಸ್ ಪಕ್ಷವನ್ನು ಸೇರ್ಪಡೆಯಾದ ಹಿನ್ನೆಲೆಯಲ್ಲಿ ಕೆ.ಆರ್.ಪೇಟೆ ಪಟ್ಟಣದ ಬಸವೇಶ್ವರನಗರದಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಪಕ್ಷದ ಶಾಲು ಹೊದಿಸಿ, ಪಕ್ಷದ ಬಾವುಟ ನೀಡಿ ಪಕ್ಷಕ್ಕೆ ಬರಮಾಡಿಕೊಂಡು ರಾಜ್ಯ ಕಾಂಗ್ರೆಸ್ ಸರ್ಕಾರದ ಜನವಿರೋಧಿ ಆಡಳಿತವನ್ನು ಟೀಕೆ ಮಾಡಿದರು. ಕಾಂಗ್ರೆಸ್ ಪಕ್ಷವು ದಲಿತರಿಗೆ ಮೀಸಲಿಟ್ಟ ಸುಮಾರು 20ಸಾವಿರ ಕೋಟಿ ರೂಪಾಯಿಗಳನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿದೆ. ಗ್ರಾಮ ಪಂಚಾಯಿಗಳಿಗೆ ಒಂದೇ ಒಂದು ಅಶ್ರಯ ಮನೆ ನೀಡಿಲ್ಲ. ಇದರಿಂದಾಗಿ ಗ್ರಾಮ ಪಂಚಾಯಿತಿ ಸದಸ್ಯರು ಸರ್ಕಾರದ ವಿರುದ್ಧ ಹಿಡಿಶಾಪ ಹಾಕಿ ತಮ್ಮ ಐದು ವರ್ಷದ ಅಧಿಕಾರದಿಂದ ಇಳಿಯುವಂತಾಗಿದೆ. ಗ್ರಾಮೀಣ ಭಾಗದ ಅಭಿವೃದ್ಧಿಯನ್ನು ಸಂಪೂರ್ಣ ಮರೆತಿರುವ ಸರ್ಕಾರ ಕೇವಲ ತಮ್ಮ ಪಕ್ಷದ ಪ್ರಣಾಳಿಕೆಯ ಐದು ಗ್ಯಾರಂಟಿ ಯೋಜನೆಗಳನ್ನು ಮಾತ್ರ ಗುಣಗಾನ ಮಾಡುತ್ತಿದೆ ಇತರೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳಿಗೆ ಭಾರೀ ಹಿನ್ನೆಡೆ ಉಂಟು ಮಾಡಿದೆ. ಇದರಿಂದ ಗ್ರಾಮೀಣ ಭಾರೀ ಜನಾಕ್ರೋಶ ವ್ಯಕ್ತವಾಗುತ್ತಿದೆ. ಗ್ರಾಮ ಪಂಚಾಯಿತಿಗಳಿಗೆ ಕೇಂದ್ರದ ಅನುಧಾನ ಇಲ್ಲದೇ ಇದ್ದಿದ್ದರೆ ಗ್ರಾಮ ಪಂಚಾಯಿತಿಗಳು ಬಾಗಿಲು ಮುಚ್ಚುವ ಸ್ಥಿತಿ ಉಂಟಾಗುತ್ತಿತ್ತು. ಇದನ್ನು ಮನಗಂಡು ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿನ ಕಾಂಗ್ರೆಸ್ ಕಾರ್ಯಕರ್ತರು ಜೆಡಿಎಸ್ ಪಕ್ಷ ಸೇರ್ಪಡೆಗೆ ಮುಂದೆ ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಶೀಳನೆರೆ ಹೋಬಳಿಯ ವಸಂತಪುರ ಗ್ರಾಮದ ಹಲವಾರು ಕಾಂಗ್ರೆಸ್ ಮುಖಂಡರು ಪಕ್ಷ ತೊರೆದು ಜೆಡಿಎಸ್ ಪಕ್ಷವನ್ನು ಸೇರ್ಪಡೆಯಾಗಿದ್ದಾರೆ ಎಂದರು. ಮುಖಂಡರಾದ ವಸಂತಪುರ ಗ್ರಾಮದ ರಮೇಶ್, ಉದ್ಯಮಿ ರಾಮಣ್ಣ, ಸತೀಶ್, ಶಿವಣ್ಣ, ಮಂಜುನಾಥ್, ಪ್ರದೀಪ್, ಮಹೇಶ್, ಕೆಂಪೇಗೌಡ, ಬೋರೇಗೌಡ, ರಮೇಶ್, ರವಿ ,ಕುಮಾರ್,,ಅವಿನಾಶ್ ,ಯೋಗೇಶ್ ಸೇರಿದಂತೆ ಹಲವು ಮುಖಂಡರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆ ಗೊಂಡರು. ಈ ಸಂದರ್ಭದಲ್ಲಿ ತಾಲ್ಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹಾದೇವೇಗೌಡ, ತಾಲ್ಲೂಕು ರೈತ ಮೋರ್ಚಾ ಅಧ್ಯಕ್ಷ ಹೆಳವೇಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ನಿರ್ದೇಶಕ ಹೆಚ್.ಟಿ.ಲೋಕೇಶ್ ಇತರರು ಇದ್ದರು.

# ಸಾಮಾಜಿಕ ಅಸಮಾನತೆ ಹೊಡೆದೋಡಿಸಲು ಶಿಕ್ಷಣವೇ ಪ್ರಬಲವಾದ ಅಸ್ತ್ರ: ಶಾಸಕ ಮಂಜು



ಕೆ.ಆರ್.ಪೇಟೆ ಪಟ್ಟಣದ ಪ್ರಗತಿ ಆಂಗ್ಲ ಮಾಧ್ಯಮ ಶಾಲೆಯ ಪ್ರಗತಿ ಉತ್ಸವ–2026 ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕಳೆದ 34 ವರ್ಷಗಳಿಂದ ಗುಣಮಟ್ಟದ ಶಿಕ್ಷಣವನ್ನು ನೀಡುವ ಜೊತೆಗೆ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇಕಡ ನೂರಕ್ಕೆ ನೂರರಷ್ಟು ಫಲಿತಾಂಶವನ್ನು ತಂದು ಕೊಡುವ ಮೂಲಕ ಕೆ ಆರ್ ಪೇಟೆ ತಾಲೂಕಿನಲ್ಲಿಯೇ ಮಾದರಿ ಶಿಕ್ಷಣ ಸಂಸ್ಥೆಯಾಗಿ ಹೊರಹೊಮ್ಮಿರುವ ಪ್ರಗತಿ ಪ್ರೌಢಶಾಲೆಯು ಬಡ ವಿದ್ಯಾರ್ಥಿಗಳ ಶೈಕ್ಷಣಿಕ ವಿಕಸನಕ್ಕೆ ದಾರಿ ದೀಪವಾಗಿದೆ ಎಂದು ಅಭಿಮಾನದಿಂದ ಹೇಳಿದರು. ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕರಾದ ಡಾಲು ರವಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಪೋಷಕರು ತಮ್ಮ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಆಸಕ್ತಿ ವಹಿಸಿ ಶಾಲೆ ಮತ್ತು ವಿದ್ಯಾರ್ಥಿಗಳ ನಡುವೆ ಸಂಪರ್ಕ ಸೇತುವೆಯಂತೆ ಕೆಲಸ ಮಾಡಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯನ್ನು ಸಂಭ್ರಮಿಸಿ ನಿಮ್ಮ ಮಕ್ಕಳನ್ನು ಸಮಾಜಕ್ಕೆ ಆಸ್ತಿಯಾಗಿ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಸಮಾಜ ಸೇವಕರು ಹಾಗೂ ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷರಾದ ಮಲ್ಲಿಕಾರ್ಜುನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಿ ಮಾತನಾಡಿ ಶಿಕ್ಷಣದ ಜ್ಞಾನದ ಬೆಳಕಿನ ಶಕ್ತಿಯು ಸಾಮಾಜಿಕ ಅಸಮಾನತೆಗಳನ್ನು ಹೊಡೆದೋಡಿಸಿ ಸಮ ಸಮಾಜವನ್ನು ನಿರ್ಮಾಣ ಮಾಡಲು ಪ್ರಬಲವಾದ ಅಸ್ತ್ರವಾಗಿದೆ ಮಕ್ಕಳು ಏಕಾಗ್ರತೆ ಹಾಗೂ ಶ್ರದ್ಧಾ ಭಕ್ತಿಯಿಂದ ವ್ಯಾಸಂಗ ಮಾಡಿ ಸಾಧನೆ ಮಾಡುವ ಮೂಲಕ ತಮ್ಮ ತಂದೆ ತಾಯಿಗಳು ಹಾಗೂ ಗುರು ಹಿರಿಯರಿಗೆ ಕೀರ್ತಿ ತರಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರಿನ ಕೆಆರ್ ಎಂಎಸ್ ಸಂಯೋಜಕರಾದ ರಾಜು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಪ್ರಗತಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ.ಕೆ. ಕಾಳೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯ ಕೈಗಾರಿಕಾ ಸರಬರಾಜು, ಮಾರಾಟ ಸಹಕಾರ ಮಹಾಮಂಡಲದ ಅಧ್ಯಕ್ಷ ಬಸ್ ಸಂತೋಷ್ ಕುಮಾರ್, ಕ್ಷೇತ್ರ ಸಮನ್ವಯಾಧಿಕಾರಿ ಹೆಚ್.ಕೆ. ಮಂಜುನಾಥ್, ಹಿರಿಯ ಪತ್ರಕರ್ತರಾದ ಬಳ್ಳೇಕೆರೆ ಮಂಜುನಾಥ್, ಅಗ್ರಹಾರ ಬಾಚಹಳ್ಳಿ ಶ್ರೀನಿವಾಸ್, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಮಂಜುನಾಥ, ಪುರಸಭೆ ಮುಖ್ಯ ಅಧಿಕಾರಿಯ ಅಶೋಕ್, ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಯತೀಶ್, ಪ್ರಗತಿ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಟಿ ಶೈಲಜಾ ಆಡಳಿತಾಧಿಕಾರಿ ಡಾ.ಎಂ.ಕೆ. ಮೋನಿಕಾ ಮುಖಂಡ ಬಿಸಿಎಸ್ ಕುಮಾರ್, ಮುಖ್ಯ ಶಿಕ್ಷಕ ಗೋಪಾಲಕೃಷ್ಣ ಸೇರಿದಂತೆ ಮಕ್ಕಳ ಪೋಷಕರು ಹಾಗೂ ಸಾರ್ವಜನಿಕರು ಪ್ರಗತಿ ಉತ್ಸವ ಕಾರ್ಯಕ್ರಮದಲ್ಲಿ ಮಕ್ಕಳು ನೀಡಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಕರಾಟೆ ಪ್ರದರ್ಶನವನ್ನು ವೀಕ್ಷಿಸಿ ಸಂಭ್ರಮಿಸಿದರು.

# ಕುರುಬಾರಹಳ್ಳಿ ಲಿಂಗಾಬುದಿ ಕೆರೆ ಮರುಸ್ಥಾಪನೆಗೆ ಆಗ್ರಹ



ಮೈಸೂರು: ತಾಲೂಕಿನ ಕಸಬಾ ಹೋಬಳಿ ಕುರುಬಾರಹಳ್ಳಿ ಗ್ರಾಮದ ಸರ್ವೆ ನಂಬರ್ 4 ರಲ್ಲಿ ಮುಡಾ ವತಿಯಿಂದ ನಿರ್ಮಿಸಿರುವ ನಿವೇಶನಗಳು ಪ್ರಕೃತಿಯ ಜಲಮೂಲಗಳಿಗೆ ಹಾನಿ ಉಂಟು ಮಾಡುತ್ತಿವೆ. ಹೀಗಾಗಿ ಇಲ್ಲಿ ನಿವೇಶನ ತೆರವುಗೊಳಿಸಿ ದೊಡ್ಡಕೆರೆ ಹಾಗೂ ಲಿಂಗಾಂಬುದಿ ಕೆರೆ ಪುನಃ ಸ್ಥಾಪಿಸುವ ಕೆಲಸ ಮಾಡಬೇಕೆಂದು ಪರಿಸರ ಸಂರಕ್ಷಣಾ ವೇದಿಕೆ ಅಧ್ಯಕ್ಷ ಗಿರೀಶ್ ದೇವರಮನಿ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಪ್ರದೇಶದಲ್ಲಿ ಸಾಂಪ್ರದಾಯಿಕ ಕಟ್ಟೆ ಹಾಗೂ ಜಲ ಮಾರ್ಗಗಳಿಗೆ ಮುಡಾ ನಿವೇಶನಗಳಿಂದ ಹಾನಿಯುಂಟಾಗಿದೆ. ಭೂಗರ್ಭ ಜಲ ಮಟ್ಟ ಕುಸಿಯುವ ಆತಂಕ ಎದುರಾಗಿದೆ. ಹೀಗಾಗಿ ನಗರದ ಪರಿಸರ ಸಮತೋಲನ ಮತ್ತು ಭವಿಷ್ಯದ ನೀರಿನ ಭದ್ರತೆಗಾಗಿ ಈ ಜಲ ಮೂಲಗಳನ್ನು ಸಂರಕ್ಷಿಸಬೇಕೆಂದು ಒತ್ತಾಯಿಸಿದರು. ಹಾನಿಗೊಳಗಾಗಿರುವ ಸಾಂಪ್ರದಾಯಿಕ ಕಟ್ಟೆಗಳನ್ನು ಪುನಃ ಸ್ಥಾಪಿಸಿ ಸಂರಕ್ಷಿಸಬೇಕು, ದೊಡ್ಡ ಕೆರೆಯನ್ನು ಮೂಲ ಪರಿಸ್ಥಿತಿಗೆ ತಂದು ಪುನರುಜ್ಜೀವನಗೊಳಿಸಬೇಕು, ಪರಿಸರ ಹಾನಿಗೆ ಕಾರಣವಾಗಿ ಯೋಜನೆಗಳನ್ನು ಪರಿಶೀಲಿಸಬೇಕು, ಒಂದು ವೇಳೆ ಈ ಕುರಿತು 15 ದಿನಗಳೊಳಗೆ ಕ್ರಮ ಕೈಗೊಳ್ಳದಿದ್ದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಸಲ್ಲಿಸಲಾಗುವುದೆಂದರು. ಎಸ್.ಮಾಲ ತೇಶ್, ವಿಜಯ್‌ಕುಮಾರ್, ಎಂ. ಶಿವಕುಮಾರ್ ಇದ್ದರು.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಮೈಸೂರು ಸಾರ್ವಜನಿಕ ಶಿಕ್ಷಣ ಇಲಾಖೆ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

**ಸರ್ಕಾರಿ ಪ್ರೌಢಶಾಲೆ ಹಿಟ್ನೆಹೆಬ್ಬಾಗಿಲು,**

ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ – 571107.

Email: ghsrmsahhb@gmail.com

DISE CODE: 29261013001 KSEEB CODE: EE 0576

Mob: 7338569451

ಸಂ: ಸಶಕ/ಸಿ1/ಪಿ.ಎಂ.ಶ್ರೀ/ ಅನುಮೋದನೆ/36/2025–26 ದಿ: 09.02.2026

**ಅಲ್ಪಾವಧಿ ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ ಬಗ್ಗೆ**

(ದ್ವಿ–ಲಕೋಟೆಯ ಮುಖಾಂತರ)

ಸರ್ಕಾರಿ ಪಿ.ಎಂ.ಶ್ರೀ. ಪ್ರೌಡ ಶಾಲೆ, ಹಿಟ್ಟೆ ಹೆಬ್ಬಾಗಿಲು, ಪಿರಿಯಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ ಇವರಿಗೆ ಯೋಗಮ್ಯಾಟ್‌ಗಳು, ವಿಜ್ಞಾನ ಪ್ರಯೋಗಾಲಯದ ಉಪಕರಣಗಳು, ಸ್ಕೂಲ್ ಬ್ಯಾಂಡ್‌ಸೆಟ್ ಯೂನಿಫಾರಂಗಳು, ಬ್ಯಾಂಡ್‌ಸೆಟ್ ಶೂ ಮತ್ತು ಶಾಕ್ಸ್. **ಚಾಲ್ತಿಗೆ ಬರುವ ದಿನಾಂಕ:** 16.02.026 **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 23.02.2026 ಸಂಜೆ 4.30 ಗಂಟೆಯ ಒಳಗೆ. **ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 24.02.2026 ಮಧ್ಯಾಹ್ನ 1.00 ಗಂಟೆ ನಂತರ. **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 25.02.2026 **ಬೆಳಿಗ್ಗೆ 11.00 ಗಂಟೆಯ ಒಳಗೆ**

● ಮೇಲ್ಕಂಡ ಕೊಷ್ಟಕದಲ್ಲಿ ನಮೂದಿಸಿರುವ ಸಾಮಾಗ್ರಿಗಳು ಹಾಗೂ ಉಪಕರಣಗಳ ಪ್ರಕಟಣೆಯನ್ನು ನಿಯಮಾನುಸಾರ ಅತ್ಯಂತ ಕನಿಷ್ಠ ದರದಲ್ಲಿ ಪತ್ರಿಕೆಯ ಮುಖಾಂತರ ಪ್ರಕಟಿಸುವಂತೆ ಕೋರಲಾಗಿದೆ ಹಾಗೂ ಪ್ರತಿ ವಿಷಯಕ್ಕೆ 2% ಇ.ಎಂ.ಡಿ ಮೊತ್ತವನ್ನು ಸಲ್ಲಿಸುವುದು. ● ಸದರಿ ಪ್ರಕಟಣೆಯ ವೆಚ್ಚವನ್ನು ಶಾಲೆಯ "ಜಾಹೀರಾತಿನ ವೆಚ್ಚ" ಶೀರ್ಷಿಕೆಯಿಂದ ಭರಿಸತಕ್ಕದ್ದು.

ಟೆಂಡರ್ ಅರ್ಜಿ ಪಡೆಯುವ ಸ್ಥಳ: ಮುಖ್ಯಶಿಕ್ಷಕರ ಕಛೇರಿ, ಸರ್ಕಾರಿ ಪಿ.ಎಂ.ಶ್ರೀ. ಪ್ರೌಡ ಶಾಲೆ, ಹಿಟ್ಟೆ ಹೆಬ್ಬಾಗಿಲು, ಪಿರಿಯಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ಮೈಸೂರು ಇಲ್ಲಿ ಬೆಳಿಗ್ಗೆ 10:00 ರಿಂದ ಸಂಜೆ 4:30 ರವರೆಗೆ (ಮೊಬೈಲ್ ಸಂಖ್ಯೆ: 9481664125)

ಸಹಿ/–ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢ ಶಾಲೆ (RMSA)

DIPR/DDMYS/1678/KSMCA/952/2025-26

# 21ಕ್ಕೆ ಗಾಂಪರ ಗುಂಪು ನಾಟಕ



ಮೈಸೂರು: ಬೆಂಗಳೂರು ಪ್ಲೇರ?ಸ್ ಥಿಯೇಟರ್ ಅಸೋಸಿಯೇಷನ್ ವತಿಯಿಂದ ಫೆ.21ರ ಸಂಜೆ 5ಕ್ಕೆ ಮತ್ತು 7ಕ್ಕೆ ರಂಗಾಯಣದ ಕಿರು ರಂಗಮಂದಿರದಲ್ಲಿ ಗಾಂಪರ ಗುಂಪು ಎಂಬ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ನಿರ್ದೇಶಕ ಶ್ರೀಪಾದ ಎಸ್.ಶ್ರೀವತ್ಸ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕನ್ನಡ ನಾಟಕ ಲೋಕದಲ್ಲಿ ತಂಡ ತನ್ನದೇ ಆದ ಛಾಪು ಮೂಡಿಸಿದೆ. ಈಗ ಪ್ರದರ್ಶಿಸುತ್ತಿರುವುದು ಸಹಾ ಕನ್ನಡದ ಪ್ರಸಿದ್ಧ ನಾಟಕವೂ ಆಗಿದೆ. ಈ ನಾಟಕ ಇದಕ್ಕು ಮುನ್ನ ದೂರದರ್ಶನ, ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರದರ್ಶನಗೊಂಡಿದೆ. ಇದು ಸಾಮಾಜಿಕ ಪ್ರಸ್ತುತತೆಯೊಂದಿಗೆ ಮನಮುಟ್ಟುವ ಕಥನ, ಪ್ರಭಾವಶಾಲಿ ಅಭಿನಯಕ್ಕೆ ಖ್ಯಾತವಾಗಿದೆ ಎಂದು ವಿವರಿಸಿದರು. ತಂಡದ ಚೇತನ್ ಕಿಶೋರ್, ಶ್ರೀನಿಧಿ ಹಾಜರಿದ್ದರು.

ವರ್ತಮಾನ

ಜಾಹಿರಾತಿಗೆ ಉತ್ತಮ ಮಾಧ್ಯಮ

# ಭಾರತೀಯ ಅಂಚೆ ಸಾಂಸ್ಕೃತಿಕ ಸಮ್ಮೇಳನ



ಮೈಸೂರು: ಮೈಸೂರಿನಲ್ಲಿ ನಡೆಯುತ್ತಿರುವ 38ನೇ ಅಖಿಲ ಭಾರತೀಯ ಅಂಚೆ ಸಾಂಸ್ಕೃತಿಕ ಸಮ್ಮೇಳನದ ಎರಡನೇ ದಿನದ ಸ್ಪರ್ಧೆಗಳಲ್ಲಿ 11 ಪ್ರಥಮ, 13 ದ್ವಿತೀಯ ಮತ್ತು 2 ತೃತೀಯ ಬಹುಮಾನಗಳನ್ನು ಗಳಿಸುವ ಮೂಲಕ ಕರ್ನಾಟಕ ಅಂಚೆ ವೃತ್ತ ಮೊದಲ ಸ್ಥಾನವನ್ನು, 14 ಪ್ರಥಮ, 4 ದ್ವಿತೀಯ ಮತ್ತು 1 ತೃತೀಯ ಬಹುಮಾನಗಳನ್ನು ಪಡೆಯುವ ಮೂಲಕ ಕೇರಳ ಅಂಚೆ ವೃತ್ತ ಎರಡನೇ ಸ್ಥಾನವನ್ನು, ಒಟ್ಟು 9 ಬಹುಮಾನಗಳನ್ನು ಪಡೆಯುವ ಮೂಲಕ ಒಡಿಶಾ ಅಂಚೆ ವೃತ್ತವು ಮೂರನೇ ಸ್ಥಾನವನ್ನು ಕಾಪಾಡಿಕೊಂಡಿತು.

ಕಿರಿಯರ ವಿಭಾಗದ ಕರ್ನಾಟಕ ಶೈಲಿಯ ಜಾನಪದ ಗಾಯನದಲ್ಲಿ ಕರ್ನಾಟಕ ಅಂಚೆ ವೃತ್ತದ ಚಾರ್ಮಿ ಪ್ರಥಮ, ಒಡಿಸ್ಸಿ ನೃತ್ಯದಲ್ಲಿ ದ್ವಿತೀಯ ಬಹುಮಾನವನ್ನು ಪಲ್ಲವಿ ಎಲ್ ಕೊಡಿಯ, ಹಿರಿಯರ ವಿಭಾಗದ ಕರ್ನಾಟಕ ಮತ್ತು ಹಿಂದೂಸ್ಥಾನಿ ಶೈಲಿಯ ಜಾನಪದ ಗಾಯನದಲ್ಲಿ ಪ್ರಥಮ ಮತ್ತು ತೃತೀಯ ಬಹುಮಾನವನ್ನು ಶಾಂಭವಿ ದೇಗಾವಿ ಮಠ್, ಕಿರಿಯರ ವಿಭಾಗದ ಹಿಂದೂಸ್ಥಾನಿ ಶೈಲಿಯ ಜಾನಪದ ಗಾಯನದಲ್ಲಿ ಪ್ರಥಮ ಬಹುಮಾನವನ್ನು ಪ್ರದ್ಯುಮ್ ಕೌಶಿಕ್, ಹಿರಿಯರ ವಿಭಾಗದ ಹಿಂದೂಸ್ಥಾನಿ ಶೈಲಿಯ ಪಿಟೀಲು ವಾದನದಲ್ಲಿ ಪ್ರಥಮ ಬಹುಮಾನ ಸ್ಪರ್ಶ, ಹಿರಿಯರ ವಿಭಾಗದ ಭರತ ನಾಟ್ಯದಲ್ಲಿ ಪ್ರಥಮ ಶೃಷ್ಠಿ, ಕಿರಿಯರ ವಿಭಾಗದ ಸಾತ್ರಿಯ ನೃತ್ಯದಲ್ಲಿ ದ್ವಿತೀಯ ಪುಣ್ಯಶ್ರೀ, ಕಿರಿಯರ ವಿಭಾಗದ ಮೋಹಿನಿ ಆಟ್ಟಂ ನೃತ್ಯದಲ್ಲಿ ದ್ವಿತೀಯ ಸೇರಿ ಹಲವರು ಬಹುಮಾನಗಳನ್ನು ಪಡೆದರು. ಕೇರಳ ಅಂಚೆ ವೃತ್ತದ ನಿರಂಜನಾ ಕೆ.ಎಸ್.ಕಿರಿಯರ ವಿಭಾಗದ ಭರತನಾಟ್ಯಂನಲ್ಲಿ ಪ್ರಥಮ, ದುರ್ಗಾರಾಂ ಹಿರಿಯರ ವಿಭಾಗದ ಮೋಹಿನಿ ಆಟ್ಟಂನಲ್ಲಿ ಪ್ರಥಮ, ಗೌತಮ್ ಗಣೇಶ್ ಹಿರಿಯರ ವಿಭಾಗದ ಕಥಕಳಿ ನೃತ್ಯದಲ್ಲಿ ಪ್ರಥಮ, ನಯನ ವಾಸುದೇವ್ ಎನ್ ಅವರು ಹಿರಿಯರ ವಿಭಾಗದ ಕರ್ನಾಟದ ಶೈಲಿ ಜಾನಪದ ಗಾಯನದಲ್ಲಿ ದ್ವಿತೀಯ ಬಹುಮಾನ ಮತ್ತು ಕೆ. ಎನ್. ಶಿವಾನಂದನ ಎನ್ ಅವರು ಕಿರಿಯರ ವಿಭಾಗದ ಕರ್ನಾಟಕ ಶೈಲಿ ಜಾನಪದ ಗಾಯನದಲ್ಲಿ ದ್ವಿತೀಯ ಬಹುಮಾನವನ್ನು ಪಡೆದರು. 21 ಅಂಚೆ ವೃತ್ತಗಳ 335 ಅಂಚೆ ನೌಕರರು ಭಾಗವಹಿಸಿದ್ದು ಅಂಚೆ ನೌಕರರಲ್ಲಿ ಸಾಂಸ್ಕೃತಿಕ ವಿನಿಮಯ ಮತ್ತು ರಾಷ್ಟ್ರೀಯ ಏಕೀಕರಣವನ್ನು ಬಲಪಡಿಸುವ ಪ್ರಮುಖ ವೇದಿಕೆಯಾಗಿದೆ.

# ನಾಳೆ 'ಓಪನ್ ಹೌಸ್' ಕಾರ್ಯಕ್ರಮ

ಮೈಸೂರು:– ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯ (ಸಿಪೆಟ್)ವತಿಯಿಂದ ಫೆಬ್ರವರಿ 20 ಮತ್ತು 21 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ 'ಓಪನ್ ಹೌಸ್' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ವಿದ್ಯಾರ್ಥಿಗಳು ಸಾರ್ವಜನಿಕರು ಸಂಸ್ಥೆಗೆ ಬೇಟಿ ನೀಡಿ ಪ್ಲಾಸ್ಟಿಕ್ ಕೈಗಾರಿಕೆಯಲ್ಲಿ ಬಳಸುವ ಆಧುನಿಕ ತಂತ್ರಜ್ಞಾನ ಮತ್ತು ಸುಧಾರಿತ ಯಂತ್ರೋಪಕರಣಗಳ ಖತಜ ಆಜಟಅ ವೀಕ್ಷಿಸುವ ಅವಕಾಶ ಮತ್ತು ಪ್ರಯೋಗಾಲಯಗಳು (ಲ್ಯಾಬ್‌ಗಳು), ಟೂಲ್ ರೂಂ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳ ತಯಾರಿಕಾ ಘಟಕಗಳನ್ನು ವೀಕ್ಷಿಸಬಹುದಾಗಿದೆ. ಅನುಭವಿ ಅಧ್ಯಾಪಕರು, ಕೈಗಾರಿಕಾ ತಜ್ಞರಿಂದ ಉಪನ್ಯಾಸಗಳನ್ನು ಕೇಳಬಹುದು ಮತ್ತು ವೃತ್ತಿ ಮಾರ್ಗದರ್ಶನ, ವಿದ್ಯಾರ್ಥಿಗಳಿಗೆ ಖಟಣಜಡಿಟ್ಘುಠಿ ಸೌಲಭ್ಯ, ಮತ್ತು ಉದ್ಯೋಗಾವಕಾಶಗಳ ಕುರಿತು ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ: ದೂ:9480253024 / 97914318 27 ನ್ನು ಸಂಪರ್ಕಿಸಬಹುದಾಗಿದೆ ಎಂದು ಸಿಪೆಟ್ ಸಂಸ್ಥೆಯ ಪ್ರಿನ್ಸಿಪಾಲ್ ನಿರ್ದೇಶಕ ಮತ್ತು ಮುಖ್ಯಸ್ಥ ಶ್ರೀಕಾಂತ್ ಶಿರಾಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೈ ಮತ್ತೆ ಗೆಲ್ಲಲು ಡಿಕೆಶಿ ಸಿಎಂ ಮಾಡಿ



ಮೈಸೂರು: ಕೆಪಿಸಿಸಿ ಅಧ್ಯಕ್ಷರನ್ನು ಸಿಎಂ ಆಗಿ ಆಯ್ಕೆ ಮಾಡುವ ಪದ್ಧತಿ ಕಾಂಗ್ರೆಸ್‌ನಲ್ಲಿ ಬಹಳ ಹಿಂದಿನಿಂದ ಇದೆ. ಹೀಗಿರುವಾಗ ಡಿ.ಕೆ.ಶಿವಕುಮಾರ್ ಅಂತಹ ನಾಯಕನನ್ನು ಮುಖ್ಯಮಂತ್ರಿಯಾಗಿ ಈ ಅವಧಿಯಲ್ಲಿ ಮಾಡಿದರೆ ಕಾಂಗ್ರೆಸ್ ಮತ್ತೆ 140 ಸ್ಥಾನ ಗೆಲುವು ಸಾಧಿಸಲಿದೆ ಎಂದು ನಗರ ಕಾಂಗ್ರೆಸ್ ಸಮಿತಿ ಮಾಧ್ಯಮ ವಕ್ತಾರ ಟಿ.ಶ್ರೀನಿವಾಸ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಅವಧಿಯಲ್ಲಿ ಡಿಕೆಶಿ ಅವರನ್ನು ಮುಖ್ಯಮಂತ್ರಿ ಮಾಡಿದರೆ 140 ಸ್ಥಾನ ಮತ್ತೆ ಬರುವುದರಲ್ಲಿ ಯಾವುದೇ ಅನುಮಾನವಿಲ್ಲ. ಕೋವಿಡ್ ನಲ್ಲಿ ಅಧಿಕಾರ ಸ್ವೀಕರಿಸಿ ದಾಖಲೆ ಸಂಘಟನೆ ಮಾಡಿದರು. ಆಂಧ್ರ ಚುನಾವಣೆಯಲ್ಲಿಯೂ ಯಶಸ್ವಿ ಸೇವೆ ಸಲ್ಲಿಸಿದ್ದಾರೆ. ರಾಜ್ಯ ರಾಜಕೀಯದ ಟ್ರಬಲ್ ಶೂಟರ್ ಎಂದೇ ಖ್ಯಾತಿ ಪಡೆದಿದ್ದಾರೆ. ಸುಮ್ಮನೆ ಮಾತನಾಡುವವರಿಗಿಂತ ಶ್ರಮ, ಕೆಲಸ ಮಾಡುವವರಿಗೆ ಮುಖ್ಯಮಂತ್ರಿ ಸ್ಥಾನ ಸಿಗಬೇಕಿದೆ. ಡಿ.ಕೆ.ಶಿವಕುಮಾರ್ ಮುಖ್ಯಮಂಥ್ರಿ ಆಗಲಿ ಎಂದು ಹರಕೆ ಸಹ ಕಟ್ಟಿಕೊಂಡಿದ್ದು, ಸಿಎಂ ಘೋಷಣೆಯಾದರೆ ಬೆಟ್ಟಕ್ಕೆ ಮೆಟ್ಟಿಲು ಹತ್ತಿ ನೂರೊಂದು ಈಡುಗಾಯಿ ಒಡೆದು ಹರಕೆ ತಿರಿಸುತ್ತೇನೆ. ಈ ಸಂಬಂಧ ಕಾಂಗ್ರೆಸ್ ಹೈಕಮಾಂಡ್ ಗೊಂದಲ ನಿವಾರಣೆ ಮಾಡಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಒಮ್ಮೆ ಮಾತನಾಡುವ ವೇಳೆ ಕಾಂಗ್ರೆಸ್ ಶಾಸಕ ಹಾಗೂ ಮುಖಂಡರನ್ನು ಬೀದಿ ನಾಯಿಗಳಿಗೆ ಹೋಲಿಸಿರುವುದು ಸರಿಯಲ್ಲ. ಇದು ಅವರಿಗೆ ಶೋಭೆ ತರುವ ಮಾತಾಗಿಲ್ಲ ಇದನ್ನು ಖಂಡಿಸುತ್ತೇನೆ. ಮಹದೇವಪ್ಪ ಈ ಹಿಂದೆ ಜನತಾದಳದಲ್ಲಿದ್ದವರಾ ಗಿದ್ದು, ಕಾಂಗ್ರೆಸ್‌ಗೆ ಸೇರ್ಪಡೆ ಆಗಿ ಸಚಿವರೂ ಆಗಿದ್ದಾರೆ. ಹೀಗಿದ್ದರೂ ಅವರು ಈ ರೀತಿ ಮಾತನಾಡಿರು ವದು ಸರಿಯಲ್ಲ. ಇದೇ ವೇಳೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಶಾಸಕರು ಆಯ್ಕೆಯಾಗಲು ಶ್ರಮಿಸಿದ್ದಾರೆಂದರು. ಮೈಸೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಕೆಲಸ ಆಗುತ್ತಿಲ್ಲ. ಕಾರ್ಯಕರ್ತರಿಗೆ ಅಧಿಕಾರ ಸಿಗಬೇಕು. ಈ ದಿಸೆಯಲ್ಲಿ ನಿಗಮ, ಮಂಡಳಿಗಳ ನೇಮಕಾತಿ ನೇಮಕ ಮಾಡಬೇಕೆಂದರು. ನಗರ ಕಾರ್ಯದರ್ಶಿ ದಿನೇಶ್ ಉಪಸ್ಥಿತರಿದ್ದರು.

# 22ಕ್ಕೆ ನಗೆ ನಾಟಕ ಪ್ರದರ್ಶನ

ಮೈಸೂರು: ಬೆಂಗಳೂರಿನ ಅಂತರಂಗ ತಂಡದ ವತಿಯಿಂದ ಫೆ. 22 ರಂದು ಸಂಜೆ 7ಕ್ಕೆ ರಂಗಾಯಣದ ಕಿರು ರಂಗಮಂದಿರದಲ್ಲಿ ಕೈಲಾಸಂರ ಹುತ್ತದಲ್ಲಿ ಹುತ್ತ ಎಂಬ ನಗೆ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ತಂಡದ ಕಾರ್ಯದರ್ಶಿ ಅಂಕಲ್ ಶ್ಯಾಮ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಿರ್ವಹಣೆ ತಮ್ಮದೇ ಆಗಿದೆ. ನಗರದ ನಿರಂತರ ಫೌಂಡೇಷನ್ ಈ ಪ್ರದರ್ಶನಕ್ಕೆ ಸಹಕಾರ ನೀಡಿದೆ. ತಮ್ಮ ತಂಡ ಕಳೆದ 46 ವರ್ಷಗಳಿಂದ ರಂಗಕ್ರಿಯೆಯಲ್ಲಿ ತೊಡಗಿಕೊಂಡಿದೆ. ಕನ್ನಡಕ್ಕೊಬ್ಬನೇ ಕೈಲಾಸಂ ಆದ ಟಿ.ಪಿ. ಕೈಲಾಸಂ ರಚಿಸಿರುವ ವಿಭಿನ್ನ ಹಾಸ್ಯ ನಾಟಕ ಇದಾಗಿದೆ. ಮೂಲ ನಿರ್ದೇಶನ ಡಾ.ಬಿ.ವಿ. ರಾಜಾರಾಂ ಅವರದ್ದಾಗಿದ್ದು, ಪರಿಷ್ಕೃತ ನಿರ್ದೇಶನ ಅರ್ಚನಾ ಶ್ಯಾಂ ನಿರ್ವಹಿಸಿದ್ದಾರೆ ಎಂದು ತಿಳಿಸಿದರು. ನಿರಂತರ ಫೌಂಡೇಷನ್‌ನ ಶ್ರೀನಿವಾಸ ಪಾಲಹಳ್ಳಿ ಮಾತನಾಡಿ, ಈ ನಾಟಕದ ಪ್ರತಿಯೊಂದೂ ಸಂಭಾಷಣೆಯಲ್ಲಿ ಹಾಸ್ಯವಿರುವುದರ ಜೊತೆಗೆ ಗಂಭೀರ ಚಿಂತನೆಯೂ ಇದೆ. ಟಿಕೆಟ್ ದರ 150 ರೂ.ಗಳಾಗಿದ್ದು, ಹೆಚ್ಚಿನ ಮಾಹಿತಿಗೆ ದೂ. 98809 14509 ನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಎಚ್.ವಿ. ನಟರಾಜ್, ರಂಗನಾಥರಾವ್, ನಂಜುಂಡರಾವ್ ಇದ್ದರು.



ವೀರ ಮಡಿವಾಳ ಯುವಕರ ಸಂಘದ ಅಧ್ಯಕ್ಷ ವಸಂತ್ ಕುಮಾರ್ ಅಭಿಮತ

# ಮಾಚಿದೇವರ ವಚನಗಳು ಬೆಳಕು ತೋರುವ ದಾರಿದೀಪ




ಎಚ್.ಡಿ.ಕೋಟೆ: 12ನೇ ಶತಮಾನದ ಶರಣ ಚಳವಳಿಯಲ್ಲಿ ಕಾಯಕ ಮತ್ತು ಅಧ್ಯಾತ್ಮವನ್ನು ಒಂದೇ ದಾರಿಯಲ್ಲಿ ನಡೆಸಿದ ಅಪರೂಪದ ವ್ಯಕ್ತಿತ್ವ ಮಡಿವಾಳ ಮಾಚಿ ದೇವರು. 2026 ಫೆ.1ರಂದು ಆಚರಿಸುವ ಜಯಂತಿ ಕೇವಲ ಸ್ಮರಣೆಯ ದಿನವಲ್ಲ,

ಕಾಯಕ–ವಚನ–ದಾಸೋಹ ತತ್ವಗಳನ್ನು ನೆನಪಿಸುವ ಮಹತ್ವದ ಸಂದರ್ಭವೂ ಹೌದು. ವೃತ್ತಿ, ಜಾತಿ, ಸ್ಥಾನಮಾನಗಳ ಅಳತೆಗಳಾಚೆ ಮನುಷ್ಯನ ಮೌಲ್ಯವನ್ನು ನಿರ್ಧರಿಸುವ ದಾರಿಯನ್ನು ಶರಣರು ತೋರಿಸಿದ್ದಾರೆ. ಅದನ್ನು ಬದುಕಿನಲ್ಲೇ ಅನುಷ್ಠಾನಗೊಳಿಸಿದವರಲ್ಲಿ ಮಾಚಿದೇವರು ಪ್ರಮುಖರು ಎಂದು ವೀರ ಮಡಿವಾಳ ಯುವಕರ ಸಂಘದ ಅಧ್ಯಕ್ಷ ವಸಂತ್ ಕುಮಾರ್ ತಿಳಿಸಿದರು. ಪಟ್ಟಣದಲ್ಲಿ ಆಯೋ ಜಿಸಿದ್ದ ವೀರ ಮಡಿವಾಳ ಮಾಚಿದೇವರ ಜಯಂತಿಯಲ್ಲಿ ಮಾತನಾಡಿದರು. ನಮ್ಮ ಸಮಾಜವು ಅಭಿವೃದ್ಧಿ, ಶಿಕ್ಷಣ, ಉದ್ಯೋಗ ಮತ್ತು ಒಗ್ಗಟ್ಟಿನ ಕಡೆಗೆ ದೊಡ್ಡ ಹೆಜ್ಜೆ ಇಡಬೇಕು ಮಡಿವಾಳ ಮಾಚಿದೇವರ ಆಶೀರ್ವಾದ ನಮ್ಮೆಲ್ಲರ ಮೇಲಿರಲಿ ಸಮಾಜದ ಹೆಸರನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯೋಣ. ಮಾಚಿ ದೇವರ ವಚನಗಳು ನಮ್ಮ ಬದುಕಿಗೆ ಬೆಳಕು ತೋರಿಸುವ ದಾರಿ ದೀಪ. ಬಡವರು, ಹಿಂದುಳಿದವರು, ಮಹಿಳೆಯರು, ದುರ್ಬಲ ವರ್ಗಗಳಿಗಾಗಿ ಅವಕಾಶದ ಬಾಗಿಲು ತೆರೆದವರು ಡಾ.ಬಿ.ಆರ್.ಅಂಬೇಡ್ಕರ್ ಅವರು. ಶಿಕ್ಷಣ, ಹೋರಾಟ ಉದ್ಯೋಗ, ಹಕ್ಕು ಇವೆಲ್ಲರಲ್ಲಿ ಎಲ್ಲರಿಗೂ ಸಮಾನ ಅವಕಾಶ ನೀಡುವುದು ಅವರ ಕನಸು. ಮಹಿಳೆಯರ ಗೌರವ ಸಬಲೀಕರಣಕ್ಕೆ ಕೈಜೋಡಿಸಬೇಕು ಮಹಿಳಾ ಸ್ವಸಹಾಯ ಸಂಘಗಳ ಪ್ರತಿ ಹಳ್ಳಿಗಳಲ್ಲಿ ಮಾಡಬೇಕು ಹಾಗೂ ಯುವಕರು ಒಗ್ಗಟ್ಟಾಗಿ ಸಮುದಾಯದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ವೀರ ಮಡಿವಾಳ ತಾಲೂಕು ಸಂಘದ ಅಧ್ಯಕ್ಷ ಎಲೆ ಹುಂಡಿ ಚಂದ್ರ ಶೆಟ್ಟಿ, ಸರಗೂರು ತಾಲೂಕು ಅಧ್ಯಕ್ಷ ಧರಣೇಶ್, ವೀರ ಮಡಿವಾಳ ಯುವಕರ ಸಂಘದ ಅಧ್ಯಕ್ಷ ವಸಂತ್ ಕುಮಾರ್, ಉಪಾಧ್ಯಕ್ಷ ರಮೇಶ್, ಕಾರ್ಯದರ್ಶಿ ಹೇಮಂತ್, ಗೌರವಧ್ಯಕ್ಷ ಮಹದೇವ ಶೆಟ್ಟಿ, ವಿಜಯ ಕುಮಾರ್, ಖಜಾಂಚಿ ನಟರಾಜ್, ಕೆಂಪಶೆಟ್ಟಿ, ರಂಗಸ್ವಾಮಿ, ಯಜಮಾನರಾದ ಬಸವರಾಜು, ಸ್ವಾಮಿಶೆಟ್ಟಿ, ಚಿಕ್ಕಣ್ಣ ಶೆಟ್ಟಿ, ಕಾಳ ಶೆಟ್ಟಿ, ಗ್ರಾಮಾಂತರ ಉಪಾಧ್ಯಕ್ಷ ಮಹದೇವ ಶೆಟ್ಟಿ, ಮಂಜು ಶೆಟ್ಟಿ, ಆನಂದ, ವೆಂಕಟ್ ಶೆಟ್ಟಿ, ಬಸವರಾಜ ಕೋಟೆ, ಎಡತೊರೆ ಮಹೇಶ್, ಚಾಮ್ ಶೆಟ್ಟಿ, ಸಿದ್ಧ ಶೆಟ್ಟಿ, ಸಿದ್ದರಾಜು, ಬಿರೇಶ್, ಗಣೇಶ, ಮಧು, ವೆಂಕಟೇಶ್, ಬಸವರಾಜ್, ಶೇಖರ್, ಮಹೇಶ್, ಪುನಿ, ಹಾಗೂ ಸಮಾಜದ ಮುಖಂಡರು ವೀರ ಮಡಿವಾಳ ಯುವಕರ ಸಂಘದ ಪದಾಧಿಕಾರಿಗಳು ಮಹಿಳಾ ಸಂಘದವರು ಇದ್ದರು.


## ಮೆರವಣಿಗೆ

ಶ್ರೀ ವೀರ ಮಡಿವಾಳ ಯುವಕರ ಸಂಘದ ವತಿಯಿಂದ ಶ್ರೀ ಮಡಿವಾಳ ಮಾಚಿದೇವರ ಭಾವ ಚಿತ್ರವನ್ನು ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು. ವೀರಗಾಸೆ ಮಂಗಳವಾದ್ಯದೊಂದಿಗೆ ಬೆಳ್ಳಿರಥದಲ್ಲಿ ಶ್ರೀ ಮಾಚಿದೇವರ ಭಾವಚಿತ್ರವನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಪಟಾಕಿ ಸಿಡಿಸಿ ಸಂಭ್ರಮದಿಂದ ಜಯಂತಿಯನ್ನು ಆಚರಣೆ ಮಾಡಿ, ಶಿವಾಜಿ ರಸ್ತೆಯಲ್ಲಿರುವ ಮಾಚಿದೇವರ ನಾಮಫಲಕಕ್ಕೆ ಪುಷ್ಪಾರ್ಚನೆ ಮಾಡಿ ಅನ್ನ ಸಂತರ್ಪಣೆ ಮಾಡಿದರು.



# ಒಂದೇ ಜಮೀನು ಎರಡು ಬಾರಿ ಕ್ರಯ ಜಮೀನು ಮಾಲೀಕರಿಗೂ ವಂಚನೆ: ನ್ಯಾಯ ಕೊಡಿಸಲು ಕ್ಲಿನ್ಸ್ ಕ್ಲಿಪ್ಪಿ ಒತ್ತಾಯ

**ಪಾಲುದಾರರಾಗಿದ್ದ ಸೋಮಶೇಖರ್, ಲೀಲಾವತಿಯಿಂದಕೋಟ್ಯಾಂತರ ವಂಚನೆ**



**ಚಾಮರಾಜನಗರ:** ಗುಂಡ್ಲುಪೇಟೆ ತಾಲೂಕಿನ ಹಿರೇಕಾಟಿ ಗ್ರಾಮದ ಸರ್ವೆ ನಂ 190ರಲ್ಲಿ 4.17 ಎಕರೆ ಜಮೀನು ನಮ್ಮ ತಂದೆ ಕೆ.ಜಿ. ಕ್ಲಿಪ್ಪಿ ಅವರಿಗೆ 2015ದಲ್ಲಿ ಕ್ರಯವಾಗಿದ್ದು, ಈ ಜಮೀನಿನ್ನು ಅನ್ಯಕಾಂತ್ರ ಮಾಡಿಸಿ, ಮರಳು ಕ್ರಷರ್ ಅನ್ನು ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಇದೇ ಜಮೀನಿನ್ನು ಸೋಮಶೇಖರ್, ಲೀಲಾವತಿ, ಶಾಂತಿ ಇತರರು ಜಮೀನು ಮಾಲೀಕರಿಗೆ ತಪ್ಪು ಮಾಹಿತಿ ನೀಡಿ, ಎರಡನೇ ಬಾರಿ ಕ್ರಯ ಮಾಡಿಸಿಕೊಂಡು, ಅಕ್ರಮವಾಗಿ ಈ ಘಟಕ ಸ್ಥಾಪನೆಗೆ ಬ್ಯಾಂಕ್‌ಗಳಿಂದ ಸಾಲ ಪಡೆದು ವಂಚನೆ ಮಾಡಿದ್ದಾರೆ. ಇವರ ವಿರುದ್ಧ ಸೂಕ್ತ ಕ್ರಮವಹಿಸಿ ನಮ್ಮ ಕುಟುಂಬಕ್ಕೆ ನ್ಯಾಯ ಒದಗಿಸಬೇಕೆಂದು ಕೆ.ಜಿ ಕ್ಲಿಪ್ಪಿ ಅವರ ಮಗ ಕ್ಲಿನ್ಸ್ ಕ್ಲಿಪ್ಪಿ ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ತಂದೆ ಮಂಬೈನಲ್ಲಿದ್ದು, ಅಲ್ಲಿ ವ್ಯಾಪಾರ ಮಾಡುತ್ತಿತ್ತು. ಈ ಜಮೀನನ್ನು ಅನ್ಯಕಾಂತ್ರ ಮಾಡಿಸಿಕೊಂಡು ತಮ್ಮ ಹೆಸರಿಗೆ ಸುಮಾರು 85 ಲಕ್ಷ ರೂ. ಗಳನ್ನು ನೀಡಿ, ಜಮೀನಿನ ಮಾಲೀಕರಾದ ಶಿವರಾಮೇಗೌಡ, ರತ್ನಮ್ಮ ಮತ್ತು ಮಕ್ಕಳು ಸೇರಿ ತಮ್ಮ ಬಾಬ್ತು 4.17 ಎಕರೆ ಜಮೀನಿನನ್ನು ಗುಂಡ್ಲುಪೇಟೆ ಉಪ ನೋಂದಾಣಿ ಕಚೇರಿಯಲ್ಲಿ ಕ್ರಯವಾಗಿದೆ. ಇದಾದ ಬಳಿಕ ಸೋಮಶೇಖರ್, ಲೀಲಾವತಿ ಇತರರು ನಮ್ಮ ಪಾಲುದಾರಾಗಿ ಸೇರಿಕೊಂಡು ನಮ್ಮ ತಂದೆಯ ಹೆಸರಿಗೆ ಕ್ರಯವಾಗಿದ್ದ ಜಮೀನನ್ನು ಖಾತೆ ಮಾಡಿಸಿಕೊಡುವುದಾಗಿ ನಂಬಿಸಿ, ಬಹಳ ವರ್ಷಗಳ ಕಾಲ ಸತಾಯಿಸಿದ್ದಾರೆ. ಅಲ್ಲದೇ ನಮ್ಮ ತಂದೆಯೊಂದಿಗೆ ಪಾಲುದಾರರಾದ ಬಳಿಕ ನಮ್ಮ ದಾಖಲಾತಿಗಳನ್ನು ಪೋರ್ಜರಿ ಮಾಡಿ, ವಿವಿಧ ಬ್ಯಾಂಕ್‌ಗಳಲ್ಲಿ ಸಾಲ ಪಡೆದು, ನಾವೇ ಸೊತ್ತಿನ ಮಾಲೀಕರು ಎಂದು ಹೇಳಿಕೊಂಡು ಮೋಸ ಮಾಡಿದ್ದಾರೆ ಎಂದು ದೂರಿದರು.

ಈಗ ನಮ್ಮ ತಂದೆಯ ವಿರುದ್ಧವೇ ಪೊಲೀಸ್ ಠಾಣೆಯಲ್ಲಿ ದೂರಿ ನೀಡಿ, ಪಿಸ್ತೂಲಿನಿಂದ ನಮ್ಮನ್ನು ಕೊಲೆ ಮಾಡಲು ಬಂದರು ಎಂದು ಸುಳ್ಳು ಹೇಳಿ. ಗುಂಡ್ಲುಪೇಟೆ ಠಾಣೆಯಲ್ಲಿ ದೂರು ನೀಡಿದ್ದಾರೆ. ನಮ್ಮ ತಂದೆಗೆ ಆಗಿರುವ ಅನ್ಯಾಯದ ವಿರುದ್ಧ ಜಿಲ್ಲಾಡಳಿತ ಹಾಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದ್ದೇವೆ. ಜೊತೆಗೆ ನ್ಯಾಯಾಲಯದಲ್ಲಿಯು ಸಹ ಧಾವೆ ಹೂಡಿದ್ದು, ನಮ್ಮ ಕುಟುಂಬಕ್ಕೆ ಸೋಮಶೇಖರ್, ಲೀಲಾವತಿ ಇತರರು ಕಿರುಕುಳ ನೀಡುತ್ತಿದ್ದಾರೆ. ಇವರ ವಿರುದ್ಧ ಕಾನೂನು ಕ್ರಮ ವಾಗಬೇಕು ಎಂದು ಒತ್ತಾಯಿಸಿದರು.

ಜಮೀನಿನ ಮಾಲೀಕರಾದ ರತ್ನಮ್ಮ ಅವರು ಮಾತನಾಡಿ, ನಾವು ಕೆ.ಜಿ. ಕ್ಲಿಪ್ಪಿ ಅವರಿಗೆ ನಮ್ಮ ಜಮೀನು ಕ್ರಯ ಮಾಡಿದ್ದೇವೆ. ಹೊರತು ಬೇರೆ ಯಾರಿಗೂ ಕ್ರಯ ಮಾಡಿಲ್ಲ. ನಾವು ಕ್ರಯ ಮಾಡಿದ ಬಳಿಕ 85 ಲಕ್ಷ ರೂ.ಗಳನ್ನು ಕ್ಲಿಪ್ಲಿ ಅವರೇ ನೀಡಿದ್ದು, ಅದಾದ ಬಳಿಕ ಅವರು ನಮ್ಮ ಬಳಿಗೆ ಬರಲಿಲ್ಲ. ಕೆಲವು ವರ್ಷಗಳ ನಂತರ ಸೋಮಶೇಖರ್ ಲೀಲಾವತಿ ನಮ್ಮ ಬಾಬ್ತು ಉಳಿಕೆ ಜಮೀನು 9 ಗುಂಟೆಯನ್ನು ನಮಗೆ ಕ್ರಯ ಮಾಡುವಂತೆ ಕರೆದುಕೊಂಡು ಹೋದರು. ಅವರು ಮೋಸದಿಂದ ಕ್ಲಿಪ್ಪಿ ಅವರಿಗೆ ಮಾರಾಟ ಮಾಡಿದ ಜಮೀನಿನ್ನು ಕೂಡ ಅಕ್ರಮವಾಗಿ ಕ್ರಯ ಮಾಡಿಸಿಕೊಂಡಿದ್ದಾರೆ. ನಮಗೆ ಈ ಸಂದರ್ಭದಲ್ಲಿ ಒಂದು ರೂಪಾಯಿ ಸಹ ಕೊಟ್ಟಿಲ್ಲ. ಇವರು ಮಾಡಿದ ತಪ್ಪಿಗೆ , ನಾವು ಮತ್ತು ಕುಟುಂಬದವರು ನ್ಯಾಯಾಲಯಕ್ಕೆ ಹೋಗುವಂತೆ ಆಗಿದೆ. ನಮಗೂ ಸಹ ಸೋಮಶೇಖರ್ ಮತ್ತು ಲೀಲಾವತಿ ಅವರಿಂದ ಅನ್ಯಾಯವಾಗಿದೆ ಎಂದು ದೂರಿದರು.

## ಪಿಯುಸಿ ಪರೀಕ್ಷೆ ಹಿನ್ನೆಲೆ ನಿಷೇಧಾಜ್ಞೆ

**ಚಾಮರಾಜನಗರ:** ಪದವಿ ಪೂರ್ವ ಶಿಕ್ಷಣ ಇಲಾಖೆಯು ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗಳನ್ನು ಫೆಬ್ರವರಿ 28 ರಿಂದ ಮಾರ್ಚ್ 17 ರವರೆಗೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಕಾರ್ಯವು ನ್ಯಾಯೋಚಿತವಾಗಿ ನಡೆಸುವ ಸದುದ್ದೇಶದಿಂದ ಜಿಲ್ಲೆಯ ಒಟ್ಟು 17 ಪರೀಕ್ಷಾ ಕೇಂದ್ರದ ಸುತ್ತಲ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಸಾರ್ವಜನಿಕ ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಶ್ರೀರೂಪ ಅವರು ಆದೇಶ ಹೊರಡಿಸಿದ್ದಾರೆ.

ಚಾಮರಾಜನಗರ ಪಟ್ಟಣದ ಜೆ.ಎಸ್.ಎಸ್. ಮಹಿಳಾ ಪದವಿ ಪೂರ್ವ ಕಾಲೇಜು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಸೇವಾಭಾರತಿ ಪದವಿಪೂರ್ವ ಕಾಲೇಜು, ಯಳಂದೂರು ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜು, ಜೆ.ಎಸ್.ಎಸ್. ಮಹಿಳಾ ಪದವಿ ಪೂರ್ವ ಕಾಲೇಜು, ಗುಂಡ್ಲುಪೇಟೆ ಪಟ್ಟಣದ ದೊಡ್ಡಹುಂಡಿ ಬೋಗಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಜೆ.ಎಸ್.ಎಸ್. ಮಹಿಳಾ ಪದವಿ ಪೂರ್ವ ಕಾಲೇಜು, ಕೆ.ಎಸ್. ನಾಗರತ್ನಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೊಳ್ಳೆಗಾಲ ಪಟ್ಟಣದ ಎಂ.ಜಿ.ಎಸ್.ವಿ. ಸರ್ಕಾರಿ ಪದವಿ ಪೂರ್ವ ಕಾಲೇಜು, ಎಸ್.ವಿ.ಕೆ.ವಿ. ಸರ್ಕಾರಿ ಪದವಿ ಪೂರ್ವ ಕಾಲೇಜು, ನಿಸರ್ಗ ಪದವಿ ಪೂರ್ವ ಕಾಲೇಜು, ಜೆ.ಎಸ್.ಎಸ್. ಮಹಿಳಾ ಪದವಿ ಪೂರ್ವ ಕಾಲೇಜು, ಲಯನ್ಸ್ ಪದವಿ ಪೂರ್ವ ಕಾಲೇಜು, ಹನೂರು ತಾಲೂಕಿನ ಜಿ.ವಿ ಗೌಡ ಸರ್ಕಾರಿ ಪದವಿ ಪೂರ್ವ ಕಾಲೇಜು, ಕ್ರಿಸ್ತರಾಜ ಪದವಿ ಪೂರ್ವ ಕಾಲೇಜು, ರಾಮಾಪುರದ ಜೆ.ಎಸ್.ಎಸ್. ಪದವಿ ಪೂರ್ವ ಕಾಲೇಜುಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ.

# ಸಾಮಾಜಿಕ ಬಹಿಷ್ಕಾರ: ನ್ಯಾಯಕ್ಕಾಗಿ ಪ್ರಭುಸ್ವಾಮಿ ಆಗ್ರಹ



**ಚಾಮರಾಜನಗರ:** ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಗ್ರಾಮದ ಯಜಮಾನರು ಸಾಮಾಜಿಕ ಬಹಿಷ್ಕಾರಕ್ಕೆ ಹಾಕಿದ್ದು ಇದರಿಂದ ಜೀವನ ನಡೆಸಲು ತೊಂದರೆಯಾಗುತ್ತಿದೆ. ಸಂಬಂಧಪಟ್ಟವರು ನಮ್ಮ ಕುಟುಂಬಕ್ಕೆ ನ್ಯಾಯ ಕೊಡಿಸಬೇಕು ಎಂದು ಕೊಳ್ಳೇಗಾಲಮೋಳೆಯ ನಿವಾಸಿಗಳಾದ ಪ್ರಭುಸ್ವಾಮಿ, ನಾಗರಾಜಮ್ಮ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ನನ್ನ ಭಾಗಕ್ಕೆ ಬಂದಿದ್ದ ಜಮೀನನ್ನು ನನ್ನ ಅಣ್ಣನ ಮಗ ಬೇರೆಯವರಿಗೆ ಮಾರಾಟ ಮಾಡಿದ್ದು ಇದನ್ನು ಪ್ರಶ್ನಿಸಿದ್ದಲ್ಲದೇ ಈ ಸಂಬಂಧ ನ್ಯಾಯ ಕೊಡಿಸುವಂತೆ ಗ್ರಾಮದ ಯಜಮಾನರು ಬಳಿ ಮನವಿ ಮಾಡಿದ್ದೆ. ಆದರೆ, ಯಜಮಾನರು ಅವನ ಪರ ಇದ್ದು ನಮ್ಮ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ ಎಂದು ಆರೋಪಿಸಿದರು.

ಇದರಿಂದಾಗಿ ನಮ್ಮ ಕುಟುಂದವರನ್ನು ಊರಿನ ಜನರು ಮಾತನಾಡಿಸುವುದಿಲ್ಲ. ಜೊತೆಗೆ ಅಂಗಡಿಗಳಲ್ಲಿ ಸಾಮಾನುಗಳನ್ನು ಖರೀದಿಸಲು ಹೋದರೆ ಕೊಡುವುದಿಲ್ಲ. ಇದ ರಿಂದ ಜೀವನ ನಡೆಸಲು ತುಂಬಾ ತೊಂದರೆ ಯಾಗುತ್ತಿದೆ ಎಂದು ಅಳಲು ತೋಡಿಕೊಂಡರು. ಇದರಿಂದ ಮನನೊಂದು ನಮ್ಮ ಮಕ್ಕಳು, ಸೊಸೆ ಯರು ಮನನೊಂದು ಬೆಂಗಳೂರಿಗೆ ಹೋಗಿ ವಾಸ ಮಾಡುತ್ತಿದ್ದಾರೆ. 2014ರಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಿದ್ದು ಅಂದಿನಿಂದ ಇಲ್ಲಿಯ ತನಕ ಗ್ರಾಮದಲ್ಲಿ ನಡೆಯುವ ಹಬ್ಬಕ್ಕೆ ಕರೆಯುವುದಿಲ್ಲ ಸರದಿಯನ್ನು ಪಡೆಯುತ್ತಿಲ್ಲ ಅಲ್ಲದೇ ನಮ್ಮ ಕುಟುಂಬಕ್ಕೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ಸಂಬಂಧ ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದ್ದು ಇಲ್ಲಿಯ ತನಕ ಯಾವುದೇ ಕ್ರಮವಹಿಸಿಲ್ಲ. ಆದ್ದರಿಂದ ಸಂಬಂಧಪಟ್ಟವರು ನಮ್ಮ ಕುಟುಂಬಕ್ಕೆ ನ್ಯಾಯ ಕೊಡಿಸಬೇಕು ಎಂದು ಮನವಿ ಮಾಡಿದರು.

# ಎಸ್.ಎಸ್.ಎಲ್.ಸಿ. ಫಲಿತಾಂಶ ಸುಧಾರಣೆಗೆ ವಿಶೇಷ ಗಮನಹರಿಸಿ: ಜಿ.ಪಂ ಸಿಇಒ ಸೂಚನೆ



**ಚಾಮರಾಜನಗರ:** ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ಗಮನಹರಿಸಿ ಮುಂಬರುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಲು ಸಜ್ಜುಗೊಳಿಸುವಂತೆ ಶಿಕ್ಷಕರು ಕ್ರಮ ತೆಗೆದುಕೊಳ್ಳಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಸೂಚನೆ ನೀಡಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿಂದು ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಸುಧಾರಣೆ ಸಂಬಂಧ ಶಾಲೆಗಳ ಮುಖ್ಯಶಿಕ್ಷಕರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಈಗಾಗಲೇ ನಡೆಸಲಾಗಿರುವ ಎರಡು ಹಂತದ ಪೂರ್ವ ಸಿದ್ದತಾ ಪರೀಕ್ಷೆಯಲ್ಲಿ ಕಡಿಮೆ ಅಂಕಗಳಿಸಿರುವ ವಿದ್ಯಾರ್ಥಿಗಳನ್ನು ಕೇಂದ್ರಿಕರಿಸಿ ವಿಶೇಷ ತರಗತಿಗಳನ್ನು ನಡೆಸಬೇಕು. ಯಾವ ವಿಷಯದಲ್ಲಿ ವಿದ್ಯಾರ್ಥಿಗಳು ಹಿಂದೆ ಉಳಿದಿದ್ದಾರೆ ಎಂಬ ಬಗ್ಗೆ ತಿಳಿದು ಅವರಿಗೆ ಬೆಳಿಗ್ಗೆ ಹಾಗೂ ಸಂಜೆಯ ಅವಧಿಯಲ್ಲಿ ಹೆಚ್ಚುವರಿ ತರಗತಿಗಳನ್ನು ಏರ್ಪಡಿಸಿ ವಿಷಯ ಬೋಧನೆ ಮನವರಿಕೆ ಮಾಡಿಕೊಡಬೇಕು. ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮ ವಾಗಲು ವಿದ್ಯಾರ್ಥಿಗಳಿಗೆ ಉಳಿದಿರುವ ಸಮಯದಲ್ಲಿ ವಿಶೇಷ ಕಲಿಕಾ ಕ್ರಮಗಳ ಮೂಲಕ ಸಜ್ಜುಗೊಳಿಸಬೇಕು ಎಂದರು.

ವಸತಿ ಶಾಲೆ, ಹಾಸ್ಟೆಲ್ ಗಳಲ್ಲಿ ವಿಶೇಷ ಬೋಧನೆ ತರಗತಿಗಳನ್ನು ಮಾಡಬೇಕು. ವಸತಿ ಶಾಲಾ ಶಿಕ್ಷಕರು ಕಡ್ಡಾಯವಾಗಿ ಶಾಲೆಯಲ್ಲಿಯೇ ಉಳಿದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕು. ಹಾಸ್ಟೆಲ್ ವಾರ್ಡನ್ ಗಳು ಮಕ್ಕಳ ಕಲಿಕೆ ಬಗ್ಗೆ ನಿರಂತರವಾಗಿ ಗಮನಿಸಬೇಕು. ಯಾವುದೇ ಸಮಸ್ಯೆಗಳು ಇದ್ದರೆ ಕೂಡಲೇ ಗಮನಕ್ಕೆ ತರುವಂತೆ ಸಿಇಒ ಅವರು ತಿಳಿಸಿದರು.

ಹಬ್ಬ, ಇನ್ನಿತರ ವಿಶೇಷ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಗೈರು ಹಾಜರಾದರೆ ಅಂತಹ ವಿದ್ಯಾರ್ಥಿಗಳಿಗೆ ಪಠ್ಯಕ್ರಮ ಪೂರ್ಣವಾಗಲು ವಿಶೇಷ ತರಗತಿಗಳನ್ನು ಕೈಗೊಂಡು ಸಂಪೂರ್ಣವಾಗಿ ಪರೀಕ್ಷೆಗೆ ಸಿದ್ದಗೊಳಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಚಂದ್ರ ಪಾಟೀಲ್, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಾದ ಕಾಶಿನಾಥ್ ಸಭೆಯಲ್ಲಿ ಉಪಸ್ಥಿತರಿದ್ದರು.

# ಒಳ ಮೀಸಲಾತಿ ರೋಸ್ಟರ್‌ಬಿಂದು ಪದ್ಧತಿ ಹಿಂಪಡೆಯಲು ಸಿ.ಕೆ.ಮಂಜುನಾಥ್ ಆಗ್ರಹ

## ಫೆ. 24 ರಂದು ಬಲಗೈ ಸಮುದಾಯದಿಂದ ಬೃಹತ್ ಪ್ರತಿಭಟನೆ



**ಚಾಮರಾಜನಗರ:** ಒಳಮೀಸಲಾತಿಯಲ್ಲಿ ಜಾರಿಗೆ ತಂದಿರುವ ರೋಸ್ಟರ್ ಪದ್ಧತಿಯಿಂದ ಬಲಗೈ ಸಮುದಾಯಕ್ಕೆ ತುಂಬಾ ಅನ್ಯಾಯವಾಗಿದ್ದು, ಅದನ್ನು ಕೂಡಲೇ ಹಿಂಪಡೆಯಬೇಕು ಎಂದು ಡಾ.ಬಿ.ಆರ್. ಅಂಬೇಡ್ಕರ್ ಮಹಾಸಭಾದ ಕಾರ್ಯಾಧ್ಯಕ್ಷ ಸಿ. ಕೆ.ಮಂಜುನಾಥ್ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಒಳಮೀಸಲಾತಿಯಲ್ಲಿ ಜಾರಿಗೆ ತಂದಿರುವ ರೋಸ್ಟರ್ ಬಿಂದು ಪದ್ಧತಿಯಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿರುವುದನ್ನು ಶೈಕ್ಷಣಿಕ ಪ್ರವೇಶಗಳಲ್ಲಿ, ಉದ್ಯೋಗಗಳ ಒಂದು ಅಧಿಸೂಚನೆಯಲ್ಲಿ ನೋಡುತ್ತಿದ್ದೇವೆ. ಇದನ್ನು ರಾಜ್ಯ ಸರ್ಕಾರ ಮನಗಂಡು ತಕ್ಷಣವೇ ಒಳಮೀಸಲಾತಿಯ ರೋಸ್ಟರ್ ಪದ್ಧತಿಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

2018ರ ಮೀಸಲಾತಿಯನ್ನು ಪರಿಷ್ಕರಣೆ ಮಾಡಿ 2022ರಲ್ಲಿ ಎಸ್‌ಸಿಗಳಲ್ಲಿ ಶೇ.15 ರಷ್ಟು, ಎಸ್‌ಟಿಗಳಲ್ಲಿ ಶೇ7 ರಷ್ಟು ಮಾರ್ಪಾಡಿಸಿ ತಂದು ರೋಸ್ಟರ್ ಬಿಂದು ಪದ್ಧತಿಯಲ್ಲಿ 1ನೇ ರೋಸ್ಟರ್ ಬಿಂದುವಿನಲ್ಲಿ ಎಸ್‌ಸಿ ಸಮುದಾಯಕ್ಕೆ ಕೊಟ್ಟು ನಂತರ ಇನ್ನೂ ಉಳಿದ ಎಲ್ಲ ಹಿಂದುಳಿದವರ್ಗಗಳು, ಎಸ್‌ಟಿ ವರ್ಗಗಳಿಗೆ ಮೀಸಲಾತಿ ರೋಸ್ಟರ್ ಬಿಂದು ಮಾರ್ಪಾಡು ಮಾಡಿದರು. ನಂತರ ಬೆಳವಣಿಗೆಗಳಲ್ಲಿ ಒಳಮೀಸಲಾತಿ ಜಾರಿಗೆ ಬಂದಂತಹ ಸಂದರ್ಭದಲ್ಲಿ ಮತ್ತೊಂದು ಬಾರಿ ಅಧಿಸೂಚನೆ ಹೊರಡಿಸಿ ರೋಸ್ಟರ್ ಬಿಂದು ಘೋಷಣೆ ಮಾಡಿದ್ದಾರೆ. ಅದರಲ್ಲಿ ಪ್ರವರ್ಗ ಎ. ಪ್ರವರ್ಗ ಬಿ. ಪ್ರವರ್ಗ ಸಿ ವಿಭಾಗ ಮಾಡಿ ಶೇ6 ರಷ್ಟು ಪ್ರವರ್ಗ ಎ, ಪ್ರವರ್ಗ ಬಿಗೆ ಪ್ರವರ್ಗ ಸಿ ಶೇ. 5 ರಷ್ಟು ಹಂಚಿಕೆ ಮಾಡಿ ಅಧಿಸೂಚನೆ ಹೊರಡಿಸಿದ್ದಾರೆ. ಇದರಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದರು.

ಒಳಮೀಸಲಾತಿ ಒಂದು ಅವೈಜ್ಞಾನಿವಾದದ್ದು, ಅಸಂವಿಧಾನಕ ಒಂದು ಕಾಯ್ದೆಯಾಗಿದೆ. ಸಹೋದರ ಸಮಾಜಗಳಿಗೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸಬೇಕು ಆ ಸಮಾಜಗಳು ಹೋರಾಟ ಮಾಡಿದಾಗ ನಾವು ಕೂಡ ಸಹಮತ ವ್ಯಕ್ತಪಡಿಸಿದಾಗ ಒಳಮೀಸಲಾತಿ ಜಾರಿಗೆ ತಂದಿರುವ ಸಂದರ್ಭದಲ್ಲಿ ಬಲಗೈ ಸಂಬಂಧಿತ ಜಾತಿಗಳಿಗೆ ಅನ್ಯಾಯವಾಗಿರುವದನ್ನು ಕಾಣಬಹುದು.ಆಗಾಗಿ ರೋಸ್ಟರ್ಪ ದ್ಧತಿಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ದಲಿತ ಮುಖಂಡ ಮೂಡ್ನಾಕೂಡುಪ್ರಕಾಶ್ ಮಾತನಾಡಿ, ಒಳಮೀಸಲಾತಿ ವಿಚಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳದಿದ್ದರೆ. ಮುಂದಿನ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಗೆಲ್ಲಲು ನಮ್ಮ ಸಮುದಾಯ ಬಿಡುವುದಿಲ್ಲ. ದಲಿತ ಮುಖ್ಯಮಂತ್ರಿ ತಪ್ಪಿಸಿದ್ದೀರಿ. ಅನುದಾನ ತಪ್ಪಿಸಿದ್ದೀರಿ, ಈ ಗ ಉದ್ಯೋಗ ತಪ್ಪಿಸಲು ಹೊರಟಿದ್ದೀರಿ ಅಲ್ಲದೆ ಶೈಕ್ಷಣಿಕವಾಗಿ ತೊಂದರೆ ಕೊಡಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಸಾಹಿತಿಕೋಡಿಉಗನೆ ಮಂಜು ಮಾತನಾಡಿ, ನಮ್ಮ ಹೋರಾಟ ಯಾವುದೇ ಸಮಾಜದ ವಿರುದ್ಧವೂ ಅಲ್ಲ. ನಮ್ಮ ಸಮಾಜಕ್ಕೆ ಸರ್ಕಾರ ಅನ್ಯಾಯ ಮಾಡಿದೆ. ಅದನ್ನು ಸರಿಪಡಿಸುವಂತೆ ಸಮಾಜ ಒತ್ತಾಯ ಮಾಡುತ್ತಿದೆ. ಸರ್ಕಾರ ಹಿಂದೆ ಬಾಕಿಯಿರುವ ಬ್ಲಾಕ್ ಕ್ಲಾಕ್ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಹೊಸದಾಗಿ ಒಳ ಮೀಸಲಾತಿ ರೋಸ್ಟರ್ ರ್ ಬಿಂದುಗಳನ್ನು ಜಾರಿ ಮಾಡುವ ಮೂಲಕ ಬ್ಲಾಕ್‌ಲಾಕ್ ಹುದ್ದೆಗಳಲ್ಲೂ ಅನ್ಯಾಯವಾಗಲಿದೆ. ಇದರಿಂದ ಪ್ರವರ್ಗ ಬಿ, ಪ್ರವರ್ಗ ಸಿಗೆ ತುಂಬಾ ಅನ್ಯಾಯವಾಗಲಿದೆ. ಯಾವುದೇ ವರದಿ ಜಾರಿ ಮಾಡುವಾಗ ಸಾರ್ವಜನಿಕರಿಂದ ಚರ್ಚಿಸಬೇಕು ಅದನ್ನು ಬಿಟ್ಟು ಯಾರೋ ಬಬ್ಬರ ಹಿತಕ್ಕಾಗಿ ಒಳಮೀಸಲಾತಿ ರೋಸ್ಟರ್ ಪದ್ಧತಿ ಜಾರಿ ಮಾಡಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಸಭಾದ ಉಪಾಧ್ಯಕ್ಷ ಶಿವಸ್ವಾಮಿ, ರಂಗಸ್ವಾಮಿ, ರೇಚಂಬಳ್ಳಿಕುಮಾರ್, ಎಸ್.ಪಿ. ಮಹೇಶ್, ಶಿವರಾಜ್ ಸಿದ್ದಯ್ಯನಪುರ ಹಾಜರಿದ್ದರು.

**ಫೆ. 24 ರಂದು ಪ್ರತಿಭಟನೆ**

**ರೋಸ್ಕರ್‌ಬಿಂದುವಿನಿಂದ ಬಲಗೈ ಸಮುದಾಯಕ್ಕೆ ಅನ್ಯಾಯ ಖಂಡಿಸಿ ಫೆ. 24 ರಂದು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಅದಕ್ಕಾಗಿ ಜಿಲ್ಲೆಯ ಗುಂಡ್ಲುಪೇಟೆ, ಕೊಳ್ಳೇಗಾಲ ತಾಲೂಕಿನಲ್ಲಿ ಪೂರ್ವಭಾವಿ ಸಭೆ ನಡೆಸಲಾಗಿದ್ದು, ಯಳಂದೂರು, ಚಾಮರಾಜನಗರ ತಾಲೂಕಿನಲ್ಲೂ ಪೂರ್ವಭಾವಿ ನಡೆಸಿ, ಮಂಗಳವಾರ ಜಿಲ್ಲಾ ಮಟ್ಟದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆಸ ಎಂದರು.**

## ಫೆ.21ಕ್ಕೆ ಸರಿಗಮಪ ಲಿಟಲ್ ಚಾಂಪ್ಸ್ ಆಡಿಷನ್




**ಹಾಸನ:** ಕನ್ನಡದ ಜನಪ್ರಿಯ ಜೀ ಕನ್ನಡ ವಾಹಿನಿ ನಡೆಸಿಕೊಡುವ ಸರಿಗಮಪ ಲಿಟಲ್ ಚಾಂಪ್ಸ್ ಆಡಿಷನ್ ಫೆ. 21ರ ಶನಿವಾರ ನಗರದ ಎಸ್‌ಆರ್‌ಎಸ್ ಪ್ರಜ್ಞಾ ವಿದ್ಯಾ ಶಾಲೆಯಲ್ಲಿ ನಡೆಯಲಿದೆ. ಅಂದು ಬೆಳಿಗ್ಗೆ 9 ರಿಂದ ಆಡಿಷನ್ ಆರಂಭವಾಗಲಿದ್ದು, 3 ರಿಂದ 15 ವರ್ಷಗೊಳಗಿನ ಮಕ್ಕಳು ಭಾಗವಹಿಸಬಹುದು. 3 ವಿಭಿನ್ನ ಹಾಡುಗಳನ್ನು ಪ್ರಸ್ತುತಪಡಿಸಬೇಕು. ಭಾಗವಹಿಸುವ ಮಕ್ಕಳು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗು ವಿಳಾಸ ಪ್ರತಿ ತಲುಪಿಸಬೇಕು. ಆಡಿಷನ್ ಸಂಪೂರ್ಣ ಉಚಿತವಾಗಿದ್ದು, ಯಾವುದೇ ರೀತಿಯ ಶುಲ್ಕ ಪಾವತಿಸುವಂತಿಲ್ಲ ಎಂದು ತಿಳಿಸಿದೆ.



**ಪುದುಚೇರಿಯ ಕಂಬನ್ ಕಲೈ ಆರಂಗಂನಲ್ಲಿ ಇತ್ತೀಚೆಗೆ ನಡೆದ 2025–26ರ 11ನೇ ರಾಷ್ಟ್ರೀಯ ಕ್ರೀಡಾ ನೃತ್ಯ ಚಾಂಪಿಯನ್ ಶಿಪ್‌ನಲ್ಲಿ ಹಾಸನದ ವಿಜಯ ಶಾಲೆಯ 2ನೇ ತರಗತಿ ವಿದ್ಯಾರ್ಥಿನಿ ಜನ್ಯ ಡಿ.ಗೌಡ ಶಾಸ್ತ್ರೀಯ ನೃತ್ಯದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಶಾಲಾ ಆಡಳಿತ ಮಂಡಳಿ ವಿದ್ಯಾರ್ಥಿನಿಯ ಸಾಧನೆಗೆ ಅಭಿನಂದಿಸಿದೆ.**

## ಹುಲಿ ದಾಳಿಗೆ ಹಸು ಸಾವು



**ಗುಂಡ್ಲುಪೇಟೆ:** ತಾಲೂಕಿನ ಮಾದಪಟ್ಟಣ ಗ್ರಾಮದಲ್ಲಿ ಹಾಡಹಗಲೇ ಹುಲಿ ದಾಳಿ ನಡೆಸಿ ಹಸುವನ್ನು ಕೊಂದು ಹಾಕಿರುವ ಘಟನೆ ನಡೆದಿದೆ.

ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಬಫರ್ ಜೋನ್ ವಲಯಕ್ಕೆ ಸೇರಿದ ಮಾದಪಟ್ಟಣ ಗ್ರಾಮದ ಗುರುಮಲ್ಲಪ್ಪ ಎಂಬವರಿಗೆ ಸೇರಿದ ಹಸು ಸಾವನ್ನಪ್ಪಿದ್ದು ಹಗಲಿನಲ್ಲೇ ಹುಲಿ ದಾಳಿ ಕಂಡ ಸ್ಥಳೀಯ ಗ್ರಾಮಸ್ಥರು ಬೆಚ್ಚಿಬಿದ್ದಿದ್ದಾರೆ.

ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ವೇಳೆ ಏಕಾಏಕಿ ದಾಳಿ ನಡೆಸಿದ ಹುಲಿಯನ್ನು ಕಂಡ ರೈತರು ಜೋರಾಗಿ ಕೂಗಿಕೊಂಡ ವೇಳೆ ಗಲಿಬಿಲಿಗೊಂಡ ಹುಲಿ ಸನಿಹದಲ್ಲೇ ಇದ್ದ ಪೊದೆಯೊಳಗೆ ಅಡಗಿ ಕುಳಿತಿದೆ ಎಂಬ ಮಾಹಿತಿ ಲಭ್ಯವಾಗಿದೆ, ಮಾಹಿತಿಯನ್ನಾರಿತ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕೊಡಲೇ ಹುಲಿ ಸೆರೆಗೆ ಅರಣ್ಯ ಇಲಾಖೆ ಮುಂದಾಗಬೇಕು ಹಾಗೂ ಹಸು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಎಲ್ಲದಾನಕ್ಕಿಂತ ಅಂಗಾಂಗ ದಾನ ಶ್ರೇಷ್ಠ: ಡಾ.ಚಿದಂಬರ



**ಚಾಮರಾಜನಗರದ:** ಅಂಗಾಂಗ ದಾನದ ಮೂಲಕ ಇತರರ ಜೀವನದಲ್ಲಿ ಬೆಳಕು ಮೂಡಿಸುವುದು ಒಂದು ಪುಣ್ಯದ ಕಾರ್ಯವಾಗಿದೆ ಎಂದು ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಿದಂಬರ ಹೇಳಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್, ಜೆಎಸ್‌ಎಸ್ ಶಿಕ್ಷಣಸಂಸ್ಥೆಗಳ ಸಮುಚ್ಚಯ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಅಂಗಾಂಗ ದಾನ ಜಾಗೃತಿ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಧಾತೃ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಂಗಾಂಗ ದಾನವು ಅತ್ಯಂತ ಶ್ರೇಷ್ಠವಾದ ಮಾನವೀಯ ಕಾರ್ಯವಾಗಿದ್ದು, ಮರಣಾನಂತರ ಒಬ್ಬ ದಾನಿಯು ಇತರ ಜನರಿಗೆ ಹೊಸ ಜೀವನವನ್ನು ನೀಡಬಲ್ಲದು. ಹೃದಯ, ಮೂತ್ರಪಿಂಡ, ಯಕೃತ್ತು, ಶ್ವಾಸಕೋಶದಂತಹ ಅಂಗಗಳನ್ನು ದಾನ ಮಾಡುವುದರಿಂದ ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿರುವವರಿಗೆ ಮರುಜೀವ ಸಿಗುತ್ತದೆ. ಇದು ಜೀವನದ ಗುಣಮಟ್ಟವನ್ನು ಹೆಚ್ಚಿಸುವ ಮತ್ತು ಸಾವಿನ ನಂತರವೂ ಜೀವಂತವಾಗಿರುವ ಅದ್ಭುತ ಅವಕಾಶವಾಗಿರುತ್ತದೆ ಎಂದರು.

ವಿದ್ಯಾರ್ಥಿಗಳು ಮರಣದ ನಂತರ ಇತರರಿಗೆ ದಾನ ಮಾಡುವ ಸಂಕಲ್ಪ, ನೊಂದಣಿ ಮಾಡಿಕೊಳ್ಳಬೇಕು. ಜೀವ ಉಳಿಸುವ ನಿಟ್ಟಿನಲ್ಲಿ ವೈದ್ಯರು ಪ್ರಯತ್ನ ಮಾಡುತ್ತಾರೆ. ಮರಣಾನಂತರ ನಮ್ಮ ದೇಹ ಸಾರ್ಥಕವಾಗಬೇಕಾಗಿದರೆ ನಾವು ಅರೋಗ್ಯವಾಗಿರಬೇಕು. ಬದುಕಿರುವಾಗ ಚೆನ್ನಾಗಿ ಬದುಕಬೇಕಿರಬೇಕು ಎಂದರು.


ಮದ್ಯ, ಧೂಮಪಾನ, ಮಾದಕವಸ್ತುಗಳಿಂದ ದೂರವಿರಬೇಕು. ಮೊಬೈಲ್ ಬಳಕೆಯಿಂದಲ್ಲೂ ದೂರ ವಿದ್ದು ನಶೆಮುಕ್ತ ಚಾ.ನಗರ, ಭಾರತಕ್ಕಾಗಿ ಶ್ರಮಿಸಬೇಕು ಎಂದರು.

ಕಾರ್ಯಕ್ರಮದ ಜೆಎಸ್‌ಎಸ್ ಕಾಲೇಜು ಆಫ್ ನರ್ಸಿಂಗ್ ಕಾಲೇಜು ಪ್ರಾಂಶುಪಾಲ ಜಿ.ವಿನಯ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ.ಅಂಕಪ್ಪ, ಜೆಎಸ್‌ಎಸ್ ಆಸ್ಪತ್ರೆ ವ್ಯದ್ಯಕೀಯ ಅಧೀಕ್ಷಕ ಡಾ.ನವೀನ್, ಡಾ.ನಯನಶಾಬದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಬಿಜೆಪಿ ಜಿಲ್ಲಾಧ್ಯಕ್ಷ ಹಾಗೂ ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಆರೋಪ**

# ತಾಲ್ಲೂಕಿನಲ್ಲಿ ಆಡಳಿತ ವ್ಯವಸ್ಥೆ ಹದಗೆಟ್ಟಿದೆ



**ಗುಂಡ್ಲುಪೇಟೆ:** ತಾಲ್ಲೂಕಿನಲ್ಲಿ ಆಡಳಿತ ವ್ಯವಸ್ಥೆ ಹದಗೆಟ್ಟಿದೆ ಇಲ್ಲಿ ಹೇಳುವವರು ಕೇಳುವವರಿಲ್ಲದೆ ತಾಲ್ಲೂಕು ಕುಲಗೆಟ್ಟು ಹೋಗಿದೆ, ಆಂಬ್ಯುಲೆನ್ಸ್ ವ್ಯವಸ್ಥೆ, ವೈದ್ಯರ ಕೊರತೆ, ಕೆರೆಗಳಿಗೆ ನೀರು ಬಿಡದೆ ರೈತರಿಗೆ ತೊಂದರೆ, ಕುಡಿಯುವ ನೀರಿನ ಸಮಸ್ಯೆ, ಅಪಘಾತಗಳ ಸಂಖ್ಯೆ ಹೆಚ್ಚಳ, ಟಿಪ್ಪರ್ ಗಳ ಹಾವಳಿ ಕೇರಳಕ್ಕೆ ಅಕ್ರಮವಾಗಿ ಮಣ್ಣು, ಕಲ್ಲು ಸಾಗಾಣೆ ಸೇರಿದಂತೆ ಅನೇಕ ಅವ್ಯವಸ್ಥೆಗಳು ನಡೆಯುತ್ತಿದೆ ಎಂದು ಆರೋಪಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಹಾಗೂ ಮಾಜಿ ಶಾಸಕ ಸಿ,ಎಸ್ ನಿರಂಜನ್ ಕುಮಾರ್ ಪಟ್ಟಣದ ಹೂಸ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿದರು.

ಪತ್ರಿಕಗೋಷ್ಠಿಯಲ್ಲಿ ಮಾತನಾಡಿದ ಅವರು ಬೇಗೂರಲ್ಲಿ ಅಪಘಾತವಾಗಿ ಸರಿಯಾದ ಸಮಯಕ್ಕೆ ಆಂಬ್ಯುಲೆನ್ಸ್ ಇಲ್ಲದೆ ಮೂವರು ಸಾವಿಗೀಡಾದರು, ಗರ್ಭಿಣಿಯರು,, ಹೃದಯಘಾತವಾದವರು, ತುರ್ತು ಸಮಸ್ಯೆಯಾದವರನ್ನು ಕರೆದೋಯ್ಯಲು ಆಂಬ್ಯುಲೆನ್ಸ್ ಗಳೇ ಇಲ್ಲ ರಾಷ್ಟ್ರೀಯ ಹೆದ್ದಾರಿಯಾದ್ದರಿಂದ ಹೆಚ್ಚಿನ ಅಪಘಾತಗಳು ಸಂಭವಿಸುತ್ತದೆ ಆಗಾಗಿ ತಾಲ್ಲೂಕಿನ ಎಲ್ಲಾ ಹೋಬಳಿ ಭಾಗಕ್ಕೆ ಆಂಬ್ಯುಲೆನ್ಸ್ ಇರಬೇಕು ಆದರೆ ತಾಲ್ಲೂಕಿಗೆ ಇರುವುದು ಒಂದೇ ಆಂಬ್ಯುಲೆನ್ಸ್ ಇರುವುದು ಅದನ್ನು ನಿರ್ವಹಣೆ ಮಾಡಿ ಜನರಿಗೆ ಅನುಕೂಲ ಮಾಡಿಸಿಕೊಡುವ ಜವಾಬ್ದಾರಿ ಇರುವುದು ಯಾರಿಗೆ ಮೈಸೂರಿಂದ ಗುಂಡ್ಲುಪೇಟೆ ಬಂದು ಕೈ ಬೀಸಿ ಹೋಗಲು ಮಾತ್ರವೇ ಶಾಸಕ ಇರುವುದು ಎಂದು ಟೀಕಿಸಿದರು.

ಆಂಬ್ಯುಲೆನ್ಸ್ ವಿಚಾರವಾಗಿ ಕ್ರಮ ತೆಗೆದುಕೊಂಡು ಕೆಟ್ಟು ನಿಂತಿರುವ ಆಂಬ್ಯುಲೆನ್ಸ್ ರೆಡಿ ಮಾಡುವುದಕ್ಕು, ಅದಕ್ಕೂ ಈ ಸರ್ಕಾರಕ್ಕೆ ಯೋಗ್ಯತೆ ಇಲ್ಲದಂತಾಗಿದೆ, ಬೇರೆ ವಿಚಾರದಲ್ಲಿ ದೊಡ್ಡಸ್ಥಿಕೆ ತೋರಿಸುವ ನೀವು ಇದರಲ್ಲಿ ತೋರಿಸಿ, ಆಂಬ್ಯುಲೆನ್ಸ್ ಸಂಖ್ಯೆ ಜಾಸ್ತಿ ಮಾಡಿ ಸಾವಿನ ಸಂಖ್ಯೆ ಕಡಿಮೆ ಮಾಡಿ ನೀವು ಏನು ಮಾಡ್ತೀರಾ ಗೊತ್ತಿಲ್ಲ ಜನರಿಗೆ ಅನುಕೂಲವಾಗುವ ಕೆಲಸ ಮಾಡಿ ಇವತ್ತು ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ನಮ್ಮ ಅವಧಿಯಲ್ಲಿ ರೂಪುರೇಷೆಯಾಗಿದ್ದು ಎಂದರು.

ಟಿಪ್ಪರ್ ಗಳ ಹಾವಳಿ: ತಾಲ್ಲೂಕಿನಲ್ಲಿ ಟಿಪ್ಪರ್ ಗಳ ಅಬ್ಬರ ಹೆಚ್ಚಿದ್ದು ಹದಿನೆಂಟು ಚಕ್ರದ ಟ್ರಕ್‌ಗಳು ಬಂದು ರಸ್ತೆಯನ್ನು ಹಾಳುಮಾಡುತ್ತಿದೆ.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್ ಮಲ್ಲೇಶ್ ಚಾಮುಲ್ ಮಾಜಿ ನಿರ್ದೇಶಕ ಕನ್ನೇಗಾಲ ಡಿ ಮಾದಪ್ಪ ಮಾಡ್ರಹಳ್ಳಿ ನಾಗೇಂದ್ರ ಮಾಜಿ ಪುರಸಭೆ ಸದಸ್ಯರಾದ ನಾಗೇಶ್ ಸಿದ್ದಯ್ಯ ಹಸಗೂಲಿ ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಸುನೀಲ್ ಮೂಡ್ಲ್ ಇದ್ದರು.

**ವೈದ್ಯರ ಕೊರತೆ**

**ತಾಲ್ಲೂಕಿನ ಪ್ರಮುಖ ಆಸ್ಪತ್ರೆಯಲ್ಲಿ ವ್ಯದ್ಯರಿಲ್ಲ ಕಾಂಗ್ರೆಸ್ ಪಕ್ಷಕ್ಕೆ ಸಂಬಳ ಕೊಡುವಷ್ಟು ಶಕ್ತಿ ಇಲ್ಲ ಕಬ್ಬಹಳ್ಳಿ ಆಸ್ಪತ್ರೆಯಲ್ಲಿ ವೈದ್ಯರಿಲ್ಲ, ವೈದ್ಯರ ನಿಯೋಜಿಸಲು ಸರ್ಕಾರಕ್ಕೆ ಶಕ್ತಿಇಲ್ಲ ಎಂದರು.**

# ಸಂಕ್ಷಿಪ್ತ ಸುದ್ದಿ

## ಫೆ.19 ರಂದು ಛತ್ರಪತಿ ಶಿವಾಜಿ ಜಯಂತಿ

**ಮೈಸೂರು:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಛತ್ರಪತಿ ಶಿವಾಜಿ ಜಯಂತಿ ಫೆಬ್ರವರಿ 19 ರಂದು ಬೆಳಗ್ಗೆ 12.30 ಘಂಟೆಗೆ ಕರ್ನಾಟಕ ಕಲಾ ಮಂದಿರದಲ್ಲಿ ಆಯೋಜಿಸಲಾಗಿದೆ. ಬೆಳಗ್ಗೆ 9 ಘಂಟೆಗೆ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕಲಾ ಮಂದಿರದವರೆಗೂ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಕೈಗಾರಿಕ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿಯವರ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಹಾಗೂ ಹೆಚ್.ಡಿ ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಅನಿಲ್ ಕುಮಾರ್.ಸಿ. ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ.ಎಂ, ಮೈಸೂರು ಪೇಂಟ್ಸ್ ಮತ್ತು ವಾರ್ನಿಂಷ್ ಲಿಮಿಟೆಡ್ ಅಧ್ಯಕ್ಷ ಹೆಚ್.ಡಿ.ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ.ಪುಷ್ಪ ಅಮರನಾಥ್ ಆಗಮಿಸಲಿದ್ದಾರೆ.

ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಕೆ.ಆರ್ ನಗರ ವಿಧಾನಸಭಾ ಕ್ಷೇತ್ರದ ಶಾಸಕ ರವಿಶಂಕರ್.ಡಿ, ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್ ಗೌಡ, ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ಹಾಗೂ ವಿಧಾನ ಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ.ಯತಿಂದ್ರ.ಎಸ್, ಕೆ.ವಿವೇಕಾನಂದ, ಕೆ.ಶಿವಕುಮಾರ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಹಾಗೂ ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪ್ಯಾರಿಜಾನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಶ್ರೀರಂಗಪಟ್ಟಣದ ದೊಡ್ಡೇಗೌಡನ ಕೊಪ್ಪಲು ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್‌ನ ಗಜಾನನ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಭಾರತೀಯ ಭಾಷಾ ಸಂಸ್ಥಾನ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಹಿರಿಯ ಸಂಶೋಧಕ ಡಾ.ಆರ್.ಚಲಪತಿ ಉಪನ್ಯಾಸ ನೀಡಲಿದ್ದಾರೆ.

## ಅರ್ಜಿ ಅಹ್ವಾನ

**ಮಂಡ್ಯ:** ವಿಕಲಚೇತನರ ಗ್ರಾಮೀಣ ಪುನರ್ವಸತಿ ಯೋಜನೆಯಡಿ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಪಟ್ಟಣ ಪಂಚಾಯಿತಿಯಲ್ಲಿ ಖಾಲಿ ಇರುವ ನಗರ ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಅರ್ಹ ಅಂಗವಿಕಲರನ್ನು ಮಾಸಿಕ ಗೌರವಧನ ಪಾವತಿ ಆಧಾರದ ಮೇಲೆ ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ 18 ರಿಂದ 45 ವರ್ಷದೊಳಗಿನ ಬೆಳ್ಳೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಿಕಲಚೇತನರು ಮಾರ್ಚ್ 05 ರ ಒಳಗಾಗಿ ಭಾಗ್ಯಮ್ಮ ವಿವಿದ್ದೋದೇಶ ಪುನರ್ವಸತಿ ಕಾರ್ಯಕರ್ತರು (ಪ್ರಭಾರ), ತಾಲ್ಲೂಕು ಪಂಚಾಯಿತಿ, ನಾಗಮಂಗಲ ಇವರಿಂದ ಅರ್ಜಿ ನಮೂನೆ ಪಡೆದು ಅಗತ್ಯ ದಾಖಲೆಗಳೊಂದಿಗೆ ನಿಗಧಿತ ಅವಧಿಯೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂ. ಸಂ.7411254522/08232–239234) ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದಾರೆ.

### ಹೆಚ್ಚಿನ ಜನರು ವಿದ್ಯಾಭ್ಯಾಸ ಪಡೆದಂತೆ ಜೀತ ಪದ್ಧತಿ ಪ್ರಮಾಣ ಕುಸಿಯುತ್ತಿದೆ

# ಜೀತ ಪದ್ಧತಿ ಆಚರಿಸುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ



**ಮಂಡ್ಯ:** ಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ವಿದ್ಯಾಭ್ಯಾಸ ಪಡೆದಂತೆ ಜೀತ ಪದ್ಧತಿ ಕುಸಿಯುತ್ತಿದೆ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಜೆ.ಎನ್ ಸುಬ್ರಹ್ಮಣ್ಯ ಅವರು ಹೇಳಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಜೀತ ಪದ್ಧತಿ ರದ್ದತಿ ಕಾಯ್ದೆ 1976ರ ಕುರಿತು ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಎಲ್ಲಿ ಬರಗಾಲ, ಪ್ರವಾಹ ಉಂಟಾಗುತ್ತದೆ ಅಲ್ಲಿ ಆಹಾರದ ಸಮಸ್ಯೆಯಿಂದ ಹಾಗೂ ಖಾಸಗಿ ಲೇವಾದೇವಿ ವ್ಯವಹಾರ ಮಾಡುವ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜೀತ ಪದ್ಧತಿ ಜಾರಿಯಲ್ಲಿದೆ. ಇವತ್ತಿಗೂ ಜೀತ ಪದ್ಧತಿ ಜೀವಂತವಾಗಿ ಇರುವುದು ನಮ್ಮ ಗಮನಕ್ಕೆ ಬಂದಿದೆ ಎಂದರು.

ದೇಶದಲ್ಲಿ ಜೀತ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸರ್ಕಾರದ ಪ್ರತಿಯೊಂದು ಅಂಗಗಳು ಕ್ರಮ ಕೈಗೊಳ್ಳಬೇಕು. ಜೀತ ಪದ್ಧತಿ ಮನಸ್ಥಿತಿ ಮತ್ತು ಜೀತ ಪದ್ಧತಿಯನ್ನು ಆಚರಿಸುತ್ತಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ ಕೃಷ್ಣನ ಜನ್ಮ ಸ್ಥಳಕ್ಕೆ ಕಳುಹಿಸಿದರೆ ಉಳಿದವರಿಗೆ ಎಚ್ಚರಿಕೆ ನೀಡಿದಂತಾಗುತ್ತದೆ ಎಂದು ಹೇಳಿದರು.

ಜೀತ ಪದ್ಧತಿ ಆಚರಿಸುವವರು ಹಾಗೂ ಜೀತ ಪದ್ಧತಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷಕವಾಗಿ ಪ್ರಚೋದನೆ ನೀಡುವವರ ವಿರುದ್ಧ ಯಾವುದೇ ರೀತಿಯ ದಯೆ ದಾಕ್ಷಿಣ್ಯ ಇಲ್ಲದೆ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವ ಮೂಲಕ ಜಾಗೃತಿ ಜೀತ ಪದ್ಧತಿ ನಿರ್ಮೂಲನೆಗೆ ಅರಿವು ಮೂಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಜೀತ ಪದ್ಧತಿ ನಿರ್ಮೂಲನೆ ಸಾಮಾಜಿಕ ಜವಾಬ್ದಾರಿಯಾಗಿದೆ ಈ ನಿಟ್ಟಿನಲ್ಲಿ ಎಲ್ಲರೂ ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪಣ ತೊಡಬೇಕು. ಸ್ವಾತಂತ್ರ?ಯ ಬಂದ ನಂತರ ಭಾರತದಲ್ಲಿ ಅನಕ್ಷರತೆ, ಮೂಢನಂಬಿಕೆ, ಬಡತನ, ಮೌಢ್ಯತೆ ಭಾರತದಲ್ಲಿ ಹೆಚ್ಚಿತ್ತು, ಅಂತಹ ಸಂದರ್ಭದಲ್ಲಿ ಜೀತ ಪದ್ಧತಿಯೂ ಕೂಡ ಹೆಚ್ಚಿತು ಆದರೆ ಇಂದು ದೇಶದಲ್ಲಿ ಸಾಕ್ಷರತೆ ಹೆಚ್ಚಿದರೂ ಸಹ ಭಾರತದಿಂದ ಜೀತ ಪದ್ಧತಿ ನಿರ್ಮೂಲನೆಯಾಗಿಲ್ಲ ಇದು ನಾಗರೀಕ ಸಮಾಜ ತಲೆತಗ್ಗಿಸುವ ಸಂಗಾತಿಯಾಗಿದೆ ಎಂದು ಹೇಳಿದರು.

ಮನುಷ್ಯನಿಂದ ಮನುಷ್ಯ ಅವನ ಇಚ್ಛೆಗೆ ಅನುಸಾರ ಶೋಷಣೆಯಿಂದ ಕಾರ್ಯ ಮಾಡಿಸಿಕೊಳ್ಳುವುದು ಕಾನೂನು ಬಾಹಿರ ಹಾಗೂ ಅಮಾನವೀಯ ಕೃತ್ಯವಾಗಿದೆ. ಜೀತ ಪದ್ಧತಿಗೆ ಪ್ರಮುಖ ಕಾರಣವೆಂದರೆ ನಮ್ಮಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಎಂದು ಹೇಳಿದರು. ಕಳೆದ ಒಂದು ವರ್ಷದಿಂದ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಣ ಅಧಿಕಾರಿಗಳು ಜಿಲ್ಲೆಯನ್ನು ಜೀತ ವಿಮುಕ್ತಿಗೊಳಿಸಲು ಶ್ರಮ ವಹಿಸಿದ್ದಾರೆ. ಜೀತ ಪದ್ಧತಿಗೆ ಒಳಗಾದವರನ್ನು ಗುರುತಿಸಿ ಅವರಿಗೆ ವಿಶೇಷ ಗುರುತಿನ ಚೀಟಿ ನೀಡಿ ವಿವಿಧ ಸರ್ಕಾರಿ ಸೌಲಭ್ಯಗಳನ್ನು ತಲುಪಿಸುವ ಕಾರ್ಯವನ್ನು ಹಮ್ಮಿಕೊಂಡು ಬರುತ್ತಿದ್ದಾರೆ ಎಂದು ಹೇಳಿದರು.

ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಇಲಾಖೆಯಿಂದ ಜೀತ ವಿಮುಕ್ತಿ ಹೊಂದಿದ ವ್ಯಕ್ತಿಗೆ ಸ್ವಾವಲಂಬಿ ಸಾರಥಿ ಯೋಜನೆಯಡಿ ಕಾರ್ ನೀಡಿ ಅವರ ಬದುಕಿಗೆ ನೆರವಾಗಿದೆ. ಅಧಿಕಾರಿಗಳು ಜೀತ ವಿಮುಕ್ತರಿಗೆ ಮಾನವ ನೆಲೆಯಿಂದ ಸ್ಪಂದಿಸಬೇಕು. ಜೀತ ಪದ್ಧತಿಯಿಂದ ವಿಮುಕ್ತಿಗೊಳಿಸುವದರ ಜೊತೆಗೆ ಜೀತ ಪದ್ಧತಿ ಮನಸ್ಥಿತಿಯನ್ನು ಹೋಗಲಾಡಿಸಬೇಕು ಎಂದು ಹೇಳಿದರು.

# ಮಕ್ಕಳ ಕೈಬರಹ ಹಾಗೂ ನಮ್ಮ ವ್ಯಕ್ತಿತ್ವ ಒಂದು ಸಮೀಕರಣ



| ವೀಣಾ ಹೇಮಂತ್‌ಗೌಡ ಪಾಟೀಲ್



ಶಾಲೆ ಎಂದ ಕೂಡಲೇ ನಮ್ಮ ಕಣ್ಣಿಗೆ ಬರುವುದು ವಿಶಾಲವಾದ ಆಟದ ಮೈದಾನ.ಅದಕ್ಕೆ ಹೊಂದಿಕೊಂಡಂತೆ ಹಲವಾರು ಕೋಣೆಗಳ ಸಮುಚ್ಚಯವನ್ನು ಹೊಂದಿರುವ ದೊಡ್ಡ ಕಟ್ಟಡ ಅದರ ಮುಂದೊಂದು ಧ್ವಜಸ್ಥಂಭ. ಆಟವಾಡುತ್ತಿರುವ ಮಕ್ಕಳು ಎಲ್ಲ ರೀತಿಯ ಸೌಕರ್ಯಗಳನ್ನು ಹೊಂದಿರುವ/ಹೊಂದಿರದ ಶಾಲಾ ಕೊಠಡಿಗಳು. ಬೆಂಚುಗಳು, ಕಪ್ಪು ಹಲಗೆಗಳು, ಪುಸ್ತಕಗಳು, ನೋಟ್ ಪುಸ್ತಕಗಳು ಪೆನ್ನು, ಪೆನ್ಸಿಲ್, ಇರೇಜರ್ ಹೀಗೆ ಹತ್ತು ಹಲವು ವಿಷಯಗಳ ಜೊತೆಗೆ ನೆನಪಾಗುವುದು ಓರ್ವ ಶಿಕ್ಷಕ.

ಇದೇ ಶಾಲೆಗಳಲ್ಲಿ ಮಕ್ಕಳು ಓದು ಬರಹ ಆಟ ಪಾಠಗಳಲ್ಲಿ ಕಳೆದು ಬದುಕನ್ನು ರೂಪಿಸಿಕೊಳ್ಳಲು ಅತ್ಯವಶ್ಯಕವಾಗಿ ಇರಲೇಬೇಕಾದ ಮೂಲಭೂತ ಶಿಕ್ಷಣವನ್ನು ಕಲಿಯುವುದು.

ಶಾಲೆಯ ಶಿಕ್ಷಣ ಪದ್ಧತಿಗಳು ಮಕ್ಕಳನ್ನು ಅತ್ಯುತ್ತಮ ನಾಗರಿಕರನ್ನು ರೂಪಿಸುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ದೈನಂದಿನ ಪ್ರಾರ್ಥನೆ, ಓದು–ಬರಹ, ಮನೆಪಾಠ, ವಿವಿಧ ವಿಷಯಗಳ ಸ್ಪರ್ಧೆ, ಆಟೋಟಗಳಂತಹ ವೈವಿಧ್ಯಮಯ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ದಾರಿಯಾಗುತ್ತವೆ.

ಮಕ್ಕಳು ನಿಜವಾಗಿಯೂ ತಮ್ಮ ಕಠಿಣ ಪರಿಶ್ರಮವನ್ನು ಓದು ಹಾಗೂ ಬರಹಗಳಲ್ಲಿ ಹಾಕುತ್ತಾರೆ ಎಂಬುದನ್ನು ಮಕ್ಕಳ ನೋಟ್ ಪುಸ್ತಕದಿಂದ ಅರಿವಾಗುತ್ತದೆ ಎಂದು ಹೇಳಿದರೆ ನಿಮಗೆ ಅಚ್ಚರಿಯಾಗಬಹುದು ಅಲ್ವೇ?

ನಿಜ.. ಮಕ್ಕಳ ವರ್ತನೆಗಳಲ್ಲಿನ ವ್ಯತ್ಯಾಸವನ್ನು ನಾವು ಅವರ ಕೈ ಬರಹಗಳಲ್ಲಿ ಕಾಣಬಹುದು. ಕೈಬರಹ ಮಗುವಿನ ಮನಸ್ಥಿತಿಯ ಕೈಗನ್ನಡಿ ಎಂದರೆ ಖಂಡಿತವಾಗಿಯೂ ತಪ್ಪಿಲ್ಲ ಎಂಬುದು ನಮಗೆ ಅರಿವಾಗುವುದು ಮಕ್ಕಳ ಕೈಬರಹವನ್ನು ಗಮನಿಸಿದಾಗ ಮಾತ್ರ.

ಅತ್ಯಂತ ಸರಳವಾದ ರೀತಿಯಲ್ಲಿ ನಾವು ಮಕ್ಕಳನ್ನು ಅವರಿಗೆ ಅರಿವಿಲ್ಲದಂತೆ ಗಮನಿಸಲು ಕೂಡ ಸಾಧ್ಯ.

ಮಗುವಿನ ಕೈಬರಹದಲ್ಲಿ ಅಲ್ಲಲ್ಲಿ ಕಾಟು ಚಿತ್ತುಗಳು ಇದ್ದು ಮಾರ್ಜಿನ್ನಗಳಲ್ಲಿ ಅಸಮತೋಲನವಿದ್ದರೆ ಅಲ್ಲಲ್ಲಿ ಪೆನ್ನಿನ ಮಸಿ ದಪ್ಪ ತೆಳು ಎಂದು ಹೆಚ್ಚು ಕಡಿಮೆ ಆಗಿದ್ದರೆ ಅದು ಜೀವಂತಿಕೆಯನ್ನು ಸೂಸುತ್ತದೆ. ಕೈಬರಹಗಳಲ್ಲಿ ಒಂದೆಡೆ ದೊಡ್ಡ ಅಕ್ಷರ ಮತ್ತೊಂದೆಡೆ ಚಿಕ್ಕ ಅಕ್ಷರಗಳು ಅವುಗಳ ಬರವಣಿಗೆಯಲ್ಲಿನ ಸೂಕ್ಷ್ಮ ವ್ಯತ್ಯಾಸಗಳು ಕೂಡ ಅವರ ಮನಸ್ಥಿತಿಯನ್ನು ಪ್ರತಿನಿಧಿಸುತ್ತವೆ. ಈ ರೀತಿಯ ಬರವಣಿಗೆಯನ್ನು ಕಂಡಾಗ ಮಗು ತನ್ನದೇ ಆದ ರೀತಿಯಲ್ಲಿ ನಡೆಯಲು ಪ್ರಯತ್ನಿಸುತ್ತದೆ ಜೊತೆಗೆ ಇತರರ ಸಲಹೆಗಳನ್ನು ಒಪ್ಪಿ ಅದನ್ನು ತನ್ನದಾಗಿಸಿಕೊಳ್ಳಲು ಪ್ರಯತ್ನಿಸುತ್ತದೆ ಎಂಬುದು ಗೊತ್ತಾಗುತ್ತದೆ. ಬೇರೆಯವರ ಸಲಹೆಗಳನ್ನು ಒಪ್ಪಿಕೊಳ್ಳುವ ಮಗು ಅದರ ಜೊತೆಜೊತೆಗೆ ತನ್ನತನವನ್ನು ಬಿಟ್ಟು ಕೊಡದೆ ಮುಂದುವರೆಯುವುದು ಮಗುವಿನ ಅಕ್ಷರಗಳಲ್ಲಿನ ವ್ಯತ್ಯಾಸಗಳಲ್ಲಿ ನಮಗೆ ಕಾಣಿಸುತ್ತದೆ. ತಪ್ಪು ಮಾಡಿದರೂ ಕೂಡ ಅದನ್ನು ತಿದ್ದಿಕೊಳ್ಳುವ ಸರಿಯಾದ ಹಾದಿಯಲ್ಲಿ ನಡೆಯುವ ಆಶಯವನ್ನು ಮಗುವಿನ ಬರೆಯುವಿಕೆಯಲ್ಲಿನ ಈ ನಡಾವಳಿ ವ್ಯಕ್ತಪಡಿಸುತ್ತದೆ.... ಇಲ್ಲಿ ಮಕ್ಕಳು ತಾವು ತಾವಾಗಿರಲು ಬಯಸುತ್ತಾರೆ.

ಪ್ರತಿ ಸಾಲುಗಳು ಗೆರೆ ಕೊರೆದಂತೆ ಒಂದೇ ರೀತಿಯ ಸ್ಫುಟವಾದ, ಒಂದೇ ಒಂದು ಚಿತ್ತು ಕಾಟುಗಳಿಲ್ಲದ ಕೈಬರಹ ಪರ್ಫೆಕ್ಟ್ ಎಂಬಂತೆ ಕಾಣುತ್ತದೆ... ಮತ್ತೆ ಕೆಲವೊಮ್ಮೆ ಪ್ರಿಂಟ್ ಹೊಡೆದ ಅಕ್ಷರಗಳು ಎಂಬಂತೆ ತೋರುತ್ತವೆ... ಆದರೆ ಅದರಲ್ಲಿ ಜೀವಂತಿಕೆ ಅಷ್ಟಾಗಿ ತೋರುವುದಿಲ್ಲ. ಸತತವಾಗಿ ಪಾಲಕರು, ಶಿಕ್ಷಕರು ಹಾಗೂ ಸಂಬಂಧಪಟ್ಟವರು ಮಗುವನ್ನು ತಿದ್ದುತ್ತಾ ಹೋದರೆ ಅವರು ಬರೆಯುವ ಅಕ್ಷರಗಳು ಕೂಡ ಕ್ಷಮೆ ಕೇಳುತ್ತವೆ ಏನೋ ಎಂಬಂತೆ ಸ್ಪಷ್ಟವಾಗಿ ಗೋಚರವಾಗುತ್ತವೆ. ಯಾವುದೇ ರೀತಿಯ ತಪ್ಪುಗಳಿಗೆ ಅವಕಾಶವನ್ನು ನೀಡಬಾರದು ಎಂಬ ಸ್ಪಷ್ಟ ಸಂದೇಶವನ್ನು ಅವು ನೀಡುವಂತೆ ಭಾಸವಾಗುತ್ತದೆ ಅಂತಹ ಅಕ್ಷರಗಳಲ್ಲಿ ಜೀವಂತಿಕೆಗಿಂತ ಅತ್ಯಂತ ಕಠಿಣವಾದ ಶಿಸ್ತಿನ ಕ್ರಮದ ಅನುಸರಣೆ ಮಾತ್ರ ಇರುತ್ತದೆ, ಆದರೆ ಆ ಅಕ್ಷರಗಳಲ್ಲಿ ಉಸಿರು ಇರುವುದಿಲ್ಲ. ಅಕ್ಷರ ಬರಹ ಮುದ್ದಾಗಿ ಮುತ್ತು ಪೋಣಿಸಿದಂತೆ ಇರುತ್ತವೆ ನಿಜ... ಆದರೆ ಅದೊಂದು ರೀತಿಯಲ್ಲಿ ಜೀವಂತಿಕೆ ಇಲ್ಲದ ಬೊಂಬೆಗಳನ್ನು ಜೋಡಿಸಿಟ್ಟ ರೀತಿಯಲ್ಲಿ ಅವುಗಳ ವಿನ್ಯಾಸದಲ್ಲಿ ಏಕತಾನತೆ ಭಾಸವಾಗುತ್ತದೆ.

ನಿಜವಾಗಿಯೂ ಪಾಲಕರ ಹಾಗೂ ಶಿಕ್ಷಕರ ಮಾತುಗಳನ್ನು ಆಲಿಸುವ ಮಕ್ಕಳು ತಪ್ಪು ಮಾಡುತ್ತಾ ಕಲಿಯುವ ಕಾರಣ ಅವರ ಅಕ್ಷರಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ

ಒಂದೇ ಒಂದು ತಪ್ಪಿಲ್ಲದ, ಸ್ಫುಟವಾದ, ಶಿಸ್ತುಬದ್ಧ ಬರವಣಿಗೆ ಬಹಳ ಚಂದ ನಿಜ ಅದು ಮಗುವಿನ ಆಂತರಿಕ ಶಿಸ್ತನ್ನು ಪ್ರತಿಪಾದಿಸುತ್ತದೆಯಲ್ಲವೇ ಎಂದು ನೀವು ಕೇಳಬಹುದು

ನಿಜ ಹೇಳಬೇಕೆಂದರೆ ಎಲ್ಲ ಸಮಯದಲ್ಲಿಯೂ ಅತಿಯಾದ ಶಿಸ್ತು ಒಳ್ಳೆಯದಲ್ಲ ಕೆಲವೊಮ್ಮೆ.

ಒಂದೇ ರೀತಿ ತೋರುವ ಒಂದೇ ಬಣ್ಣದ ಹೂಗಳನ್ನು ದೂರ ದೂರದವರೆಗೆ ಕಣ್ಣಿಗೆ ಗೋಚರವಾಗುವವರೆಗೆ ಹಾಸಿನಂತೆ ಬೆಳೆಸಲ್ಪಟ್ಟಿರುವ ಹೂಗಳನ್ನು ನೋಡಿದಾಗ ಸಂತಸವಾಗಬಹುದು, ಆದರೆ ಅದಕ್ಕಿಂತ ಹೆಚ್ಚಿನ ಸಂತಸ ಆಗುವುದು ಬಣ್ಣ ಬಣ್ಣದ ಹೂಗಳು ತಮ್ಮದೇ ಆದ ರೀತಿಯಲ್ಲಿ ಬೆಳೆದು ನಿಂತು ಕಣ್ಣುಗಳನ್ನು ಸೆಳೆಯುವಷ್ಟು ಏಕತಾನತೆಯನ್ನು ತೋರುವ ಹೂಗಳು ಸೆಳೆಯುವುದಿಲ್ಲ.... ನೀವೇ ಯೋಚಿಸಿ ನಿಮಗೆ ಅರಿವಾಗುತ್ತದೆ.

ತಮ್ಮಲ್ಲಿ ತಾವು ಸುಧಾರಣೆಯನ್ನು ಹೊಂದಬೇಕು ಎಂದು ಬಯಸುವವರ ಮಧ್ಯದಲ್ಲಿ ಹಾಗೂ ಬೇರೆಯವರು ತಮ್ಮನ್ನು ಸುಧಾರಿಸುತ್ತಿದ್ದಾರೆ ಎಂಬ ಕಾರಣಕ್ಕಾಗಿ ಬದಲಾಗುವವರ ಮಧ್ಯದಲ್ಲಿ ಅತ್ಯಗಾಧವಾದ ವ್ಯತ್ಯಾಸವಿದೆ.

ತಮಗೆ ತಾವೇ ಬದಲಾಗಬೇಕು ಎಂದುಕೊಳ್ಳುವವರು ಕುತೂಹಲ ಮತ್ತು ಅತ್ಯಂತ ಬದ್ಧತೆಯಿಂದ ಕಾರ್ಯನಿರ್ವಹಿಸಿದರೆ ಬೇರೆಯವರ ಪ್ರೀತಿ ಗಮನ ಹಾಗೂ ಗೌರವವನ್ನು ಪಡೆಯಲು ತಮ್ಮನ್ನು ತಾವು ಬದಲಾಯಿಸಿಕೊಳ್ಳಲು ಬಯಸುವವರು ಬಹಳ ಕಾಲ ಹಾಗೆ ಇರಲು ಸಾಧ್ಯವಿಲ್ಲ.. ಕಾರಣ ಅವರಲ್ಲಿ ಆ ನಿರಂತರ ಶ್ರದ್ಧೆ ಇರುವುದಿಲ್ಲ. ಇತರರ ವಿಶ್ವಾಸವನ್ನು ಕಳೆದುಕೊಳ್ಳುತ್ತೇವೆ ಎಂಬ ಭಯದ ಸೀಮಿತ ಅವಧಿ ದಾಟಿದ ಮರುಕ್ಷಣವೇ ಅವರು ತಮ್ಮ ಮೊದಲಿನ ನಡಾವಳಿಗಳಿಗೆ ಒಳಗಾಗುತ್ತಾರೆ..... ಇದು ಅತ್ಯಂತ ಸಹಜವಾದ ಮನುಷ್ಯ ಪ್ರತಿಕ್ರಿಯೆ.

ಸ್ನೇಹಿತರೆ....ಮಕ್ಕಳ ಕೈಬರಹದ ಬಗ್ಗೆ ಮಾತ್ರ ಇರುವ ಅಭಿಪ್ರಾಯವಲ್ಲವಿದು. ಪ್ರತಿಯೊಬ್ಬ ವ್ಯಕ್ತಿಯ ನಡವಳಿಕೆಯು ಕೂಡ ಹೀಗೆಯೇ ಇರುತ್ತದೆ

ಕೆಲ ಜನರು ನೋಡುವವರ ಕಣ್ಣಿಗೆ ಮಾತ್ರ ಒಂದು ರೀತಿ ತಮ್ಮ ಮನೆಯ ಕೌಟುಂಬಿಕ ವ್ಯವಸ್ಥೆಯಲ್ಲಿ ಒಂದು ರೀತಿ ಇರುತ್ತಾರೆ ಎಂಬುದನ್ನು ನೀವು ಗಮನಿಸಿರಬಹುದು ಇದು ಕೂಡ ಹಾಗೆಯೇ.

ಬೇರೆಯವರ ಮರ್ಜಿ ಕಾಯುತ್ತಾ ಅವರಿಗೆ ಬೇಕಾದಂತೆ ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಾರೆ ಆದರೆ ಅದು ಬಾಹ್ಯವಾಗಿ ಮಾತ್ರ. ಮನುಷ್ಯನ ವ್ಯಕ್ತಿತ್ವದಲ್ಲಿ ಇದನ್ನು ಎರಡು ರೀತಿ ಹೇಳಬಹುದು.

ಕೆಲವರು ಅಂತರಂಗಿಕವಾಗಿ ಹಾಗೂ ಬಹಿರಂಗಿಕವಾಗಿ ತಮ್ಮ ನಿಲುವುಗಳಂತೆಯೇ ನಡೆಯುತ್ತಾರೆ . ಅವರದು ತುಸು ಕಠಿಣ ಎನ್ನಿಸುವಂತಹ ಬದ್ಧತೆ.... ಉಳಿದವರಿಗೆ ಉಪಯೋಗ ಅನುಕೂಲ ಆಗುತ್ತದೆಯೋ ಇಲ್ಲವೋ ಎಂಬುದು ಅವರಿಗೆ ಬೇಕಿಲ್ಲ ಕೇವಲ ತಮ್ಮ ವೈಯುಕ್ತಿಕ ಅನುಕೂಲಗಳು ಮಾತ್ರ ಅವರಿಗೆ ಮುಖ್ಯವಾಗಿ ತೋರುತ್ತದೆ. ಇದು ಒಂದು ರೀತಿಯ ಜನರ ಸ್ವಭಾವವಾಗಿದ್ದು ಅವರನ್ನು ಯಾವುದೇ ಘನ ಪದಾರ್ಥಕ್ಕೆ ಹೋಲಿಸಬಹುದು.

ಮತ್ತೆ ಕೆಲವರು ಇತರರಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ತಾವು ಅಂತರಂಗಿಕವಾಗಿ ಒಪ್ಪದೇ ಹೋದರೂ ಸಮಷ್ಟಿಯ ಹಿತಪ್ರಜ್ಞೆಯಿಂದ ಹೋಗಲಿ ಬಿಡು ಎಂಬ ಭಾವದಿಂದ ತುಸು ಹಿಂದೆ ಸರಿದು ಬಿಟ್ಟು ಕೊಡುವ ಮೂಲಕ ಔದಾರ್ಯವನ್ನು ತೋರಿಸುತ್ತಾರೆ... ಆದರೆ ಆಂತರಿಕವಾಗಿ ಈಗಲೂ ಕೂಡ ಅವರು ತಮ್ಮ ಮನದ ಮಾತುಗಳಿಗೆ ಬದ್ಧರಾಗಿರುತ್ತಾರೆ . ಇವರದೊಂದು ರೀತಿಯ ನೀರಿನ ಸ್ವಭಾವ. ಯಾವುದೇ ಪಾತ್ರೆಗೆ ಹಾಕಿದರೂ ಕೂಡ ಆ ಪಾತ್ರೆಯ ಆಕಾರ ಅಗಲ ವಿನ್ಯಾಸಕ್ಕೆ ಹೊಂದಿಕೊಳ್ಳುವ ನೀರು ತನ್ನ ಸಹಜ ಗುಣ ಸ್ವಭಾವವಾದ ಹರಿಯುವಿಕೆಯನ್ನು ಮಾತ್ರ ಬಿಟ್ಟುಕೊಡುವುದಿಲ್ಲ.ಇವರದ್ದು ಕೂಡ ಗಟ್ಟಿ ವ್ಯಕ್ತಿತ್ವವೇ ಆದರೆ ಸಮುದಾಯದ ಸಾರ್ವಜನಿಕರ ಅವಶ್ಯಕತೆಗೆ ತಮ್ಮನ್ನು ತಾವು ಒಗ್ಗಿಸಿಕೊಂಡು ದುಡಿಯುವ ಮಾನಸಿಕ ಧೈರ್ಯ ಅವರಿಗಿದ್ದು ಮತ್ತೆ ತಮ್ಮತನವನ್ನು ಹೊಂದುವಿಕೆಯಲ್ಲಿ ಅವರು ಹಿಂಜರಿಯುವುದಿಲ್ಲ.

ಮತ್ತೆ ಕೆಲವರು ಬೇರೆಯವರಿಗೆ ಯಾವುದೇ ಕಾರಣಕ್ಕೂ ನೋವನ್ನುಂಟು ಮಾಡಬಾರದು ಎಂದು ಇಲ್ಲವೇ ಸಂಪೂರ್ಣವಾಗಿ ಅವರ ಮಾತನ್ನು ಕೇಳುವ ಅವರು ಹೇಳಿದಂತೆಯೇ ನಡೆಯುವ ವ್ಯಕ್ತಿತ್ವವನ್ನು ತೋರುತ್ತಾರೆ. ಅವರು ಉದ್ದೇಶಪೂರ್ವಕವಾಗಿ ಕೆಲಸಗಳನ್ನು ಸರಿಯಾಗಿ ನಿರ್ವಹಿಸುತ್ತಾರೆ ಹಾಗೂ ಯಾವುದೇ ರೀತಿಯ ತಪ್ಪುಗಳನ್ನು ಮಾಡುವುದಿಲ್ಲ.... ಆದರೆ ಸಮಯ ಬಂದಾಗ ಮಾಯವಾಗುವ ವಿಸ್ಮೃತಿಯನ್ನು ಕೂಡ ಅವರು ಹೊಂದಿರುತ್ತಾರೆ.

ಕೆಲವರಿಗೆ ಮೂಲಭೂತವಾಗಿ ಈ ಶಕ್ತಿಯು ಮೈಗೂಡಿದ್ದರೆ ಮತ್ತೆ ಕೆಲವರು ಬಾಹ್ಯವಾಗಿ ಇಂತಹ ಅಂತ:ಶಕ್ತಿಯನ್ನು ಪಡೆಯುವ ಮೂಲಕ ಗಟ್ಟಿಗೊಳ್ಳುತ್ತಾರೆ ಮತ್ತೆ ಕೆಲವರು ಅಂತರಂಗ ಬಹಿರಂಗಗಳೆರಡು ವಿಭಿನ್ನವಾಗಿ ಇದ್ದು ಬೇರೆಯವರ ಇಂತಹವರನ್ನು ಗೋಸುಂಬೆಯಂತೆ ಬಣ್ಣ ಬದಲಿಸುವ ವ್ಯಕ್ತಿತ್ವ, ಒಳಗೊಂದು ಹೊರಗೊಂದು, ಗೋಮುಖ ವ್ಯಾಘ್ರ, ಎಂದೆಲ್ಲಾ ಕರೆಯುತ್ತಾರೆ ನಮ್ಮ ಜನಪದ ಭಾಷೆಯಲ್ಲಿ ಆಕಳ ಮಾರಿ ಕತ್ತಿ ವದಿಕಿ ಎಂದು ಮನೆಗೆ ಮಾರಿ ಊರಿಗೆ ಉಪಕಾರಿ ಎಂದು ಇಂತಹವರನ್ನು ಕುರಿತು ಷರಾ ಬರೆಯುತ್ತಾರೆ.

ಬದುಕು ನಮ್ಮದು... ನಾವು ರೂಪಿಸಿಕೊಳ್ಳುವ ವ್ಯಕ್ತಿತ್ವವು ನಮಗೆ ಮೆಚ್ಚಿನದಾಗಿರಬೇಕು ಅಂತಹ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ನಮ್ಮತನವನ್ನು ನಾವು ಕಾಯ್ದುಕೊಳ್ಳುವಂತಹ ನಿಟ್ಟಿನಲ್ಲಿ ಸದಾ ಕಾರ್ಯನಿರ್ವಹಿಸುವ ಪ್ರಯತ್ನ ನಮ್ಮದಾಗಿರಲಿ ಎಂದು ಆಶಿಸುವ.

# ಸರ್ಕಾರ ಪಡಿತರ ಹಂಚಿಕೆ ನೀತಿ ಬದಲಿಸಬೇಕು: ಶಾಸಕ ಹೆಚ್.ಟಿ.ಮಂಜು



**ಕೆ.ಆರ್.ಪೇಟೆ:** ನಮ್ಮ ಭಾಗದಲ್ಲಿ ಬೆಳೆದ ಗುಣಮಟ್ಟದ ರಾಗಿಯನ್ನು ನಮ್ಮ ಭಾಗದ ಪಡಿತರ ಗ್ರಾಹಕರಿಗೆ ವಿತರಿಸಬೇಕು. ಇದಕ್ಕೆ ತಕ್ಕಂತೆ ರಾಜ್ಯ ಸರ್ಕಾರ ತನ್ನ ಪಡಿತರ ಹಂಚಿಕೆ ನೀತಿಯನ್ನು ಮಾರ್ಪಡಿಸಬೇಕೆಂದು ಶಾಸಕ ಹೆಚ್.ಟಿ.ಮಂಜು ಆಗ್ರಹಿಸಿದರು.

ಅವರು ಪಟ್ಟಣದ ಎಪಿಎಂಸಿ ಆವರಣದಲ್ಲಿ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ಮಂಡಳಿಯ ವತಿಯಿಂದ ಆಯೋಜಿಸಿದ್ದ ರಾಗಿ ಖರೀದಿ ಕೇಂದ್ರದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ನಮ್ಮ ಮಂಡ್ಯ ಜಿಲ್ಲೆಯ ಭಾಗದಲ್ಲಿ ಅದರಲ್ಲಿಯೂ ಕೆ.ಆರ್.ಪೇಟೆ ತಾಲೂಕಿನಲ್ಲಿ ಉತ್ತಮ ಗುಣಮಟ್ಟದ ರಾಗಿಯನ್ನು ಬೆಳೆಯಲಾಗುತ್ತದೆ. ನಮ್ಮ ರಾಗಿಯನ್ನು ಖರೀದಿ ಮಾಡಿ ನಮ್ಮ ಜನರಿಗೆ ವಿತರಿಸಿ. ಅದನ್ನು ಬಿಟ್ಟು ನಮ್ಮ ರಾಗಿಯನ್ನು ಬೇರೆ ಜಿಲ್ಲೆಗೆ ಕಳುಹಿಸಿ ಬೇರೆ ಕಡೆಯಿಂದ ಕಳಪೆ ಗುಣಮಟ್ಟದ ರಾಗಿಯನ್ನು ತಂದು ನಮ್ಮ ಜನರಿಗೆ ನೀಡುವುದು ಸರಿಯಾದುದಲ್ಲ. ಆಯಾ ಭಾಗದಲ್ಲಿ ಖರೀದಿಸಿದ ರಾಗಿಯನ್ನು ಆಯಾ ಭಾಗದಲ್ಲಿನ ಪಡಿತರ ಗ್ರಾಹಕರಿಗೆ ವಿತರಿಸಿದರೆ ಸರ್ಕಾರಕ್ಕೆ ಸಾಗಾಣಿಕೆ ವೆಚ್ಚ ಸೇರಿದಂತೆ ಇತರ ಹೊರೆಗಳು ಕಡಿಮೆಯಾಗಲಿವೆ ಎಂದು ಶಾಸಕ ಹೆಚ್.ಟಿ.ಮಂಜು ಅಭಿಪ್ರಾಯಪಟ್ಟರು.

ರೈತರು ಮೋಸಗಾರರಲ್ಲ. ಅವರು ಬೆಳೆದ ರಾಗಿಯನ್ನು ಗುಣಮಟ್ಟವನ್ನು ಕಾಪಾಡಿಯೆ ಸರ್ಕಾರದ ಬೆಂಬಲ ಬೆಲೆಯಡಿಯಲ್ಲಿ ಮಾರಾಟವನ್ನು ಮಾಡುತ್ತಾರೆ. ಆದರೆ ಮಧ್ಯವರ್ತಿಗಳು ಬೇರೆ ಭಾಗಗಳಿಂದ ರಾಗಿಯನ್ನು ಕಡಿಮೆ ಬೆಲೆಗೆ ಖರೀದಿಸಿ ನಮ್ಮದೆ ರೈತರ ಆರ್ಟಿಸಿಗಳನ್ನು ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ಮಾರಾಟ ಮಾಡುತ್ತಾರೆ. ಇದರ ಬಗೆಗೆ ಅಧಿಕಾರಿಗಳು ಏಕೆ ಕ್ರಮವಹಿಸುತ್ತಿಲ್ಲ? ಒಂದು ಎಕರೆಗೆ ಎಷ್ಟು ರಾಗಿಯನ್ನು ಬೆಳೆಯಲಾಗುತ್ತದೆ ಎಂದು ಯೋಚಿಸಿ ಹೇಳಬೇಕಾಗಿಲ್ಲ. ಸಾಮಾನ್ಯ ಪ್ರಜ್ಞೆಯಿದ್ದರೆ ಸಾಕು. ಆದರೂ ಕೂಡಾ ಆರ್ಟಿಸಿ ಇದೆ ಎಂದು ಹೇಳಿಕೊಂಡು ಬರುವ ದಳ್ಳಾಳಿಗಳಿಂದ ರಾಗಿ ಖರೀದಿಸಿ ಅರ್ಹ ರೈತರಿಗೆ ವಂಚನೆ ಮಾಡುವುದಾದರೂ ಏಕೆ? ಎಂದು ಕಿಡಿಕಾರಿದ ಶಾಸಕ ಹೆಚ್.ಟಿ.ಮಂಜು ದಳ್ಳಾಳಿಗಳಿಂದ ರಾಗಿ ಖರೀದಿ ನಿಲ್ಲಿಸಿ ನೈಜ ರೈತರಿಂದ ರಾಗಿ ಖರೀದಿಸಿ ಎಂದು ಖರೀದಿ ಕೇಂದ್ರದ ಸಿಬ್ಬಂಧಿಗಳಿಗೆ ಸೂಚಿಸಿದರು.

ಕಳೆದ ಬಾರಿ ನಮ್ಮ ತಾಲೂಕಿನ ನ್ಯಾಯಬೆಲೆ ಅಂಗಡಿಗಳಿಗೆ ಕಳಪೆ ಗುಣಮಟ್ಟದ ರಾಗಿಯನ್ನು ಹಾಸನ ಜಿಲ್ಲೆಯ ಜಾವಗಲ್‌ನ ಗೋಡೌನ್‌ನಿಂದ ತರಿಸಿಕೊಂಡು ಹಂಚಲಾಗಿದೆ ಎಂದು ರೈತಸಂಘದ ಮುಖಂಡರು ಪ್ರತಿಭಟನೆಯನ್ನು ನಡೆಸಿದ್ದರು. ಆಹಾರ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ ಬಂದು ಸಭೆಯನ್ನು ನಡೆಸಿದ್ದರು. ಇದರ ಬಗೆಗೆ ನಾನು ಸರಬರಾಜುದಾರರ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಿದ್ದೆ. ಆದರೆ ಇದುವರೆಗೂ ಕಳಪೆ ರಾಗಿ ಪೂರೈಕೆ ಮಾಡಿದವರ ವಿರುದ್ಧ ಕ್ರಮವಾಗಿಲ್ಲ. ಕಷ್ಟಪಟ್ಟು ಬೆಳೆ ಬೆಳೆದ ರೈತರಿಗೆ ಅನ್ಯಾಯವಾದರೆ ಅವರಿಗೆ ನೋವಾಗುವುದಿಲ್ಲವೆ? ನಮ್ಮ ತಾಲೂಕಿನ ರಾಗಿ ಖರೀದಿ ಕೇಂದ್ರದಲ್ಲಿ ಇಂತಹದ್ದಕ್ಕೆಲ್ಲಾ ಅವಕಾಶವನ್ನು ನೀಡಬಾರದು. ನಾನು ಅನಿರೀಕ್ಷಿತ ಭೇಟಿಯನ್ನು ಕೂಡಾ ನೀಡುತ್ತೇನೆ.

ಒಂದು ವೇಳೆ ತಪ್ಪಾದರೆ ನಾನು ಅಂತಹವರ ವಿರುದ್ಧ ಕಠಿಣ ಕ್ರಮವನ್ನು ತೆಗೆದುಕೊಳ್ಳುವಂತೆ ಶಿಫಾರಸ್ಸು ಮಾಡುತ್ತೇನೆ ಎಂದು ಶಾಸಕ ಮಂಜು ಎಚ್ಚರಿಸಿದರು.

ಈ ಬಾರಿ ಮಳೆಯು ಕೂಡಾ ಅಂತಹ ಚೆನ್ನಾಗಿ ಬಂದಿಲ್ಲ. ಇದರಿಂದಾಗಿ ರಾಗಿಯು ಸ್ವಲ್ಪ ಸಣ್ಣದಾಗಿರುತ್ತದೆ. ಇದನ್ನು ಕೂಡಾ ತೆಗೆದುಕೊಳ್ಳಿ. ಆದರೆ ಗುಣಮಟ್ಟದಲ್ಲಿ ಮಾತ್ರ ರಾಜಿಯಾಗಬೇಡಿ. ರೈತರು ಕೂಡಾ ಇಂತಹ ವಿಷಯಗಳಿಗೆಲ್ಲಾ ಶಾಸಕರ ಬಳಿಗೆ ಬರಬೇಡಿ. ಗುಣಮಟ್ಟಕ್ಕೆ ಆದ್ಯತೆಯನ್ನು ನೀಡಿ. ಇಲ್ಲದಿದ್ದರೆ ಸಂಘಟನೆಗಳಿಗೆ ಪ್ರತಿಭಟಿಸಲು ದಾರಿಮಾಡಿಕೊಟ್ಟಂತಾಗುತ್ತದೆ. ಮೇಲಧಿಕಾರಿಗಳಿಗೂ ಮುಜುಗರವಾಗುತ್ತದೆ. ನಮ್ಮ ತಾಲೂಕು ವ್ಯಾಪ್ತಿಯಲ್ಲಿ ಕೆ.ಆರ್.ಪೇಟೆ ಖರೀದಿ ಕೇಂದ್ರದಲ್ಲಿ 3563 ರೈತರು ರಾಗಿ ಖರೀದಿ ನೊಂದಾಯಿಸಿಕೊಂಡಿದ್ದು ಬಲ್ಲೇನಹಳ್ಳಿ ಖರೀದಿ ಕೇಂದ್ರದಲ್ಲಿ 1043 ರೈತರು ನೊಂದಾಯಿಸಿಕೊಂಡಿದ್ದಾರೆ. ಒಟ್ಟಾರೆ ನಮ್ಮ ತಾಲೂಕಿನಲ್ಲಿ 4606 ನೊಂದಾಯಿತ ರೈತರಿಂದ 1,07,670 ಕ್ವಿಂಟಾಲ್ ರಾಗಿಯನ್ನು ಸರ್ಕಾರ ಖರೀದಿಸಲಿದೆ. ಇನ್ನು ಕೂಡಾ ಸಮಯವಿದ್ದು ರೈತರು ಯಾವುದೆ ಗೊಂದಲಕ್ಕೊಳಗಾಗದೆ ಗುಣಮಟ್ಟ ರಾಗಿಯನ್ನು ಮಾರಾಟಮಾಡಿ ಎಂದು ಶಾಸಕ ಮಂಜು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ತರ?ನೇನಹಳ್ಳಿ ಬಲದೇವ್, ಎಪಿಎಂಸಿ ಮಾಜಿ ಅಧ್ಯಕ್ಷ ಹೊನ್ನೇನಹಳ್ಳಿ ನಾಗರಾಜೇಗೌಡ, ಎಪಿಎಂಸಿ ಕಾರ್ಯದರ್ಶಿ ವಿದ್ಯಾ, ಕೆಎಸ್ಎಫ್‌ಸಿ ವ್ಯವಸ್ಥಾಪಕ ಮನೋಹರ್, ಮುಖಂಡ ಪಿಕೆಜಿ ಮಹೇಶ್ ಸೇರಿದಂತೆ ಮತ್ತಿತರರು ವೇದಿಕೆಯಲ್ಲಿದ್ದರು.

## ಫೆ21ಕ್ಕೆ ಗಾಂಪರ ಗುಂಪು ನಾಟಕ

**ಮೈಸೂರು:** ಬೆಂಗಳೂರು ಪ್ಲೇರ?ಸ್ ಥಿಯೇಟರ್ ಅಸೋಸಿಯೇಷನ್ ವತಿಯಿಂದ ಫೆ.21ರ ಸಂಜೆ 5ಕ್ಕೆ ಮತ್ತು 7ಕ್ಕೆ ರಂಗಾಯಣದ ಕಿರು ರಂಗಮಂದಿರದಲ್ಲಿ ಗಾಂಪರ ಗುಂಪು ಎಂಬ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ನಿರ್ದೇಶಕ ಶ್ರೀಪಾದ ಎಸ್.ಶ್ರೀವತ್ಸ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕನ್ನಡ ನಾಟಕ ಲೋಕದಲ್ಲಿ ತಂಡ ತನ್ನದೇ ಆದ ಛಾಪು ಮೂಡಿಸಿದೆ. ಈಗ ಪ್ರದರ್ಶಿಸುತ್ತಿರುವುದು ಸಹಾ ಕನ್ನಡದ ಪ್ರಸಿದ್ಧ ನಾಟಕವೂ ಆಗಿದೆ. ಈ ನಾಟಕ ಇದಕ್ಕು ಮುನ್ನ ದೂರದರ್ಶನ, ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರದರ್ಶನಗೊಂಡಿದೆ. ಇದು ಸಾಮಾಜಿಕ ಪ್ರಸ್ತುತತೆಯೊಂದಿಗೆ ಮನಮುಟ್ಟುವ ಕಥನ, ಪ್ರಭಾವಶಾಲಿ ಅಭಿನಯಕ್ಕೆ ಖ್ಯಾತವಾಗಿದೆ ಎಂದು ವಿವರಿಸಿದರು. ತಂಡದ ಚೇತನ್ ಕಿಶೋರ್, ಶ್ರೀನಿಧಿ ಹಾಜರಿದ್ದರು.



# ಹಳ್ಳಿಮೈಸೂರು ಸರ್ಕಾರಿ ಶಾಲೆಗೆ ಶತಮಾನೋತ್ಸವ ಸಂಭ್ರಮ






ಬ್ರಿಟಿಷರ ಆಳ್ವಿಕೆಯ ಕಾಲ, ಭಾರತ ಇನ್ನೂ ಸ್ವಾತಂತ್ರ್ಯದ ಕನಸು ಕಾಣುತ್ತಿದ್ದ ಆ ದಿನಗಳು. ಅಂದರೆ 1899ರ ಸುಮಾರಿಗೆ, ಹಳ್ಳಿಮೈಸೂರಿನ ಮಣ್ಣಿನಲ್ಲಿ ಅಕ್ಷರದ ಮೊದಲ ಬೀಜ ಬಿತ್ತಲ್ಪಟ್ಟಿತು. ಅಂದು ಆರಂಭವಾದ ನಮ್ಮ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಹಳ್ಳಿಮೈಸೂರು ಗ್ರಾಮದ ಈ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇಂದು ಬರೋಬ್ಬರಿ 126 ವರ್ಷಗಳ ಸುದೀರ್ಘ ಪಯಣವನ್ನು ಪೂರೈಸಿ, ಜ್ಞಾನದ ಹೆಮ್ಮರವಾಗಿ ಬೆಳೆದು ನಿಂತಿದೆ. ಸ್ವಾತಂತ್ರ್ಯ ಪೂರ್ವದ ಆ ಹಳೆಯ ಕಂಪನ್ನು ಇಂದಿಗೂ ತನ್ನ ಉಸಿರಿನಲ್ಲಿ ಉಳಿಸಿಕೊಂಡಿರುವ ಈ ಶಾಲೆಯ ಗೋಡೆಗಳು ಲಕ್ಷಾಂತರ ಬದುಕಿನ ಯಶೋಗಾಥೆಗಳಿಗೆ ಸಾಕ್ಷಿಯಾಗಿವೆ. ಹಳ್ಳಿಮೈಸೂರು ಮತ್ತು ಸುತ್ತಮುತ್ತಲ ಗ್ರಾಮಗಳ ಅದೆಷ್ಟೋ ಪ್ರತಿಭೆಗಳಿಗೆ ಈ ಶಾಲೆ ಭದ್ರವಾದ ಅಡಿಪಾಯವನ್ನು ಹಾಕಿಕೊಟ್ಟಿದೆ. ಕಾಲಕ್ಕೆ ತಕ್ಕಂತೆ ತನ್ನನ್ನು ತಾನು ನವೀಕರಿಸಿಕೊಳ್ಳುತ್ತಾ ಬಂದಿದೆ.ಈ ಶಾಲೆಯ ಇಂದು 126 ವರ್ಷಗಳ ಮಹತ್ತರ ಇತಿಹಾಸವನ್ನು ಹೊಂದಿರುವ ಜ್ಞಾನಮಂದಿರವಾಗಿದೆ. ಒಂದು ಸಣ್ಣ ಕಟ್ಟಡದಲ್ಲಿ ಕೆಲವೇ ವಿದ್ಯಾರ್ಥಿಗಳೊಂದಿಗೆ ಆರಂಭವಾದ ಈ ಸರ್ಕಾರಿ ಶಾಲೆ,ಕಾಲಕ್ರಮೇಣ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣದ ಬೆಳಕು ಹಂಚಿ, ಲಕ್ಷಾಂತರ ಕುಟುಂಬಗಳ ಬದುಕಿನಲ್ಲಿ ಬದಲಾವಣೆಯ ದೀಪ ಹಚ್ಚಿದೆ. ಹಳ್ಳಿಮೈಸೂರು ಮತ್ತು ಸುತ್ತಮುತ್ತಲಿನ ಗ್ರಾಮಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಪ್ರಗತಿಗೆ ಈ ಶಾಲೆ ಭದ್ರವಾದ ಅಡಿಪಾಯವಾಗಿದ್ದು, ಅನೇಕ ಪೀಳಿಗೆಗಳ ಕನಸುಗಳಿಗೆ ಬೆಂಬಲವಾಗಿ ನಿಂತಿದೆ.

ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣದ ಮಹತ್ವವನ್ನು ಅರಿವು ಮಾಡಿಸಿ, ?ಶಿಕ್ಷಣವೇ ಶಕ್ತಿ? ಎಂಬ ಸಂದೇಶವನ್ನು ಮನೆಮನೆಗೆ ತಲುಪಿಸಿದ ಹೆಗ್ಗಳಿಕೆ ಈ ಶಾಲೆಗೆ ಸೇರಿದೆ.

**ಸೇವೆ ಸಲ್ಲಿಸಿದ ಶಿಕ್ಷಕರ ಸೇವೆ ಸ್ಮರಣೆಯ:** ಈ ಶಾಲೆಯಲ್ಲಿ ಅನೇಕ ಶಿಕ್ಷಕರು ತಮ್ಮ ಜೀವನವನ್ನೇ ವಿದ್ಯಾರ್ಥಿಗಳ ಬೆಳವಣಿಗೆಗೆ ಸಮರ್ಪಿಸಿ, ಶಿಸ್ತು, ಮೌಲ್ಯಾಧಾರಿತ ಶಿಕ್ಷಣ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಪ್ರಾಮುಖ್ಯತೆ ನೀಡಿದರು. ಅವರ ತ್ಯಾಗ ಮತ್ತು ಪರಿಶ್ರಮದಿಂದಲೇ ಈ ವಿದ್ಯಾಲಯ ಇಂದಿಗೂ ತನ್ನ ಗೌರವವನ್ನು ಉಳಿಸಿಕೊಂಡಿದೆ. ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಹಳೆಯ ವಿದ್ಯಾರ್ಥಿಗಳು ಇಂದು ವೈದ್ಯರು, ಇಂಜಿನಿಯರ್‌ಗಳು, ವಕೀಲರು, ಶಿಕ್ಷಕರು, ಸರ್ಕಾರಿ ಅಧಿಕಾರಿಗಳು, ರೈತ ನಾಯಕರು ಹಾಗೂ ಉದ್ಯಮಿಗಳಾಗಿ ಸಮಾಜದಲ್ಲಿ ಹೆಸರು ಮಾಡಿದ್ದಾರೆ. ಅವರ ಸಾಧನೆಗಳು ಶಾಲೆಯ ಶ್ರೇಷ್ಠತೆಯನ್ನು ಸಾರುತ್ತವೆ. ಹಳ್ಳಿಮೈಸೂರು ಶಾಲೆ ಕೇವಲ ಅಕ್ಷರಜ್ಞಾನ ನೀಡಿದಿಲ್ಲ; ಆತ್ಮವಿಶ್ವಾಸ, ದೇಶಪ್ರೇಮ, ಮಾನವೀಯತೆ ಮತ್ತು ನೈತಿಕ ಮೌಲ್ಯಗಳನ್ನು ವಿದ್ಯಾರ್ಥಿಗಳ ಮನದಲ್ಲಿ ಬಿತ್ತಿದೆ.

**2025ರಲ್ಲಿ ಪಿ.ಎಂ.ಶ್ರೀ ಸರ್ಕಾರಿ ಶಾಲೆಯಾಗಿ ಅಭಿವೃದ್ಧಿಯತ್ತ ಹೆಜ್ಜೆ:** 2025ರಲ್ಲಿ ಪಿ.ಎಂ.ಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಅಭಿವೃದ್ಧಿಗೊಂಡಿರುವುದು ಮತ್ತೊಂದು ಹೆಮ್ಮೆಯ ಸಂಗತಿ. ಆಧುನಿಕ ತರಗತಿ ಕೊಠಡಿಗಳು, ಡಿಜಿಟಲ್ ಬೋಧನಾ ವಿಧಾನಗಳು, ಕಂಪ್ಯೂಟರ್ ಶಿಕ್ಷಣ, ಸಮೃದ್ಧ ಗ್ರಂಥಾಲಯ ಹಾಗೂ ಕ್ರೀಡಾ ಸೌಲಭ್ಯಗಳೊಂದಿಗೆ ವಿದ್ಯಾರ್ಥಿಗಳಿಗೆ ಸಮಗ್ರ ಶಿಕ್ಷಣವನ್ನು ಒದಗಿಸಲಾಗುತ್ತಿದೆ. ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ, ಗ್ರಾಮೀಣ ಮಕ್ಕಳಿಗೆ ನಗರ ಮಟ್ಟದ ಅವಕಾಶಗಳನ್ನು ಒದಗಿಸುವ ಕಾರ್ಯ ಇಲ್ಲಿ ನಡೆಯುತ್ತಿದೆ.

**ನಾಳೆಗೆ 125ರ ಶತಮಾನೋತ್ತರ ರಜತ ಮಹೋತ್ಸವ ಸಂಭ್ರಮ:** ದಿನಾಂಕ 19.02.2026ರ ಗುರುವಾರ 125ರ ಶತಮಾನೋತ್ತರ ರಜತ ಮಹೋತ್ಸವ ಹಾಗೂ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿರುವುದು ಶಾಲೆಯ ಇತಿಹಾಸದಲ್ಲಿ ಸ್ಮರಣೀಯ ಕ್ಷಣವಾಗಿದೆ. ಇದು ಕೇವಲ ಸಂಭ್ರಮದ ಕಾರ್ಯಕ್ರಮವಲ್ಲ; ಶಾಲೆಯ ಸಾಧನೆಗಳನ್ನು ಸ್ಮರಿಸುವ, ಹಳೆಯ ವಿದ್ಯಾರ್ಥಿಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಹಾಗೂ ಭವಿಷ್ಯದ ದಿಶೆಯನ್ನು ನಿರ್ಧರಿಸುವ ಮಹತ್ವದ ಕ್ಷಣವಾಗಿದೆ. ಈ ಸಂದರ್ಭದಲ್ಲಿ ಸಂಸ್ಕೃತಿಕ ಕಾರ್ಯಕ್ರಮಗಳು, ಪ್ರತಿಭಾ ಪ್ರದರ್ಶನಗಳು, ಸಾಧಕರ ಸನ್ಮಾನ ಹಾಗೂ ಶಾಲೆಯ ಅಭಿವೃದ್ಧಿ ಯೋಜನೆಗಳ ಘೋಷಣೆ ನಡೆಯಲಿದೆ.

**ಹಿರಿಯ ವಿದ್ಯಾರ್ಥಿಗಳ ಬೆಂಬಲದ ನಿರೀಕ್ಷೆಯಲ್ಲಿ ಶಾಲೆ:** ಇದು ಎಲ್ಲಾ ಹಿರಿಯ ವಿದ್ಯಾರ್ಥಿಗಳಿಗೆ ತಮ್ಮ ತಾಯಿಶಾಲೆಗೆ ಋಣ ತೀರಿಸುವ ಅವಕಾಶವಾಗಿದೆ. ಶಾಲೆಯ ಮುಂದಿನ ಅಭಿವೃದ್ಧಿಗೆ ದೇಣಿಗೆ, ವಿದ್ಯಾರ್ಥಿವೇತನ, ಮೂಲಸೌಕರ್ಯ ವೃದ್ಧಿ, ಡಿಜಿಟಲ್ ಸಾಧನಗಳ ಕೊಡುಗೆ ಹಾಗೂ ಮಾರ್ಗದರ್ಶನ ಕಾರ್ಯಕ್ರಮಗಳ ಮೂಲಕ ಕೈಜೋಡಿಸುವುದು ನಮ್ಮ ಹೊಣೆಗಾರಿಕೆ. ?ಒಬ್ಬ ವಿದ್ಯಾರ್ಥಿ ಬೆಳೆಯುವಾಗ ಒಂದು ಕುಟುಂಬ ಬೆಳೆಯುತ್ತದೆ; ಒಂದು ಶಾಲೆ ಬೆಳೆಯುವಾಗ ಒಂದು ಸಮಾಜ ಬೆಳೆಯುತ್ತದೆ? ಎಂಬ ಸತ್ಯವನ್ನು ಮನದಲ್ಲಿಟ್ಟುಕೊಂಡು ನಾವು ಸಹಕಾರ ನೀಡಬೇಕು ಎಂಬುದು ನನ್ನ ಆಶಯ

ಶತಮಾನಗಳ ಪರಂಪರೆಯನ್ನು ಹೊತ್ತ ಈ ಶಾಲೆ, ಮುಂದಿನ ಪೀಳಿಗೆಗಳಿಗೆ ಜ್ಞಾನ, ಮೌಲ್ಯ ಮತ್ತು ಸೃಜನಶೀಲತೆಯ ಕೇಂದ್ರವಾಗಿರಲಿ. ಹಳ್ಳಿಮೈಸೂರು ಸರ್ಕಾರಿ ಶಾಲೆ ನಮ್ಮ ಹೆಮ್ಮೆ, ನಮ್ಮ ಗೌರವ ಮತ್ತು ನಮ್ಮ ಭವಿಷ್ಯದ ಆಶಾಕಿರಣ. ಬನ್ನಿ, ಎಲ್ಲರೂ ಒಂದಾಗಿ ಈ ಜ್ಞಾನಮಂದಿರವನ್ನು ಇನ್ನಷ್ಟು ಉನ್ನತಿಗೆ ಕೊಂಡೊಯ್ಯೋಣ.

**ಕೀರ್ತಿರಾಜ್ ಹಳ್ಳಿಮೈಸೂರು**

# ರಂಗೋಲಿ ಸ್ಪರ್ಧೆ:
## ಸಮಾಧಾನಕರ ಬಹುಮಾನ ವಿತರಣೆ

**ಮಂಡ್ಯ:** ಬೂದನೂರು ಉತ್ಸವ ಪ್ರಯುಕ್ತ 30 ಗ್ರಾಮಗಳಲ್ಲಿ ರಂಗೋಲಿ ಸ್ಪರ್ಧೆಯನ್ನು ಆಯಾಯಾ ಗ್ರಾಮಗಳಲ್ಲಿ ಏರ್ಪಡಿಸಲಾಗಿದ್ದು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಸಮಾಧಾನಕರ ಬಹುಮಾನವನ್ನು ವಿತರಿಸಲಾಗುವುದು ಮತ್ತು ಪ್ರತಿಯೊಂದು ಗ್ರಾಮಕ್ಕೂ ಪ್ರಥಮ,ದ್ವಿತೀಯ,ತೃತೀಯ ಬಹುಮಾನಗಳನ್ನು ವಿತರಿಸಲಾಗುವುದು ಎಂದು ಜಿಲ್ಲಾ ಶಾಸಕರಾದ ಪಿ ರವಿಕುಮಾರ್ ರವರು ಹೇಳಿದರು.

ಬೂದನೂರು ಉತ್ಸವ 2026ರ ಪ್ರಯುಕ್ತ ಬೂದನೂರು ಗ್ರಾಮದಲ್ಲಿ ಏರ್ಪಡಿಸಲಾಗಿದ್ದ ರಂಗೋಲಿ ಸ್ಪರ್ಧೆಯಲ್ಲಿ ಬಿಡಿಸಿರುವ ರಂಗೋಲಿಗಳನ್ನು ವೀಕ್ಷಣೆ ಮಾಡಿ ಮಾತನಾಡಿ ಬೂದನೂರು ಗ್ರಾಮದ ರಂಗೋಲಿ ಸ್ಪರ್ಧೆಯಲ್ಲಿ ವಿವಿಧ ರೀತಿಯ ರಂಗೋಲಿಗಳಾದ ಕಾಂತಾರ, 3ಆ ರಂಗೋಲಿ ಮತ್ತು ಗೃಹಲಕ್ಷ್ಮಿ ಯೋಜನೆಯ ಕುರಿತು ಮಾಹಿತಿ ನೀಡುವಂತಹ ವಿವಿಧ ರೀತಿಯಲ್ಲಿ ರಂಗೋಲಿಯನ್ನು ಬಿಡಿಸಿರುವುದನ್ನು ವೀಕ್ಷಣೆ ಮಾಡಿದರು.


ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಡಾ.ಕುಮಾರ, ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಕೆ.ಆರ್ ನಂದಿನಿ, ಉಪ ವಿಭಾಗ ಅಧಿಕಾರಿಯಾದ ಶಿವಮೂರ್ತಿ, ಮಂಡ್ಯ ತಹಸಿಲ್ದಾರ್ ವಿಶ್ವನಾಥ್ ಇನ್ನಿತರರಿದ್ದರು.



# ಫೆ.21ಕ್ಕೆ ಒಂದು ದಿನದ ಸಮ್ಮೇಳನ

**ಮೈಸೂರು:** ನಗರದ ಬೋಗಾದಿ ಬ್ಯಾಂಕ್ ನೌಕರರ ಕಾಲೋನಿಯಲ್ಲಿನ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯ ಮೈಸೂರು ಶಾಖೆಯ ಸಭಾಂಗಣದಲ್ಲಿ ಫೆ.21 ರ ಬೆಳಗ್ಗೆ 7.30 ರಿಂದ ಸಂಜೆ 7 ರವರೆಗೆ ಬಜೆಟ್– 2026 ಭಾರತದ ಭವಿಷ್ಯಕ್ಕಾಗಿ ಹಣಕಾಸು ಮಾರ್ಗಸೂಚಿ ಎಂಬ ಒಂದು ದಿನದ ಸಮ್ಮೇಳನ ಆಯೋಜಿಸಿರುವುದಾಗಿ ಅಧ್ಯಕ್ಷ ಎಸ್.ಭಾರ್ಗವ ತಿಳಿಸಿದರು.

# ಪರೀಕ್ಷೆ ಬರಲಿ ಭಯ ದೂರವಿರಲಿ





**। ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.**


ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಓದು ಅಭ್ಯಾಸ ಹೇಗಿರುತ್ತೋ ಹಾಗೇ ಪರೀಕ್ಷೆಯಲ್ಲಿ ಫಲ ದೊರೆಯುತ್ತದೆ. ಪರೀಕ್ಷಾಸಮಯ ಮಕ್ಕಳಿಗಷ್ಟೇ ಅಲ್ಲ ಪಾಲಕರಾದಿಯಾಗಿ ಎಲ್ಲರಿಗೂ ಅಗ್ನಿಪರೀಕ್ಷೆಯ ಸಮಯ.ಪರೀಕ್ಷಾ ಸಿದ್ಧತೆಗಳ ಬಗ್ಗೆ ಎಲ್ಲರಿಗೂ ಜವಾಬ್ದಾರಿ ಇರುತ್ತದೆ.ಈ ಹಿನ್ನೆಲೆಯಲ್ಲಿ ಸರ್ವರೂ ತಮ್ಮ ಜವಾಬ್ದಾರಿ ಅರಿತು ಸರಿಯಾಗಿ ನಿರ್ವಹಿಸಿ ಮಕ್ಕಳಿಗೆ ಅಚತಚುಕಟ್ಟಾಗಿ ಮಾರ್ಗದರ್ಶನ ಮಾಡಿದಲ್ಲಿ ,ವಿದ್ಯಾರ್ಥಿಗಳಿಗೆ ಪರೀಕ್ಷೆ ಕಬ್ಬಿಣದ ಕಡಲೆಯಾಗದೆ ಸುಲಿದ ಬಾಳೇಹಣ್ಣಿನಂತಾಗುತ್ತದೆ.

ಪರೀಕ್ಷಾ ಸಮಯ ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಂತ ಸಂದಿಗ್ಧ ಅವಧಿ.ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆಗೆ ಅತ್ಯಂತ ಮಹತ್ವವಿದೆ.ತಿಂಗಳ ಪರೀಕ್ಷೆ ,ಆರುತಿಂಗಳ ಪರೀಕ್ಷೆ,ಮೂರುತಿಂಗಳ ಪರೀಕ್ಷೆಗಳು ಬಂದಾಗ ಮಕ್ಕಳು ಒತ್ತಡಕ್ಕೆ ಒಳಗಾಗಲು ಶುರುವಾಗುವದು ಸಹಜ.ಅನೇಕರು ಊಟಬಿಡುವದು ,ನಿದ್ರೆ ತೊರೆಯುವದು,ಮಾಡಿದಾಗ ಅನಾರೋಗ್ಯಕ್ಕೆ ಒಳಗಾಗುವದು ಸಾಮಾನ್ಯ.ಇಂದಿನ ಸ್ಪರ್ಧಾತ್ಮಕಯುಗದಲ್ಲಿರುವ ಅಂಕಗಳ ಮಹತ್ವ ,ಪೋಷಕರು ಕನಸಿನ ಗೋಪುರ ಕಟ್ಟಲು ಮಕ್ಕಳ ಮೇಲೆ ಒತ್ತಡ ಹಾಕುತ್ತಾರೆ.ಇದರಿಂದ ವಿದ್ಯಾರ್ಥಿಗಳಲ್ಲಿ ಭಯ ಶುರುವಾಗುತ್ತದೆ.ಸರಿಯಾದ ಮಾರ್ಗದರ್ಶನ ದೊರೆಯದೇ ನಿರಾಶೆ ಕಾರ್ಮೋಡ ಅವರನ್ನು ಆವರಿಸುತ್ತದೆ.ಅದರಿಂದ ಹೊರಬರಲಾರದೇ ಪರೀಕ್ಷೆ ಬರೆದು ಪರಿಣಾಮ ಅಂದುಕೊಂಡ ಹಾಗೆ ಬರದೇ ಪರಿತಪಿಸುವಂತೆ ಆಗುವದು.

ಪರೀಕ್ಷೆಯ ದಿನಗಳಲ್ಲಿ ಇದೊಂದು ಮಕ್ಕಳಿಗೆ ಅಧ್ಯಾಯ,ಇದೊಂದು ಪಾಠ,,ಇದೊಂದು ಸೂತ್ರ,ಇದೊಂದು ಪ್ರಯೋಗ ಇವುಗಳನ್ನು ತಿಳಿಯದಿದ್ದರೆ ಏನಾಯಿತೆಂದು ಅಲಕ್ಷ ಬೇಡ.ಪ್ರತಿದಿನವೂ ಯಾವುದನ್ನು ಓದಲಿ ,ಯಾವುದನ್ನು ಹಿಂದಿಡಲಿ ಎಂದೆನ್ನದೇ ಅಂದಂದಿನ ವಿಷಯವನ್ನು ಅಂದೇ ಅಭ್ಯಾಸಮಾಡಿ 2–3 ಗಂಟೆ ಏಕಾಗ್ರತೆಯಿಂದ ಓದಿದರೆ ಒಳ್ಳೆಯದು.ಮಕ್ಕಳು ತಮಗೆ ಯಾವುದೇ ವಿಷಯದ ಮೇಲೆ ಎಷ್ಟು ಪ್ರಭುತ್ವವಿದೆ ಎಂದು ಅವರು ತಿಳಿಯಬೇಕಾದರೆ ಅದರ ಕುರಿತು ಸಹಪಾಠಿಗಳೊಂದಿಗೆ ಚಚರ್ಚಿಸಬೇಕು.ಆಗ ಅದರ ತಿಳುವಳಿಕೆಯ ಮಟ್ಟ ಅರಿವಾಗುತ್ತದೆ.ಕಡಿಮೆ ಅನಿಸಿದಾಗ ಶಿಕ್ಷಕರನ್ನು ಕೇಳಬೇಕು.ಗಣಿತ ,ವಿಜ್ಞಾನ,ಸಾಮಾಜಿಕ ಜ್ಞಾನದಂತಹ ವಿಷಯಗಳನ್ನು ಬಹಳ ಎಚ್ಚರಿಕೆಯಿಂದ ಸಾಧ್ಯವಾದಷ್ಟು ಏಕಾಗ್ರತೆಯಿಂದ ಓದಬೇಕು.ಮಕ್ಕಳಿಗೆ ಅನುಕೂಲವಾಗುವದಾದರೆ ಕಠಿಣ ವಿಷಯಗಳನ್ನು ಮುಂಜಾನೆ ಬೇಗ ಎದ್ದು ಓದಿಕೊಂಡರೆ ಒಳಿತು.ಯಾಕೆಂದರೆ ನಸುಕಿನಲ್ಲಿ ವಾತಾವರಣ ಪ್ರಶಾಂತವಾಗಿರುತ್ತದೆ.ಓದಿದ್ದು ಹೆಚ್ಚು ಅರ್ಥವಾಗುವದಲ್ಲದೇ ನೆನಪಿನಲ್ಲಿ ಉಳಿಯುತ್ತದೆ. ಅನೇಕ ಸಂದರ್ಭಗಳಲ್ಲಿ ಎಲ್ಲ ವಿಷಯಗಳನ್ನು ಚೆನ್ನಾಗಿ ಓದುವದರಿಂದ ನೆನಪಿನಲ್ಲಿ ಉಳಿಯುತ್ತದೆ.ಪರೀಕ್ಷೆಗಳಲ್ಲಿ ಎಲ್ಲರಿಗಿಂತ ಭಿನ್ನರೀತಿಯ ವಿಭಿನ್ನ ಶೈಲಿಯ ಉತ್ತರವನ್ನು ಮಕ್ಕಳು ಬರೆದಲ್ಲಿ ಮೌಲ್ಯಮಾಪಕರ ಮನಸೆಳೆದು ಹೆಚ್ಚು ಅಂಕಗಳು ಬರುತ್ತವೆ.ಬರೆಯಲು ಆರಂಭಿಸುವ ಮುನ್ನ ಉತ್ತರಪತ್ರಿಕೆಯಲ್ಲಿ ಆಯಾವಿಭಾಗದ ಎಲ್ಲ ಮಾಹಿತಿಗಳನ್ನು ಪೂರ್ಣಗೊಳಿಸಬೇಕು.ಸಮಯದತ್ತ ಗಮನವಿರಲಿ.

**ಎಲ್ಲರ ಸಹಕಾರ ಅಗತ್ಯ**

ವಿದ್ಯಾರ್ಥಿಗಳನ್ನು ಹೆಚ್ಚಿನ ಕಾಳಜಿಯಿಂದ ನೋಡಿಕೊಳ್ಳಬೇಕಾಗುತ್ತದೆ.ಅವರ ಊಟ,ನಿದ್ರೆ,ವಿಶ್ರಾಂತಿ ಹಾಗೂ ಮನರಂಜನೆಯಲ್ಲಿ ಆದ ವ್ಯತ್ಯಾಸದಿಂದ ಚಿಂತಿತರಾಗಬಹುದು.ರಾತ್ರಿಯಲ್ಲ ಓದುವಾಗ ಹಸಿವು,ನೀರಡಿಕೆ ಕಾಡಬಹುದು.ಅನಾರೋಗ್ಯ ಉಂಟಾಗಬಹುದು.ಆಗ ತಂದೆ,ತಾಯಿ,ಸಹೋದರ,ಸಹೋದರಿ,ಶಿಕ್ಷಕರು,ಮಿತ್ರರು



ಎಲ್ಲರೂ ಅವರಿಗೆ ಧೈರ್ಯತುಂಬಿ ಸಾಧ್ಯವಾದಷ್ಟು ರೀತಿಯಲ್ಲಿ ಅವರಿಗೆ ಸಹಕಾರ,ಸಲಹೆ,ಮಾರ್ಗದರ್ಶನ ಮಾಡಬೇಕು.ಪ್ರತೀ ಸೋಲಿನ ಹಿಂದೆ ಯಶಸ್ಸು ಇರುತ್ತದೆ.ಮಕ್ಕಳೇ ತಕ್ಷಣ ಮೇಲೇಳಿರಿ.ಮರುಪ್ರಯತ್ನಕ್ಕಿಳಿಯಿರಿ.ನೀವಲ್ಲದೇ ಮತ್ತಾರೂ ನಿಮ್ಮನ್ನು ಮೇಲೆತ್ತಲಾರರು.ಯಾವ ದಾರಿಯೂ ಗುರಿಯಲ್ಲ. ಯಾವ ಪ್ರಯತ್ನವೂ ಅಂತಿಮವಲ್ಲ.ಪ್ರಯತ್ನಕ್ಕೆ ತಕ್ಕ ಫಲ ದೊರೆಯುವದು ಖಂಡಿತ.

# ಶ್ರೀ ಆತ್ಮಲಿಂಗೇಶ್ವರ ರಥೋತ್ಸವ

**ಕೆ.ಎಂ.ದೊಡ್ಡಿ:** ಸಮೀಪದ ಹನುಮಂತನಗರದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ಶ್ರೀ ಆತ್ಮಲಿಂಗೇಶ್ವರ ರಥೋತ್ಸವವು ಭಕ್ತಾಧಿಗಳ ಸಮ್ಮುಖದಲ್ಲಿ ವೈಭವದಿಂದ ನೆರವೇರಿತು.

ಶ್ರೀ ಆತ್ಮಲಿಂಗೇಶ್ವರ ಧರ್ಮದರ್ಶಿ ಮಂಡಳಿ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಶ್ರೀ ಆತ್ಮಲಿಂಗೇಶ್ವರ ಉತ್ಸವ ಮೂರ್ತಿ ಪೂಜೆಸಲ್ಲಿಸಿದರು. ಬಳಿಕ ಭಾರತೀ ಎಜುಕೇಷನ್ ಟ್ರಸ್ಟ್ ಕಾರ್ಯನಿರ್ವಾಹಕ ಟ್ರಸ್ಟಿ ಆಶಯ್ ಮಧು ರಥೋತ್ಸವಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಎಂಎಲ್ಸಿ ಮಧು ಜಿ. ಮಾದೇಗೌಡ ಮಾತನಾಡಿ, ಪ್ರತೀ ವರ್ಷದಂತೆ ಈ ವರ್ಷವು ಸಹ ರಥೋತ್ಸವಕ್ಕೆ ಚಾಲನೆ ನೀಡಲಾಗಿದೆ. ಈ ರಥೋತ್ಸವ ಕಾರ್ಯಕ್ರಮಕ್ಕೆ ಸುತ್ತಮುತ್ತಲ ಗ್ರಾಮದ ಭಕ್ತಾಧಿಗಳು ಭಾಗವಹಿಸಿ ರಥವನ್ನು ಎಳೆಯುವ ಮೂಲಕ ಯಶಸ್ವಿಗೊಳಿಸಿದ್ದು ಈ ಬಾರಿ ಉತ್ತಮ ಮಳೆಯಾಗಿ ರೈತರು ಸಮೃದ್ಧಿಯಾಗಿ ಬೆಳೆ ಬೆಳೆಯಲಿ ಎಂದು ಆಶೀಸಿದರು.

ಭಕ್ತರು ಹಾಗೂ ವಿದ್ಯಾರ್ಥಿಗಳು ರಥವನ್ನು ಎಳೆದು ಹಣ್ಣು ಮತ್ತು ಜವನವನ್ನು ಎಸೆಯುವುದರ ಮೂಲಕ ದೇವರನ್ನು ನೆನೆದರು. ಶ್ರೀ ಆತ್ಮಲಿಂಗೇಶ್ವರ ದೇವರಿಗೆ ಬೆಳಗ್ಗೆ 6 ರಿಂದ 8 ಗಂಟೆಯವರೆಗೆ ವಿಶೇಷ ಪೂಜಾ ಕಾರ್ಯಕ್ರಮ, ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ ಮಧ್ಯಾಹ್ನ 2 ಗಂಟೆಗೆ ಚತುರ್ವೀಧಿಗಳಲ್ಲಿ 'ರಥೋತ್ಸವ' ಜರುಗಿತು.

ರಥೋತ್ಸವದ ಜತೆಗೆ ಶ್ರೀ ಕ್ಷೇತ್ರದ ಬಸಪ್ಪ ಸೇರಿದಂತೆ ಕೆ.ಶೆಟ್ಟಹಳ್ಳಿ ಶ್ರೀ ಭೈರವೇಶ್ವರ ಸ್ವಾಮಿ ಮತ್ತು ಮಾರಮ್ಮ, ಬಿದರಹಳ್ಳಿ ಶ್ರೀ ಕಬ್ಬಾಳಮ್ಮ, ಮಾದರಹಳ್ಳಿ ಶ್ರೀ ಕಾಳಮ್ಮ, ಶ್ರೀ ದೇವಮ್ಮ ಹಾಗೂ ದೇಶಿ ಲಿಂಗಪ್ಪ ವಾಹನ, ಚಿಕ್ಕರಸಿನಕೆರೆ ಶ್ರೀ ಕಾಲಭೈರವೇಶ್ವರ ಸ್ವಾಮಿ ಪೂಜೆ ಮತ್ತು ಬಿರುದುಗಳು, ಅರೇಚಾಕನಹಳ್ಳಿ ಶ್ರೀ ಶಂಭುಲಿಂಗೇಶ್ವರ, ಕರಡಕೆರೆ ಶ್ರೀ ಆಂಜನೇಯ ಸ್ವಾಮಿಯ ಬಿರುದುಗಳು ಮತ್ತು ವೀರಗಾಸೆ ಕುಣಿತ, ಡೊಳ್ಳು ಕುಣಿತ ಪಾಲ್ಗೊಂಡಿದ್ದವು.

**ಮೆರಗು ತಂದ ಕಲಾತಂಡಗಳು:** ವೀರಗಾಸೆ, ಪೂಜಾಕುಣಿತ ರಥೋತ್ಸವದಲ್ಲಿ ಒಂದು ಜೊತೆ ವೀರಗಾಸೆ ತಂಡ ಹಾಗೂ ಪೂಜಾ ಕುಣಿತ ತಂಡ ತನ್ನ ಕಲಾ ಪ್ರದರ್ಶನದೊಂದಿಗೆ ನೋಡುಗರ ಮೈಮನ ಸೆಳೆಯುತ್ತಾ ರಥೋತ್ಸವಕ್ಕೆ ಮೆರಗು ನೀಡಿದವು.

**ಬಿಗಿ ಪೊಲೀಸ್ ಬಂದೋಬಸ್ತ್:** ಶ್ರೀ ಆತ್ಮಲಿಂಗೇಶ್ವರ ರಥೋತ್ಸವ ಹಿನ್ನಲೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಅನಿಲ್‌ಕುಮಾರ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನೀಡಲಾಗಿತ್ತು. ಈ ವೇಳೆ ರಥ ಸಾಗಿದ ದಾರಿಯೂದಕ್ಕೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಿದ್ದರು.



# 'ಬಾತ್‌ರೂಮ್ ಕ್ಯಾಂಪಿಂಗ್' –ಆರೋಗ್ಯದ ಸವಾಲುಗಳು

ಇತ್ತೀಚೆಗೆ ನಾನು ವೈದ್ಯರೊಬ್ಬರ ಪಾಡ್‌ಕಾಸ್ಟ್ (Podcast) ವೀಕ್ಷಿಸುತ್ತಿದ್ದಾಗ 'ಬಾತ್‌ರೂಮ್ ಕ್ಯಾಂಪಿಂಗ್' (Bathroom Camping) ಎಂಬ ವಿಭಿನ್ನ ಪದಪ್ರಯೋಗ ನನ್ನ ಗಮನ ಸೆಳೆಯಿತು. ಆ ಸಂದರ್ಶನದಲ್ಲಿ ಅವರು ಅತ್ಯಂತ ಆತಂಕಕಾರಿ ವಿಷಯವೊಂದನ್ನು ಹಂಚಿಕೊಂಡಿದ್ದರು: ಈ ಅಭ್ಯಾಸವು ಇಂದು ಸಮಾಜದಲ್ಲಿ ಪೈಲ್ಸ್ (Piles), ಫಿಸ್ಟುಲಾ (Fistula) ಮತ್ತು ಫಿಶರ್ (Fissure)ನಂತಹ ಗಂಭೀರ ಶಾರೀರಿಕ ಸಮಸ್ಯೆಗಳು ಹೆಚ್ಚಾಗಲು ಪ್ರಮುಖ ಕಾರಣವಾಗುತ್ತಿದೆ. ಈ ಕುತೂಹಲದಿಂದ ನಾನು ಈ ವಿಷಯದ ಬಗ್ಗೆ ಅಂತರ್ಜಾಲದಲ್ಲಿ

ಹುಡುಕಾಟ ನಡೆಸಿದಾಗ ಕಂಡಿದ್ದು , ಇದು ಕೇವಲ ಒಂದು ದೈಹಿಕ ಅಭ್ಯಾಸವಲ್ಲ, ಬದಲಾಗಿ ಇದೊಂದು ಜಾಗತಿಕ ಮಾನಸಿಕ ಮತ್ತು ಸಾಮಾಜಿಕ ವಿದ್ಯಮಾನ ಎಂಬುದು ತಿಳಿದುಬಂದಿತು. ನನಗೆ

ಗೊತ್ತಾದ ಕೆಲವು ಪ್ರಮುಖ ಅಂಶಗಳನ್ನು ಇಲ್ಲಿ ಹಂಚಿಕೊಂಡಿದ್ದೇನೆ.

1. ವಿದ್ಯಮಾನದ ವ್ಯಾಖ್ಯಾನ ಮತ್ತು ವ್ಯಾಪ್ತಿ
'ಬಾತ್‌ರೂಮ್ ಕ್ಯಾಂಪಿಂಗ್' ಎಂದರೆ ಶೌಚಾಲಯದ ಅಗತ್ಯ ಮುಗಿದ ನಂತರವೂ ಕೇವಲ ಏಕಾಂತಕ್ಕಾಗಿ ಅಥವಾ ಸ್ಮಾರ್ಟ್‌ಫೋನ್ ಬಳಸುವ ಉದ್ದೇಶದಿಂದ ಅಲ್ಲಿಯೇ ದೀರ್ಘಕಾಲ ಕುಳಿತುಕೊಳ್ಳುವ ಪ್ರವೃತ್ತಿ.
2. ಶಾರೀರಿಕ ಪರಿಣಾಮಗಳು: ವೈದ್ಯಕೀಯ ವಿಶ್ಲೇಷಣೆ
ವೈದ್ಯಕೀಯ ಸಂಶೋಧನೆಗಳ ಪ್ರಕಾರ, ಕಮೋಡ್ ಮೇಲೆ ಕುಳಿತುಕೊಳ್ಳುವ ಭಂಗಿಯು ನೈಸರ್ಗಿಕವಾಗಿ ಶೌಚ ಕ್ರಿಯೆಗೆ ಪೂರಕವಾಗಿರುತ್ತದೆಯೇ ಹೊರತು ದೀರ್ಘಕಾಲದ ವಿಶ್ರಾಂತಿಗಲ್ಲ.

* ಗುದನಾಳದ ಮೇಲಿನ ಒತ್ತಡ: ದೀರ್ಘಕಾಲ ಕುಳಿತುಕೊಳ್ಳುವುದರಿಂದ ಗುರುತ್ವಾಕರ್ಷಣೆಯ ಪ್ರಭಾವ ಮತ್ತು ದೇಹದ ಒತ್ತಡವು ಗುದನಾಳದ ರಕ್ತನಾಳಗಳ ಮೇಲೆ ಬೀಳುತ್ತದೆ. ಇದು ರಕ್ತನಾಳಗಳು ಊದಿಕೊಳ್ಳಲು



(Hemorrhoids/Piles) ಕಾರಣವಾಗುತ್ತದೆ.

* ಫಿಶರ್ ಮತ್ತು ಫಿಸ್ಟುಲಾ: ಚರ್ಮದ ಮೃದುತ್ವಕ್ಕೆ ಹಾನಿಯಾಗಿ ಸಣ್ಣ ಸೀಳುಗಳು (ಈಖಣಡಿಜ) ಉಂಟಾಗಬಹುದು, ಇದು ಕಾಲಕ್ರಮೇಣ ಸೋಂಕಾಗಿ ಫಿಸ್ಟುಲಾಗೆ ತಿರುಗುವ ಅಪಾಯವಿರುತ್ತದೆ.
* ನರಗಳ ದೌರ್ಬಲ್ಯ: ಕಾಲುಗಳಿಗೆ ರಕ್ತ ಪೂರೈಸುವ ನರಗಳು ಒತ್ತಲ್ಪಟ್ಟಾಗ ಕಾಲಿನಲ್ಲಿ ಜುಮ್ಮೆನ್ನುವಿಕೆ ಅಥವಾ ಮರಗಟ್ಟುವಿಕೆ (Numbness) ಕಾಣಿಸಿಕೊಳ್ಳುತ್ತದೆ.

3. ಮಾನಸಿಕ ಮತ್ತು ಸಾಮಾಜಿಕ ಕಾರಣಗಳು (Root Causes)

ಈ ಅಭ್ಯಾಸದ ಹಿಂದೆ ಮೂರು ಮುಖ್ಯ ಕಾರಣಗಳಿವೆ:

1. ಡಿಜಿಟಲ್ ಆಶ್ರಯ (Digital Sanctuary): ಮನೆಯ ಇತರ ಭಾಗಗಳಲ್ಲಿ ನಾವು ಸಾಮಾಜಿಕವಾಗಿ ಲಭ್ಯವಿರುತ್ತೇವೆ. ಆದರೆ ಶೌಚಾಲಯವು 'ಡೋಂಟ್ ಡಿಸ್ಟರ್ಬ್' ವಲಯವಾಗಿರುವುದರಿಂದ, ಜನರು ತಮ್ಮ ಸ್ಮಾರ್ಟ್‌ಫೋನ್‌ಗಳ ಮೂಲಕ ಹೊರಜಗತ್ತಿನೊಂದಿಗೆ ಸಂಪರ್ಕ ಹೊಂದಲು ಈ ಜಾಗವನ್ನು ಆರಿಸಿಕೊಳ್ಳುತ್ತಾರೆ.
2. ಪಲಾಯನವಾದ (Escapism): ಸಾಮಾಜಿಕ ಜವಾಬ್ದಾರಿಗಳು ಅಥವಾ ಕಚೇರಿಯ ಒತ್ತಡದಿಂದ ತಾತ್ಕಾಲಿಕವಾಗಿ ತಪ್ಪಿಸಿಕೊಳ್ಳಲು 'ಬಾತ್‌ರೂಮ್ ಕ್ಯಾಂಪಿಂಗ್' ಒಂದು ಸುಲಭದ ದಾರಿಯಾಗಿದೆ.
3. ಅರಿವಿನ ಕೊರತೆ: ಅನೇಕರಿಗೆ ಈ ಅಭ್ಯಾಸವು ದೈಹಿಕವಾಗಿ ಹಾನಿಕಾರಕ ಎಂಬ ಕನಿಷ್ಠ ಜ್ಞಾನವೂ ಇರುವುದಿಲ್ಲ.

4. ಪರಿಹಾರಗಳು :

1. ಶೌಚಾಲಯದ ಬಳಕೆಯಲ್ಲಿ ಶಿಸ್ತು (Toilet Hygiene & Discipline)
* 'ನೋ ಸ್ಮಾರ್ಟ್‌ಫೋನ್' ವಲಯ: ಶೌಚಾಲಯಕ್ಕೆ ಫೋನ್, ಟ್ಯಾಬ್ಲೆಟ್ ಅಥವಾ ಯಾವುದೇ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನು ಕೊಂಡೊಯ್ಯುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಿ. ಇದು ಸಮಯದ ಅರಿವನ್ನು ಹೆಚ್ಚಿಸುತ್ತದೆ.
* ಟೈಮರ್ ಬಳಕೆ: ಒಂದು ವೇಳೆ ನಿಮಗೆ ಸಮಯದ ಪ್ರಜ್ಞೆ ತಪ್ಪುತ್ತಿದ್ದರೆ, ಆರಂಭದ ದಿನಗಳಲ್ಲಿ ಫೋನ್‌ನಲ್ಲಿ 5 ರಿಂದ 10 ನಿಮಿಷಗಳ ಅಲಾರಾಂ ಇರಿಸಿ ಶೌಚಾಲಯದ ಹೊರಗೆ ಇಡಿ.
* ಅಗತ್ಯಕ್ಕೆ ಮಾತ್ರ ಸೀಮಿತ: ಶೌಚಾಲಯವು ಕೇವಲ ದೈಹಿಕ ಅಗತ್ಯಕ್ಕಾಗಿಯೇ ಹೊರತು ವಿಶ್ರಾಂತಿಗಲ್ಲ ಎಂಬ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ.

2. ಮಾನಸಿಕ ವಿಶ್ರಾಂತಿಗಾಗಿ ಪರ್ಯಾಯ ಮಾರ್ಗಗಳು (Alternative Relaxation)
* 'ಸೈಲೆಂಟ್ ಕಾರ್ನರ್' ಸೃಷ್ಟಿಸಿ: ಮನೆಯ ಒಂದು ಮೂಲೆಯಲ್ಲಿ ಕೇವಲ ವಿಶ್ರಾಂತಿಗಾಗಿ ಒಂದು ಆರಾಮದಾಯಕ ಕುರ್ಚಿ ಅಥವಾ ಮ್ಯಾಟ್ ಹಾಕಿ. ಅಲ್ಲಿ ದಿನಕ್ಕೆ 15 ನಿಮಿಷ ಫೋನ್ ಇಲ್ಲದೆ ಕುಳಿತುಕೊಳ್ಳಿ. ಇದು ಶೌಚಾಲಯದ ಮೇಲಿನ ಅವಲಂಬನೆಯನ್ನು ತಪ್ಪಿಸುತ್ತದೆ.
* ಗಾಢ ಉಸಿರಾಟ (Deep Breathing): ಒತ್ತಡವೆನಿಸಿದಾಗ ಶೌಚಾಲಯಕ್ಕೆ ಓಡುವ ಬದಲು, ಇದ್ದ ಜಾಗದಲ್ಲೇ ಕಣ್ಣು ಮುಚ್ಚಿ 5–10 ಬಾರಿ ದೀರ್ಘವಾಗಿ ಉಸಿರಾಡಿ. ಇದು ಮೆದುಳನ್ನು ತಕ್ಷಣ ಶಾಂತಗೊಳಿಸುತ್ತದೆ.

3. ದೈಹಿಕ ಆರೋಗ್ಯ ಮತ್ತು ಆಹಾರ ಕ್ರಮ (Physical Health & Diet)
* ನಾರಿನಂಶವಿರುವ ಆಹಾರ (High Fiber Diet): ಮಲಬದ್ಧತೆ ಉಂಟಾದಾಗ ಜನರು ಶೌಚಾಲಯದಲ್ಲಿ ಹೆಚ್ಚು ಸಮಯ ಕಳೆಯಬೇಕಾಗುತ್ತದೆ. ನಿಮ್ಮ ಆಹಾರದಲ್ಲಿ ಹಣ್ಣುಗಳು, ತರಕಾರಿ ಮತ್ತು ಧಾನ್ಯಗಳನ್ನು ಹೆಚ್ಚಿಸಿ. ಇದು ಶೌಚ ಪ್ರಕ್ರಿಯೆಯನ್ನು ಸುಲಭ ಮತ್ತು ವೇಗವಾಗಿಸುತ್ತದೆ.
* ಹೆಚ್ಚು ನೀರು ಕುಡಿಯಿರಿ (Hydration): ದಿನವಿಡೀ ಸಾಕಷ್ಟು ನೀರು ಕುಡಿಯುವುದರಿಂದ ಜೀರ್ಣಕ್ರಿಯೆ ಸುಧಾರಿಸುತ್ತದೆ ಮತ್ತು ದೈಹಿಕ ಒತ್ತಡ ಕಡಿಮೆಯಾಗುತ್ತದೆ.
* ದೈಹಿಕ ಚಟುವಟಿಕೆ: ದಿನಕ್ಕೆ ಕನಿಷ್ಠ 20 ನಿಮಿಷ ನಡಿಗೆ ಅಥವಾ ಯೋಗ ಮಾಡುವುದರಿಂದ ಕರುಳಿನ ಚಲನೆ (Bowel Movement) ಸುಗಮವಾಗುತ್ತದೆ.

4. ಡಿಜಿಟಲ್ ಡಿಟಾಕ್ಸ್ (Digital Detox)
* ನೋಟಿಫಿಕೇಶನ್ ನಿಯಂತ್ರಣ: ಅನಗತ್ಯ ನೋಟಿಫಿಕೇಶನ್‌ಗಳನ್ನು ಆಫ್ ಮಾಡಿ. ಸದಾ ಬರುವ ಮೆಸೇಜ್‌ಗಳಿಂದ ತಪ್ಪಿಸಿಕೊಳ್ಳಲು ನಾವು ಏಕಾಂತ ಹುಡುಕುತ್ತೇವೆ. ನೋಟಿಫಿಕೇಶನ್ ಕಡಿಮೆಯಾದಷ್ಟೂ ನಿಮ್ಮ ಏಕಾಂತದ ಹಸಿವು ಕಡಿಮೆಯಾಗುತ್ತದೆ
* ಮಲಗುವ ಮುನ್ನ ಫೋನ್ ದೂರವಿಡಿ: ರಾತ್ರಿ ಮಲಗುವ ಒಂದು ಗಂಟೆ ಮೊದಲು ಡಿಜಿಟಲ್ ಪರದೆಯಿಂದ ದೂರವಿರುವುದು ನಿಮ್ಮ ಮೆದುಳಿಗೆ ಉತ್ತಮ ವಿಶ್ರಾಂತಿ ನೀಡುತ್ತದೆ.

5. ಸಂವಹನ ಮತ್ತು ಗಡಿಗಳು (Communication & Boundaries)
* ಖಾಸಗಿ ಸಮಯದ ಬೇಡಿಕೆ: ನಿಮ್ಮ ಕುಟುಂಬ ಸದಸ್ಯರಿಗೆ "ನನಗೆ ದಿನಕ್ಕೆ 15 ನಿಮಿಷಗಳ ಕಾಲ ತೊಂದರೆ ಕೊಡಬೇಡಿ, ನಾನು ವಿಶ್ರಾಂತಿ ಪಡೆಯಬೇಕು" ಎಂದು ನೇರವಾಗಿ ಹೇಳಿ. ನಿಮ್ಮ ವೈಯಕ್ತಿಕ ಗಡಿಗಳನ್ನು ಗುರುತಿಸಿಕೊಳ್ಳುವುದರಿಂದ ನೀವು ಶೌಚಾಲಯದಲ್ಲಿ ಅಡಗಿಕೊಳ್ಳುವ ಅವಶ್ಯಕತೆ ಬರುವುದಿಲ್ಲ.

ಬಾತ್‌ರೂಮ್ ಕ್ಯಾಂಪಿಂಗ್ ಎನ್ನುವುದು ಕೇವಲ ಒಂದು ಕೆಟ್ಟ ಅಭ್ಯಾಸವಲ್ಲ, ಅದು ನಮ್ಮ ಜೀವನದ ಒತ್ತಡದ ಸಂಕೇತ. ಈ ಮೇಲಿನ ಸಣ್ಣ ಬದಲಾವಣೆಗಳು ನಿಮ್ಮನ್ನು ಪೈಲ್ಸ್ ಮತ್ತು ಫಿಸ್ಟುಲಾದಂತಹ ಗಂಭೀರ ಕಾಯಿಲೆಗಳಿಂದ ರಕ್ಷಿಸುವುದು ಮಾತ್ರವಲ್ಲದೆ, ನಿಮ್ಮ ಮಾನಸಿಕ ಆರೋಗ್ಯವನ್ನೂ ಸುಧಾರಿಸುತ್ತದೆ.

ಈ ಬದಲಾವಣೆಗಳಲ್ಲಿ ಯಾವುದಾದರೂ ಒಂದನ್ನು ಇಂದಿನಿಂದಲೇ ಪ್ರಾರಂಭಿಸಿ ನೋಡಿ!



। ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,